ಪುಸ್ತಕ ಪ್ರಪಂಚ

ಸಂಪುಟ ೩೯ ೧೯೮೪ ಆಗಸ್ಟ್ ಸಂಚಿಕೆ ೧



ವಿ ಷ ಯ ಸೂ ಚಿ

ಮುಖಚಿತ್ರ : ಮಾಸ್ತಿ ವೆಂಕಟೇಶ ಐಯ್ಯಂಗಾರ್

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೨೯ ಆಗಸ್ಟ್ ೧೯೮೪ ಸಂಚಿಕೆ ೧

ಮಾಸ್ತಿಯವರ ಪ್ರಥಮ ಸಂದರ್ಶನ

೧೯೩೭ರ ತರುಣದಲ್ಲಿ ನನಗೆ ಮಾಸ್ತಿಯವರನ್ನು ಕಂಡು ಮೊತ್ತಮೊದಲು ಮಾತನಾಡುವ ಸದವಕಾಶ ಉಂಟಾಯಿತು. ಅವರು ಬೆಂಗಳೂರಿನ ಗವಿಪುರ ಬಡಾವಣೆಯ ಯಾವ ಬೀದಿಯಲ್ಲಿ ನೆಲಸಿರುವರೋ ಅದೇ ಬೀದಿಯಲ್ಲಿ ನಾನೂ ಸಹ ನಮ್ಮ ಸೋದರಮಾವನ ಮನೆಯಲ್ಲಿ ಬೆಳೆದವನು. ಮಾಸ್ತಿಯವರ ಮನೆಯ ಎಡಭಾಗದಲ್ಲಿಯೇ ನಮ್ಮ ದೊಡ್ಡಮ್ಮನ ಮನೆ. ಆಗ ನಾನು ಪ್ರೌಢ ಶಾಲೆಯಲ್ಲಿ ಓದುತ್ತಿದ್ದೆ. ಮಾಸ್ತಿಯವರನ್ನು ಸಣ್ಣ ಕತೆಗಳ 'ಶ್ರೀನಿವಾಸ' ಎಂದು ಎಲ್ಲರೂ ಮೆಚ್ಚಿಕೊಂಡಿದ್ದರು. ಅವರು ಅಂದಿನ ಮೈಸೂರಿನ ಘನ ಸರ್ಕಾರದ ಉನ್ನತ ಅಧಿಕಾರಿಗಳಲ್ಲಿ ಒಬ್ಬರಾಗಿದ್ದುದರಿಂದ ನಮಗೆ ಅವರನ್ನು ಕಂಡರೆ ಪೂಜ್ಯಭಾವನೆ ಸಹಜವಾಗಿತ್ತು. ನನಗಾದರೋ ಆಧುನಿಕ ಕನ್ನಡದ ಕವಿಗಳಲ್ಲಿ ಒಬ್ಬರಾಗಿದ್ದ ಮಾಸ್ತಿಯವರ ಕವಿತೆಗಳಲ್ಲಿ ತುಂಬ ಆಸಕ್ತಿ. ನಾನೂ ಸಹ ಆಗಿಂದಾಗ್ಗೆ ಕವಿತೆಗಳನ್ನು ಬರೆಯಲು ಪ್ರಯತ್ನಿಸುತ್ತಿದ್ದುದರಿಂದ, ಮಾಸ್ತಿಯವರ ಕವಿತೆಗಳಲ್ಲಿ ಹೆಚ್ಚು ಒಲವು. ಅವರ ಮೊತ್ತಮೊದಲನೆಯ ಕವನ ಸಂಕಲನವಾದ "ತಾವರೆ" ಯಲ್ಲಿರುವ "ಮಾಂಬಿ" ಎಂಬ ಕವಿತೆಯನ್ನು ಎಷ್ಟು ಓದಿದರೂ ತೃಪ್ತಿಯಾಗದು. ನಾನು ಅದನ್ನು ಅನೇಕರಿಗೆ ಓದಿ ಹೇಳಿ ನಾಯಿಯೊಂದರ ಬಗ್ಗೆ ಕವಿಗಳು ತೋರಿರುವ ಪ್ರೀತಿ, ದಯೆ, ಅದರ ಸಾವಿನ ಬಗ್ಗೆ ಆದ ಸಂತಾಪ ಮೊದಲಾದವುಗಳನ್ನು ಬಿಡಿಸಿ ಬಿಡಿಸಿ ತಿಳಿಸುತ್ತಿದ್ದೆ. ಹೀಗೆಯೇ ಅವರ "ಚೆಲುವು" ಎಂಬ ಸಂಕಲನದಲ್ಲಿರುವ "ಮುರಿದು ಬಿದ್ದ ವೀರ ಕಲ್ಲು" "ಚಿಕ್ಕ ಮಲ್ಲಮ್ಮ" ಮೊದಲಾದವೂ ಅಷ್ಟೇ ಪ್ರಿಯವೆನಿಸಿದುವು. "ಪ್ರಬುದ್ಧ ಕರ್ಣಾಟಕ" ದಲ್ಲಿ ಮೊದಲು ಬೆಳಕು ಕಂಡ ಅವರ ಕೆಲವು ಚೌದಶ ಪದಿಗಳನ್ನು, ಪ್ರಾಯೋಗಿಕ ದೃಷ್ಟಿಯಿಂದ ತುಂಬ ಮೆಚ್ಚುವಂತಾಯಿತು. (ಆ

ಬಳಿಕ 'ಮಲಾರ' ಎಂಬ ಚೌದಶಪದಿಗಳ ಸಂಕಲನ ಪ್ರಕಟವಾಯಿತು.) ಹೊಸಗನ್ನಡ ಸಾಹಿತ್ಯದ ಪ್ರಮುಖ ಸಾಹಿತಿಗಳೊಬ್ಬರು ನಮ್ಮ ಬೀದಿಯಲ್ಲಿಯೇ ಇರುವರೆಂಬ ಹೆಮ್ಮೆ, ಒಮ್ಮೊಮ್ಮೆ ಉಕ್ಕುತ್ತಿತ್ತು. ಅವರ ಜೊತೆಯಲ್ಲಿ ಆಗಿಂದಾಗ್ಗೆ ಬರುತ್ತಿದ್ದ ಕರ್ನಾಟಕದ ಇತರ ಸಾಹಿತಿಗಳನ್ನೂ ದೂರದಿಂದಲೇ ನೋಡುವ ಸೌಭಾಗ್ಯವೂ ನನ್ನದಾಗಿತ್ತು. ಇಷ್ಟಾದರೂ ವಿದ್ಯಾರ್ಥಿಯಾಗಿದ್ದ ನನಗೆ ಅವರನ್ನು ಮುಖತಃ ಕಂಡು ಮಾತನಾಡಿಸುವಷ್ಟು ಧೈರ್ಯವಿರಲಿಲ್ಲ.

ನನ್ನ ಸಣ್ಣಪುಟ್ಟ ಕವನಗಳು ಅಂದಿನ ಕೆಲವು ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗಲಾರಂಭಿಸಿದವು. ಬೆಂಗಳೂರಿನ "ಅಮೆಚೂರು ನಾಟಕ ಸಂಘ"ದ ಮುಖಪತ್ರಿಕೆಯಾಗಿದ್ದ "ರಂಗಭೂಮಿ" ಯಲ್ಲಿ ನನ್ನ ಅನೇಕ ಕವಿತೆಗಳು ಮುದ್ರಣಗೊಂಡುವು. ಒಮ್ಮೆ, "ಲಾಲಬಾಗಿನ ಬಂಡೆಯ ಮೇಲೆ" ಎಂಬ ಒಂದು ಕವಿತೆ ಆ ಪತ್ರಿಕೆಯಲ್ಲಿ ಪ್ರಕಟವಾಯಿತು ("ರಂಗಭೂಮಿ", ಸಂಪುಟ XI, ಸಂಚಿಕೆ ೧, ಸೆಪ್ಟೆಂಬರ್ ೧೯೩೭, ಪು. ೪), ಆ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಮಾಸ್ತಿಯವರೂ ಒಬ್ಬರಾಗಿದ್ದುದರಿಂದ ಆ ಕವಿತೆಯ ಕಡೆ ಅವರ ಗಮನ ಹರಿಯಿತು. ಅದನ್ನು ಬರೆದವರು ಯಾರಿರಬಹುದೆಂಬ ಕುತೂಹಲ ಕೆರಳಿ, ಅವರು ಶ್ರೀಮಾನ್ "ವಿ.ಸೀ." ಅವರನ್ನು ಕೇಳಿದುದಾಗಿ ತಿಳಿದುಬಂದಿತು. ಆಗ, ನಾನು ಇಂಟರ್‌ಮೀಡಿಯೆಟ್ ಕಾಲೇಜಿನ ವಿದ್ಯಾರ್ಥಿಯಾಗಿದ್ದುದರಿಂದ ನನ್ನ ಗುರುಗಳಾದ ವಿ.ಸೀ. ಅವರ ಪರಿಚಯ ಸಾಕಷ್ಟು ಚೆನ್ನಾಗಿಯೇ ಆಗಿತ್ತು. ಆಗಿಂದಾಗ್ಗೆ ಅವರಿಗೆ ನನ್ನ ಕವಿತೆಗಳನ್ನು ತೋರಿಸಿ, ಸಲಹೆ ಸೂಚನೆಗಳನ್ನು ಪಡೆಯುತ್ತಿದ್ದೆ. ಆದ್ದರಿಂದ, ವಿ.ಸೀ. ಅವರು ಆ ಕವಿತೆಯ ಕರ್ತೃವಾದ ನಾನು ಕಾಲೇಜಿನ ವಿದ್ಯಾರ್ಥಿಯೆಂದು ತಿಳಿಸಲು, ಆಗ ಮಾಸ್ತಿಯವರಿಗೆ ಮತ್ತಷ್ಟು ಸಂತೋಷವಾಯಿತೆಂದು ವದಂತಿ.

ಒಮ್ಮೆ, ಪರಿಷತ್ತಿನಲ್ಲಿ ನಡೆದ ಯಾವುದೋ ಸಮಾರಂಭಕ್ಕೆ ಮಾಸ್ತಿಯವರು ಅಧ್ಯಕ್ಷರಾಗಿದ್ದರು. ಆ ಸಭೆಗೆ "ವಿ.ಸೀ." ಅವರೂ ಬಂದಿದ್ದರು. ಪರಿಷತ್ತಿನ ಯಾವ ಸಭೆಯನ್ನೂ ತಪ್ಪಿಸಿಕೊಳ್ಳದ ನಾನೂ ಸಹ ಹೋಗಿದ್ದೆ. ಆ ಸಮಾರಂಭವೆಲ್ಲ ಮುಗಿದ ಬಳಿಕ, "ವಿ.ಸೀ." ಅವರನ್ನು ಕಂಡು ಕೈಮುಗಿದೆ. ಆಗ, ಅವರು ಕೂಡಲೇ ತಮ್ಮ ಜೊತೆಯಲ್ಲಿದ್ದ ಮಾಸ್ತಿ ಅವರಿಗೆ ನನ್ನನ್ನು ಪರಿಚಯ ಮಾಡಿಕೊಟ್ಟರು. ಆಗ ಮಾಸ್ತಿಯವರು ಅತ್ಯಂತ ಅಭಿಮಾನದಿಂದ ತಾವು ಮೆಚ್ಚಿಕೊಂಡಿದ್ದ ಕವಿತೆಯ ಗುಣಗಳನ್ನೆಲ್ಲ ತಿಳಿಸಿ, ಅಂತೆಯೇ ಮುಂದುವರಿಸಬೇಕೆಂದು ಹುರಿದುಂಬಿಸಿದರು. ಬಳಿಕ ನನ್ನ ಸ್ವಂತ ವಿಚಾರಗಳ ಕಡೆಗೂ ಮಾತು ಹೊರಳಿತು.

ಆಗ ನಾನು ಅವರಿದ್ದ ಬೀದಿಯಲ್ಲಿಯೇ ಇರುವೆನೆಂದು ತಿಳಿಸಿದೆ. ಅದನ್ನು ಕೇಳಿದ ಮೇಲಂತೂ ಅವರು ತುಂಬ ಆನಂದಿಸಿ, ನನ್ನನ್ನು ಇನ್ನೂ ಆತ್ಮೀಯ ವಾಗಿ ಕಂಡು, ತಮ್ಮ ಮನೆಗೆ ಬರುವಂತೆ ಹೇಳಿದರು. ಹಿರಿಯ ಸಾಹಿತಿ ಗಳೊಬ್ಬರು, ಆಗ ತಾನೆ ಸಾಹಿತ್ಯ ಕ್ಷೇತ್ರದಲ್ಲಿ ಅಂಬೆಗಾಲಿಡುತ್ತಿದ್ದ ನನ್ನಂತಹ ವಿದ್ಯಾರ್ಥಿಯನ್ನು ಅಷ್ಟು ಅಭಿಮಾನದಿಂದ ಕಂಡುದನ್ನು ನಾನು ಇಂದಿಗೂ ಮರೆಯಲಾರೆ. ಮಾಸ್ತಿಯವರು ಇದೇ ರೀತಿ ಅನೇಕ ತರುಣರಿಗೆ ಉತ್ತೇಜನ ವಿತ್ತಿದ್ದ ಪ್ರಸಂಗಗಳನ್ನು ನಾನು ಕೇಳಿದ್ದೆ. ಆಗ ಪುಂಕಾನುಪುಂಕವಾದ ಪದ್ಯ ಗಳನ್ನು ಬರೆಯುತ್ತಿದ್ದ ನನ್ನ ಹಿರಿಯ ಮಿತ್ರರಾಗಿದ್ದ ಜಿ. ವಾಸುದೇವರಾವ್ ಅವರ ಕವಿತೆಗಳನ್ನು ಮೆಚ್ಚಿ, ತಮ್ಮ ಮನೆಗೆ ಬರಮಾಡಿಕೊಂಡು ಕೊಂಡಾಡಿ ದ್ದನ್ನು ನಾನು ಚೆನ್ನಾಗಿ ಬಲ್ಲೆ. ಅವರು ಆ ಕಾಲದಲ್ಲಿ ತಮ್ಮ ಮಿತ್ರರಲ್ಲಿ ಕೆಲವರಿಂದ ಹಣವನ್ನು ಸಂಗ್ರಹಿಸಿ, ಆ ಮೂಲಕ ಕೆಲವು ಮಿತ್ರರ ಗ್ರಂಥಗಳನ್ನು ಪ್ರಕಟಿಸಿ ಪ್ರೋತ್ಸಾಹವೀಯುತ್ತಿದ್ದರು. ದ. ರಾ. ಬೇಂದ್ರೆಯವರ "ಗರಿ" ಎಂಬ ಕವನ ಸಂಕಲನದ ಮೊತ್ತ ಮೊದಲ ಮುದ್ರಣ ಈ ರೀತಿಯಲ್ಲಿ ಆಯಿತೆಂದು ಆ ಪುಸ್ತಕದಲ್ಲಿರುವ ಮಾತಿನ ಮೂಲಕವೇ ತಿಳಿದುಬರುತ್ತದೆ. ಅಲ್ಲಿ ಮಾಸ್ತಿಯವರು ತಮಗೆ ನೆರವಿತ್ತ ಮಿತ್ರರ ಹೆಸರುಗಳನ್ನೂ ಸೂಚಿಸಿರು ತ್ತಾರೆ. ಆದ್ದರಿಂದ, ಮಾಸ್ತಿಯವರು ಸ್ವತಃ ಲೇಖಕರಾಗಿ ಪ್ರಗತಿಯನ್ನು ಸಾಧಿಸಿದುದಲ್ಲದೆ, ಇತರ ಅನೇಕ ಸಾಹಿತಿಗಳಿಗೂ ಅವಕಾಶವನ್ನು ಕಲ್ಪಿಸಿಕೊಟ್ಟ ಶ್ರೇಯಸ್ಸಿಗೂ ಭಾಜನರಾಗಿದ್ದಾರೆ. ಈ ಮನೋವೃತ್ತಿಯಿದ್ದುದರಿಂದಲೇ, ಇದೀಗ ತಮಗೆ ದೊರೆತಿರುವ ಜ್ಞಾನಪೀಠ ಪ್ರಶಸ್ತಿಯ ಮೊಬಲಗಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಇತರ ಕನ್ನಡ ಲೇಖಕರ ಗ್ರಂಥ ಪ್ರಕಟನೆಗೆ ಮೀಸಲಾ ಗಿಡುವ ಭಾವನೆ ಬರಲು ಅವರಿಗೆ ಸಾಧ್ಯವಾಯಿತು!

ನನ್ನ ಕವಿತೆಗಳಲ್ಲಿ "ಲಾಲಬಾಗಿನ ಬಂಡೆಯ ಮೇಲೆ" ಎಂಬ ಕವಿತೆ ಅವರ ಮನಸ್ಸನ್ನು ಸೆಳೆದುದಕ್ಕೆ ಕಾರಣವಿಲ್ಲದೆ ಇಲ್ಲ. ಅವರ "ತಾವರೆ" ಎಂಬ ಸಂಕಲನ ದಲ್ಲಿರುವ ಇತರ ಕವಿತೆಗಳಲ್ಲಿ "ಹನುಮನಗಿರಿ" ಎಂಬ ಕವಿತೆ ನನ್ನ ಮನಸ್ಸನ್ನು ಬಹಳಷ್ಟು ಮಟ್ಟಿಗೆ ಆಕರ್ಷಿಸಿತು. ಈಗ ಬೆಂಗಳೂರಿನ ಸುಪ್ರಸಿದ್ಧ ಬಡಾವಣೆ ಗಳಲ್ಲಿ ಒಂದಾಗಿರುವ ಹನುಮಂತನಗರದಲ್ಲಿರುವ "ಹನುಮಾನ್ ಗುಡ್ಡ"ವೇ ಈ ಕವಿತೆಯ ವಸ್ತು. ಆಗ ಅದು ಅತ್ಯಂತ ನಿರ್ಜನ ಪ್ರದೇಶವಾಗಿತ್ತು. ಹಗಲ ಹೊತ್ತಿನಲ್ಲಿಯೇ ಅಲ್ಲಿಗೆ ಹೋಗಿಬರಲು ಹೆದರಿಕೆಯಾಗುತ್ತಿತ್ತು. ಮಾಸ್ತಿಯವರು ಪ್ರಾತಃಕಾಲದಲ್ಲಿ, ವಾಯುವಿಹಾರಕ್ಕೆಂದು ಅಲ್ಲಿಗೆ ಹೋಗಿ ಬರುತ್ತಿದ್ದುದನ್ನು

ನಾನು ಬಲ್ಲೆ. ಅದರೊಂದಿಗೆ ಅವರ ಸಂಬಂಧ ಎಷ್ಟು ಆತ್ಮೀಯವಾಗಿತ್ತೆನ್ನುವುದನ್ನು ಹತ್ತೊಂಬತ್ತು ಪದ್ಯಗಳಿರುವ ಈ ಕವಿತೆಯಲ್ಲಿ ಕಾಣಬಹುದು. ಈ ಕವಿತೆಯ ಆರಂಭದಲ್ಲಿಯೇ ಅವರ ಅಭಿಮಾನ ವ್ಯಕ್ತವಾಗುತ್ತದೆ.

ಹನುಮನಗಿರಿಯೆ ಸೊಗಸಿನನೆಲೆಯೆ
ಎನಿತೀ ನಿನ್ನಯ ಸೊಗಸೆನಿತು ;
ಎನಿತೀ ನಿನ್ನಯ ಶಾಂತಿಯ ತನಿರಸ
ಎನಿತೀ ನಿನ್ನಯ ವಿಮಲತೆಯು
ನಿನ್ನನು ನೋಡಿದ ಮೊದಲಲೆ ನಾನು
ಸೋತೆನು ನಿನ್ನೀ ಗುಣಗಳಿಗೆ
ನನ್ನಯ ಸಖ್ಯವನಾಶಿಸಿ ನಿನ್ನನು
ಪ್ರೀತಿಸಿ ಬಳಿಯನು ಸಾರಿದೆನು

ಅನಂತರ ಆ ಗುಡ್ಡದ ಅಕ್ಕಪಕ್ಕಗಳಲ್ಲಿರುವ ಕೆಲವು ಸ್ಥಳಗಳ ಸ್ವರೂಪವನ್ನೂ ನಿರ್ದೇಶಿಸಿರುವರು.

ಭುಜದಲಿ ನಿಂದು ಈ ಕಡೆ ನೋಳ್ಪೆನೆ
ನೂರರ ಸಾವಿರದಲಿ ನೆರೆದ
ಪ್ರಜೆಯನು ಪೊರೆಯುವ ನಗರವು ದಿಕ್ಕಿನ
ಮೇರೆಗೆ ಹಬ್ಬಿದೆ ; ಈ ಕಡೆಗೆ
ತಳಿರಿನ ಮರಗಳ ದೂರದ ಊರ್ಗಳ
ದಾರಿಯ ಗುರುತಿನ ಸಿಂಗರದಿ
ಮೆಲುಮೆಲನಿಳಿಯುತ ಮೆರುಮೆಲನೇಳುತ
ಮೇರೆಗೆ ಹರಡಿದೆ ಹೊಲ ಬಯಲು

ಹೀಗೆಯೇ ಮುಂದುವರಿದು, ಗುಡ್ಡದ ಮೇಲಿರುವ ಹನುಮಂತನ ಗುಡಿಯನ್ನು ಕಂಡಾಗ, ಕವಿಗಳ ಪೂಜ್ಯಭಾವನೆ ಪ್ರಕಟವಾಗುತ್ತದೆ.

ನೀನೇ ಪಾವನ ; ಶಿರದಲಿ ಹನುಮನ
ಧರಿಸುತೆ ಪಾವನತೆಯ ಮುಡಿಸಿ
ನಾನು ಕ್ರೋಶದಿ ಕೊಡುತಿಹೆ ಸಾರುವ
ಕರಗಿದ ಹೃದಯಕೆ ಶಾಂತಿಯನು
ಹಿಮಗಿರಿ ಹಿರಿದು, ವಿಂಧ್ಯವು ಹಿರಿದು,
ಆದರೆ ಅವು ಸರಿ ಹಿರಿಯರಿಗೆ
ವಿಮಲನೆ ಅಲ್ಲದೆ ಸುಲಭನು ಆಗಿ
ಸೋದರ ನೀನಹೆ ಕಿರಿಯರಿಗೆ

ಇಂಥ ಸರಳವೂ, ಸುಂದರವೂ, ಸಹಜವೂ ಆದ ಕವಿತೆ ನನ್ನ ಮನಸ್ಸಿಗೆ ಒಪ್ಪಿಗೆಯಾದುದೇನೂ ಹೆಚ್ಚಲ್ಲ. ಆ ಸ್ಥಳವನ್ನು ಕಣ್ಣಾರೆ ಕಂಡಿದ್ದರಿಂದ, ಅದರ ಮೇಲಿನ ಅದರ ಇಮ್ಮಡಿಯಾಯಿತೆನ್ನಬಹುದು.

"ಲಾಲಬಾಗಿನ ಬಂಡೆಯ ಮೇಲೆ" ಎಂಬ ನನ್ನ ಕವಿತೆಗೆ ಮಾಸ್ತಿಯವರ ಈ ಕವನವೇ ಪ್ರೇರಣೆಯೆಂದು ಹೇಳಲು ನಾನು ಹಿಂತೆಗೆಯಬೇಕಾಗಿಲ್ಲ. ಎಲ್ಲ ಕಾಲದಲ್ಲಿಯೂ ದೊಡ್ಡವರ ಪ್ರಭಾವ ಚಿಕ್ಕವರ ಮೇಲೆ ಆಗುವುದು ಸಹಜ. ಆ ವಿದ್ಯಾರ್ಥಿದೆಸೆಯಲ್ಲಿ ನಾನೂ, ನನ್ನ ಮಿತ್ರರೂ ಪ್ರತಿನಿತ್ಯವೂ ಸಂಜೆ ಲಾಲಬಾಗಿನ ಬಂಡೆಗೆ ಹೋಗುತ್ತಿದ್ದೆವು. ಅಲ್ಲಿ, ನಮ್ಮಂತೆಯೇ ಅನೇಕರು ಬಂದು ಕಾಲ ಕಳೆಯುತ್ತಿದ್ದರು. ಬೇಸಿಗೆಯ ಕಾಲದಲ್ಲಂತೂ ಪರಸ್ಥಳದವರೂ ಬಂದು ಅಲ್ಲಿ ಒಂದು ಪರಿಷೆಯೇ ನಡೆಯುವಂತಿತ್ತು. ಆ ಬಂಡೆಯ ಮೇಲೆ ಕಳೆದ ಕ್ಷಣಗಳನ್ನು ಕುರಿತು ಒಂದು ಕವಿತೆ ಬರೆಯಬೇಕು ಎನ್ನಿಸಿತು. 'ವಿ.ಸೀ.' ಅವರ "ಕಾರಂಜಿಕೆರೆ ದಾರಿ", ಕುವೆಂಪು ಅವರ "ಕುಕ್ಕನಳ್ಳಿ ಕೆರೆಯ ಮೇಲೆ" ಮೊದಲಾದ ಕವಿತೆಗಳು ನನ್ನ ಕಲ್ಪನೆಗೆ ಇಂಬುಕೊಟ್ಟವು. ಪ್ರಕೃತದಲ್ಲಿ ಈ ಎಲ್ಲ ಕವಿತೆಗಳೂ ಹೇಗೆ ನನ್ನ ಕವನದ ಭಾವ, ಲಯ, ದೃಷ್ಟಿಗಳ ಮೇಲೆ ತಮ್ಮ ಪ್ರಭಾವವನ್ನು ಬೀರಿವೆಯೆಂದು ತೋರಿಸುವ ಸಲುವಾಗಿ, ಒಂದೆರಡು ಪದ್ಯಗಳನ್ನು ಉದಾಹರಿಸುತ್ತೇನೆ.

ಗಿರಿಯ ಸುತ್ತ ಹೂಗಳರಳಿ
ಮುದವ ಬೀರುತಿರುವುವು
ಸಂಜೆರವಿಗೆ ಮುಗಿಲ ಸುರಳಿ
ಸುತ್ತಿ, ರಮಿಸುತಿರುವುವು

ಎಳೆಯ ಕೊರಲನಣಿಯ ಮಾಡಿ
ಖಗಗಳೆಲ್ಲ ಮೇಲೆ ಕೂಡಿ
ಮಧುರ ಗೀತಗಳನು ಹಾಡಿ
ಸೂರೆಗೊಳುತಲಿರುವುವು

ಪರ್ವತ, ನದಿ, ಚಿಗುರುಗಳಲಿ
ಮೆರೆವ ಸೃಷ್ಟಿ ಮಂದಿರ
ಬೆಳಗು, ಬೈಗು ವೇಳೆಗಳಲಿ
ಆಹ! ಎನಿತು ಸುಂದರ!

ಪ್ರಾಣಮಿತ್ರನಗೋ ನೋಡು
ದೂರ, ಹಳೆಯ ಹಳ್ಳಿಗಾಡು
ಇತ್ತ, ಬೆಂಗಳೂರು ನಾಡು
ಮೇಲೆ, ಎಳೆಯ ಚಂದಿರ !

ಹಸುರ ನಡುವೆ ಮೆರೆವ ಗಿರಿಯೆ
ನೀನು ಬೈಗನೊಲಿವೆಯ ?
ಸಂಜೆವೆಣ್ಣು, ಸಿರಿಯ ಕವಿಯೆ
ಅವಳನೊಲಿದು ತಣಿವೆಯ ?

ಕಾಲ ಕಳೆಯೆ ಜನರು ಬರಲು
ಹಾಡನುಲಿಯೆ ಹಕ್ಕಿಗೊರಲು
ಜೀವ ತಳೆದು ತನುಮನದಲು
ಅವರ ಕೂಡಿ ನಲಿವೆಯ ?

ಅಂದು, ಲಾಲಬಾಗಿನ ಬಂಡೆಯ ಮೇಲೆ ನಿಂತು ಎಡಗಡೆ ನೋಟ ಬೀರಿದರೆ, ಅಲ್ಲಿ ದೂರದಲ್ಲಿ, ಯಾವುದೋ ಹಳ್ಳಿಗಾಡು ಎದ್ದು ಕಾಣುತ್ತಿತ್ತು. ಇಂದು ಆ ವಿಸ್ತಾರವಾದ ಪ್ರದೇಶವೇ ಸುಪ್ರಸಿದ್ಧ ಜಯನಗರ ಬಡಾವಣೆಯಾಗಿದೆ! ಮಾಸ್ತಿಯವರು ಚಿತ್ರಿಸಿರುವ ಹನುಮನಗಿರಿ ನಿರ್ಜನವಾದ ಶಾಂತಿಯ ನೆಲೆಯಾದರೆ, ಸಂಜೆಯ ಹೊತ್ತಿನಲ್ಲಿ ಲಾಲಬಾಗಿನ ಬಂಡೆ ಜನನಿಬಿಡವಾಗಿರುತ್ತಿತ್ತು. ಮಾಸ್ತಿಯವರು ಹನುಮನಗಿರಿಯನ್ನು ಕಂಡು ಯಾವ ಸುಖವನ್ನು ಅನುಭವಿಸಿದ್ದರೋ, ಹಾಗೆಯೇ ಲಾಲಬಾಗಿನ ಬಂಡೆಯ ಮೇಲೆ ನನ್ನ ಗೆಳೆಯರೊಂದಿಗೆ ನಾನು ಅದೇ ಆನಂದವನ್ನು ಅನುಭವಿಸಿ, ಆ ಬೆಟ್ಟದೊಂದಿಗೂ ಸ್ನೇಹವನ್ನು ಬೆಳೆಸಿದ್ದೆ. ಈ ಸಹೃದಯ ಸಮಾನತೆಯೇ, ಮಾಸ್ತಿಯವರ ಮನಸ್ಸಿಗೆ ನನ್ನ ಆ ಕವಿತೆ ಒಪ್ಪಿಗೆಯಾಗಲು ಕಾರಣವಿರಬಹುದೆಂದು ನನ್ನ ಎಣಿಕೆ.

ಈ ವಿಷಯಗಳು ಹೇಗೇ ಇರಲಿ; ಈ ಕವಿತೆಯ ಮೂಲಕ ನನಗೆ ಮಾಸ್ತಿ ಅವರ ಪರಿಚಯವನ್ನು ಮಾಡಿಕೊಳ್ಳಲು ಅವಕಾಶವಾದುದರಿಂದ, ನನ್ನ ಈ ಕವಿತೆಗೆ ನಾನೇ ಕೃತಜ್ಞನಾಗಬೇಕಾಗಿದೆ!

ಅಂದು ಈ ರೀತಿಯಲ್ಲಿ ಆದ ಮಾಸ್ತಿಯವರ ಪರಿಚಯ, ಆಮೇಲೆ ಅವರನ್ನು ಕಂಡಾಗಲೆಲ್ಲ ನಾನಾಗಿ ಮಾತನಾಡಿಸುವಷ್ಟು ಅವಕಾಶ ಉಂಟುಮಾಡಿಕೊಟ್ಟಿತು. ವಿದ್ಯಾರ್ಥಿದೆಸೆಯಲ್ಲಿ ಇಂಥ ಮಹನೀಯರ ಪರಿಚಯಕ್ಕಿಂತ ಬೇರೆ ಯಾವ ಭಾಗ್ಯವಿದೆ?

ಜಿ. ವರದರಾಜರಾವ್

ಕನ್ನಡದ ಕಣ್ಮಣಿ ಮಾಸ್ತಿ

ರಾಮಾಯಣವನ್ನು ಕುರಿತು 'ಆಶ್ಚರ್ಯಮಿದ ಮಾಖ್ಯಾನಾ' ಎನ್ನುವ ಒಂದು ಸ್ತೋತ್ರವಿದೆ. "ಮಾಸ್ತಿಯವರನ್ನು ಕುರಿತು ಯೋಚಿಸುವಾಗಲೆಲ್ಲ ನನಗೆ ಈ ಶ್ಲೋಕ ನೆನಪಾಗುತ್ತದೆ. ಮಾಸ್ತಿ ಕನ್ನಡದ ಒಂದು ಆಶ್ಚರ್ಯ : ಅವರ ಧಾರಣಶಕ್ತಿ, ಅವರ ಚಿಂತನಶಕ್ತಿ, ಅವರ ಲೇಖನಶಕ್ತಿ ಎಲ್ಲವೂ ಆಶ್ಚರ್ಯ ಕರವೇ. ತೊಂಬತ್ತನಾಲ್ಕರ ಈ ಹಿರಿಯ ಜೀವ ಈಗಲೂ ಬಸವನಗುಡಿಯನ್ನು ಏರಿ ಇಳಿಯಬಲ್ಲದು. ಗಾಂಧೀ ಬಜಾರಿನ ಕ್ಲಬ್ಬಿನವರೆಗೆ ಕಾಲ್ನಡಿಗೆಯಲ್ಲಿ ಹೋಗಿ ಬರಬಲ್ಲದು; ನೋಟ ಕೊಂಚ ಮಸುಕಾಗಿದ್ದರೂ ತಪ್ಪದ ನೆನಪು, ತೊದಲದ ಮಾತು, ಮುಗ್ಗರಿಸದ ಲೆಕ್ಕಣಿಕೆ. ೧೯೨೦ರಲ್ಲಿ ಪ್ರಾರಂಭವಾದ ಸಾಹಿತ್ಯಸೃಷ್ಟಿ-ಸಂವತ್ಸರಗಳ ಒಂದು ಆವರ್ತನ ಮುಗಿದರೂ-ಇನ್ನೂ ಸಂಮೃದ್ಧವಾಗಿ ನಡೆಯುತ್ತಲೇ ಇದೆ. ಎರಡು ಶತಮಾನಗಳ ಒಂದು ಜೀವಂತ ಸೇತುವೆಯಾಗಿ ಮಾಸ್ತಿ ನಮ್ಮ ನಡುವಿನಲ್ಲಿದ್ದಾರೆ, ನಮಗೆ ನೆರವಾಗಿದ್ದಾರೆ-ನಾವು, ಕನ್ನಡಿಗರು ಧನ್ಯರು!

ಜೂನ್ ೬–ಮಾಸ್ತಿಯವರ ಜನ್ಮದಿನ. ಕಳೆದ ಜೂನ್ ೬ರಂದು ಅವರಿಗೆ ತೊಂಬತ್ತಮೂರು ತುಂಬಿ, ತೊಂಬತನಾಲ್ಕು ಹಿಡಿದಾಗ ರಾಜ್ಯದ ಮುಖ್ಯಮಂತ್ರಿ ಹೆಗ್ಗಡೆಯವರು ಮುಕ್ಕೋಟಿ ಕನ್ನಡಿಗರ ಪರವಾಗಿ ಅವರಿಗೆ ಶುಭವನ್ನು ಹಾರೈಸಿದರು. ಸಾಮಾನ್ಯವಾಗಿ ಸುದ್ದಿಯಲ್ಲೇ ಇರುವ ಮಾಸ್ತಿಯವರಿಗೆ ತೊಂಬತ್ತನಾಲ್ಕು ಹಿಡಿದ ಸುದ್ದಿಯನ್ನು ಕನ್ನಡಿಗರು ತುಂಬು ಮೆಚ್ಚುಗೆಯಿಂದ ಕೇಳುತ್ತ, ಆಡುತ್ತ ಇದ್ದಂತೆಯೇ ಸುದ್ದಿಗಳಿಗೆಲ್ಲ ತಲೆಮಣಿಯಾಗಿ, ಸುದ್ದಿಯ ಮೇಲೊಂದು ಸುದ್ದಿ ಬಂತು. ಹದಿನೆಂಟೇ ದಿನಗಳಲ್ಲಿ! ಅವರ 'ಚಿಕ್ಕವೀರ ರಾಜೇಂದ್ರ'-ನೂರೈವತ್ತು ವರ್ಷಗಳ ಹಿಂದೆ ಕೊಡಗಿನ ಸಿಂಹವಿಷ್ಟರನನ್ನು ಕಳಕೊಂಡ, ನಿರ್ವಾಸಿತನಾಗಿ, ವೆಲ್ಲೂರು–ಕಾಶಿಗಳನ್ನು ಸುತ್ತಿ ಇಂಗ್ಲೆಂಡನ್ನು ಸೇರಿ ಅಲ್ಲಿಯೇ ಮರೆಯಾದ, ಮರೆತೇ ಹೋದ ಚಿಕ್ಕವೀರ ರಾಜೇಂದ್ರ-೧೯೮೩ರಲ್ಲಿ ಮತ್ತೆ ಚಿನ್ಮಯ ರೂಪದಲ್ಲಿ ಮೈಯ್ದೋರಿದ್ದಾನೆ; 'ಜ್ಞಾನಪೀಠ'ವನ್ನು ಏರಿ ಮೆರೆಯುತ್ತಿದ್ದಾನೆ! ಕನ್ನಡಿಗರಿಂದ ಅಷ್ಟೇಅಲ್ಲ, ಭಾರತೀಯ ಜನ ಕೋಟಿಯ ಹೃನ್ಮನಗಳನ್ನು ಗೆದ್ದಿದ್ದಾನೆ!

ಮಾಸ್ತಿ–ಕನ್ನಡಿಗರಿಗೆ ಅಕ್ಕರೆಯ 'ಹಿರಿಯಣ್ಣ', ಹೆಮ್ಮೆಯ 'ಆಸ್ತಿ'. ಅವರು ಎಲ್ಲರಿಗೂ ಸರಳವಾಗಿಯೂ ಸಮೀಪವಾಗಿಯೂ ಇದ್ದು ಒಂದು ಅಚ್ಚರಿ

ಯಾಗಿರುವುದೇ ಒಂದು ಹೆಚ್ಚುಗಾರಿಕೆ. ಒಮ್ಮೆ ಕಂಡ ಜನ, ಒಮ್ಮೆ ನೋಡಿದ ಊರುಗಳನ್ನು ಮಾಸ್ತಿಯವರು ಮತ್ತೆ ಮರೆಯುವುದಿಲ್ಲ. ಅವರೇ ಒಮ್ಮೆ ಹೇಳಿದ್ದಿದೆ. "ನನಗೆ ಯಾರೂ ಹೊಸಬರಲ್ಲ- ಮೊದಲ ದಿನವಷ್ಟೇ ಹೊಸಬರು, ಮತ್ತೆ ಗೆಳೆಯರು. ನಮ್ಮ ಜನಕ್ಕೆ ನಾನು ಅಜ್ಜ, ಮುತ್ತಜ್ಜ, ಅಣ್ಣ, ಚಿಕ್ಕಪ್ಪ ಹೀಗೆ ಏನೇನೋ ಆಗಿದ್ದೇನೆ." ಹಿರಿ-ಕಿರಿಯರನ್ನದೆ, ಸ್ವ-ಪರವೆನ್ನದೆ ಎಲ್ಲರಲ್ಲೂ ಎಲ್ಲೆಲ್ಲೂ ಮಾತಾಡಿ ಬೆನ್ನುತಟ್ಟಿ, ಓಡಾಡಿ ಕ್ಷಣಾರ್ಧದಲ್ಲಿ ಆತ್ಮೀಯರಾಗಬಲ್ಲ ಮಾಸ್ತಿಯವರದು ಋಷಿ ಸದೃಶ ಜೀವನ, ದೃಷ್ಟಿ ಮತ್ತು ಸಂದೇಶ: ಸಕಲರಿಗೂ ಲೇಸನ್ನೇ ಬಯಸುವ, ಆಡುವ, ನೋಡುವ; ನಾಡು ಒಳ್ಳೆಯದಾಗಲಿ, ನುಡಿ ಬೆಳೆಯಲಿ, ದೇಶ ದೊಡ್ಡದಾಗಲಿ, ಎಂದು ಮನಸ್ಸು ಮಾತು ಕೃತಿಗಳೆಲ್ಲೆಲ್ಲಾ ತೋರಿ ಹಾರೈಸುವ ಈ ಹಿರಿ ಜೀವದ ಕಣ್ಣಲ್ಲಿ ಅಕ್ಕರೆಯ ಪನ್ನೀರು, ತುಟಿಯಲ್ಲಿ ಹಸುಗೂಸಿನ ಹೊನಗು. ಹತ್ತಿರ ಕೂತು, ಬೆನ್ನು ತಟ್ಟಿ ಮಾಸ್ತಿಯವರು ಮಾತಾಡುತ್ತಿದ್ದರೆ ಕೇಳುಗ ಆ ಅಕ್ಕರೆಯ ಹಾಲಲ್ಲಿ ಸಕ್ಕರೆಯ ಹರಳಾಗುತ್ತಾನೆ.

ಮಾಸ್ತಿ ಭಾರತೀಯ ಸಂಸ್ಕೃತಿಯ ಸಾಕಾರ; "ಒಂದು ಮೂರ್ತಿವಂತ ಮಾನವ ಕಾರ್ಯ". ಅವರ ಬದುಕು–ಬರೆಹಗಳೇ ಇವಕ್ಕೆ ನಿದರ್ಶನ. ಋಜು ಜೀವನ, ಸ್ನಿಗ್ಧ ಮನಸ್ಸು, ಸರಳ ವಚನ, ಮುಗ್ಧ ಹಸಿಕ–ಇವೆಲ್ಲವುಗಳಿಂದ ವಿಶಿಷ್ಟ ವ್ಯಕ್ತಿತ್ವ, 'ಮನಸ್ಸು ಚೆನ್ನಾಗಿದ್ದಾಗ ಮಾತು ತಪ್ಪುವುದಿಲ್ಲ' ಎಂಬುದು ಮಾಸ್ತಿಯವರದೇ ಮಾತು. ಆದುದರಿಂದಲೇ ಅವರ ಮಾತಿನಲ್ಲಾಗಲೀ ಕೃತಿಯಲ್ಲಾಗಲೀ ಅಪಶಬ್ದ–ಅಪವಾಕ್ಯಗಳನ್ನು ಎಲ್ಲೂ ಕಾಣೆವು. ವೇದೋಪನಿಷತ್ತುಗಳ, ರಾಮಾಯಣ ಮಹಾಭಾರತಗಳ, ಇನ್ನಿತರ ಕಾವ್ಯಗ್ರಂಥಗಳ ನಿರಂತರ ಪಠನ-ಮಂಥನಗಳಿಂದ, ಋಷಿ ವಾಕ್ಯಗಳಿಂದ, ತಮ್ಮ ಬದುಕಿಗೆ ಬಂಗಾರದ ಕಳೆಯನ್ನು ಬೆಲೆಯನ್ನೂ ತಂದುಕೊಂಡವರು ಮಾಸ್ತಿ. ದೇವರಲ್ಲಿ ಭಕ್ತಿ, ಧರ್ಮದಲ್ಲಿ ಶಕ್ತಿ, ಪುಣ್ಯದಲ್ಲಿ ಪ್ರೀತಿ, ಪಾಪದಲ್ಲಿ ಭೀತಿ ಇವೇ ಜೀವನ ಮಂದಿರಕ್ಕೆ ಸ್ತಂಭ ಚತುಷ್ಟಯವೆಂದು ಬಲವಾಗಿ ನಂಬಿ ಅದನ್ನು ನಿರಂತರವಾಗಿ, ಅಸ್ಖಲಿತವಾಗಿ ಪ್ರತಿಪಾದಿಸುವವರು ಮಾಸ್ತಿ. ಅವರ 'ಅಂತರಗಂಗೆ', 'ಧರ್ಮ ಸಂರಕ್ಷಣೆ'ಗಳೆಂಬ ಗ್ರಂಥಗಳಲ್ಲಿ ಅವರ ವಿಚಾರಧಾರೆ ಹರಳುಗಟ್ಟಿದೆ. ಜಗತ್ತಿನ ಇನ್ನಿತರ ದೇಶಗಳಲ್ಲಿ ಹೇಗಾದರೂ ಇರಲಿ, ಭರತ ವರ್ಷದ ನಮಗೆ ತೆರೆದಿರುವ ದಾರಿ ಇದೊಂದೇ–'ನಾನ್ಯಪಂಥಾ ಅಯನಾಯ ವಿದ್ಯತೇ' ಕ್ರಾಂತಿಕಾರಿಗಳೆಂದೂ ವಿಚಾರವೇತ್ತರೆಂದೂ ಪ್ರಸಿದ್ಧರಾಗಿರುವ ಡಾ|| ಅನಂತಮೂರ್ತಿಯವರಂತವರೂ

ಈಗ ಮಾಸ್ತಿ ಮಾರ್ಗವನ್ನು ಪ್ರಶಂಸಿಸುತ್ತಿರುವುದು ಒಂದು ಶುಭಲಕ್ಷಣ.

ಮಾಸ್ತಿಯವರ ಸಾಹಿತ್ಯ ಸೃಷ್ಟಿ–ವಿಪುಲತೆಗಳ ಬಗೆಗೆ ಒಂದೆರಡು ಸಾಲುಗಳಲ್ಲಿ ಹೇಳಿ ಮುಗಿಸುವುದು ಪ್ರಯಾಸಕರ. 'here is god's Plenty' ಎಂಬುದಕ್ಕೆ ಪ್ರತ್ಯಕ್ಷ ನಿದರ್ಶನ ಮಾಸ್ತಿಯವರ ವಾಙ್ಮಯ ವೈಭವ. ಸಣ್ಣ ಕತೆ, ಕಾದಂಬರಿ, ಕವಿತೆ, ನೀಳ್ಗವಿತೆ, ವಿಮರ್ಶೆ, ವ್ಯಾಖ್ಯಾನ ನಾಟಕ ಭಾಷಾಂತರ ಹೀಗೆ ಒಂದೇ, ಎರಡೇ? ಸುಮಾರು ನೂರಹದಿನೆಂಟರಷ್ಟು ಸಣ್ಣ-ದೊಡ್ಡ ಗ್ರಂಥಗಳು. ಸಣ್ಣಕತೆಗಳಿಗಂತೂ ಅವರೇ 'ಹಿರಿಯಣ್ಣ', 'ಕನ್ನಡದ ನೆಲದಲ್ಲಿ ಸಣ್ಣ ಕತೆಯೆಂಬ ಸೀತೆಯನ್ನು ಪಡೆದ ಜನಕ'. ಸಾಹಿತ್ಯ ವಿಮರ್ಶೆಗೊಂದು ರೂಪನಿರ್ದೇಶನ ಮಾಡಿದ ಮೊದಲಿಗರೂ ಅವರೇ. ಅವರ ಬದುಕಿನಂತೆಯೇ ಅವರ ಬರೆಹ-ಸ್ವಚ್ಛ, ಸಭ್ಯ, ಸರಳ, ಸುಂದರ. ಮಾಸ್ತಿಯವರು ಕನ್ನಡದ ಅತ್ಯುನ್ನತ ಲೇಖಕನಾಗಿರುವಂತೆಯೇ ಅತ್ಯುತ್ತಮ ಪತ್ರಿಕರ್ತರೂ ಹೌದು. ಎರಡು ದಶಕಗಳ ಕಾಲ, ಮಾಸ್ತಿ ಅವರ ಸಂಪಾದಕತ್ವದ 'ಜೀವನ' ಕನ್ನಡದ ಜೀವನವೇ ಆಗಿತ್ತು. ಇಂಗ್ಲಿಷಿನ 'Life'ನಂತೆ ಕನ್ನಡದ 'ಜೀವನ'ವೂ ಹೊರಟು ಹೋಯಿತು!

ಉಲ್ಲೇಖಿಸಲೇಬೇಕಾದ ಇನ್ನೊಂದು ಅಂಶ ಮಾಸ್ತಿಯವರ ಕವಿಜನ ವಾತ್ಸಲ್ಯ. ಸೋದರ ಲೇಖಕರನ್ನು ಮಾಸ್ತಿಯವರಂತೆ ಪೋಷಿಸಿದವರು ಪ್ರೋತ್ಸಾಹಿಸಿದವರು ಕನ್ನಡದಲ್ಲಿ ವಿರಳ. ಮಾಸ್ತಿಯವರ ಮುನ್ನುಡಿಯೆಂದರೆ ಉದಯೋನ್ಮುಖ ಲೇಖಕರಿಗೆಲ್ಲ ಮಾಂಗಲ್ಯ ತಿಲಕ. ಹೊನ್ನಿನ ನುಡಿಯನ್ನೇ ಅಲ್ಲ, ಹೊನ್ನನ್ನೂ ನೀಡಿದವರು ಮಾಸ್ತಿ. ದೇವರು ತಮಗೆ ಕೊಟ್ಟ ಹೊನ್ನನ್ನು ಅವರು ಕುಡಿಕೆಯಲ್ಲಿ ತುಂಬಿ ಮಣ್ಣಿನ ಅಡಿಯಲ್ಲಿ ಹೂತಿಡಲಿಲ್ಲ–ಬೇಂದ್ರೆಯವರ 'ಗರಿ' ಕುವೆಂಪು ಅವರ 'ಕೊಳಲು' ಗೊರೂರರ 'ಹಳ್ಳಿಯ ಚಿತ್ರಗಳು' ದೇವುಡು ಅವರ 'ವಿಚಾರಣೆ', ಪು.ತಿ.ನ ಅವರ 'ಹಣತೆ', ಕೈಲಾಸಂರವರ 'ಹುತ್ತದಲ್ಲಿ ಹುತ್ತ' ಇವೆಲ್ಲ ಮೊದಲ ಸಲ ಬೆಳಕು ಕಾಣುವುದಕ್ಕೆ ಎಣ್ಣೆ–ಬತ್ತಿಗಳನ್ನು ಒದಗಿಸಿದ ಉದಾರಿ ಮಾಸ್ತಿ ಎಂಬುದನ್ನು ಮರೆಯುವಂತಿಲ್ಲ. ಎಂ. ಎ. ಆಗಿದ್ದರೂ ನಿರುದ್ಯೋಗಿಯಾಗಿ ಅಲೆಯುತ್ತಿದ್ದ ಜಿ. ಪಿ. ರಾಜರತ್ನಂರವರ ಬದುಕು ಬರೆಹಗಳಿಗೆ ಆಲಂಬನವಾಗಿ ಮಾಸ್ತಿ ನಿಂತಿದ್ದನ್ನು ರಾಜರತ್ನಂ ಆಗಾಗ ಕೃತಜ್ಞತೆಯಿಂದ ಸ್ಮರಿಸುತ್ತಲೇ ಇದ್ದರು!

ಮಾಸ್ತಿಯವರ ನಾಲ್ಕು ಕಾದಂಬರಿಗಳಲ್ಲಿ 'ಚಿಕ್ಕವೀರ ರಾಜೇಂದ್ರ' ಮೂರನೆಯದು. ಕೊಡಗಿನ ಕೊನೆಯ ದೊರೆಯ ಕೊನೆಯ ದಿನಗಳ ಕಥಾನಕವೇ

ಈ ಕಾದಂಬರಿ. ಐತಿಹಾಸಿಕ ದೃಷ್ಟಿ, ಅನುಗುಣವಾದ ವಸ್ತುವಿನ್ಯಾಸ, ಖಚಿತವಾದ ಪಾತ್ರ ಚಿತ್ರಣ, ಸಮುಚಿತವಾದ ಭಾಷಾ–ಶೈಲಿ ಹೀಗೆ ಯಾವುದೇ ಮಾನದಂಡದಿಂದ ಅಳೆದರೂ 'ಚಿಕ್ಕವೀರ ರಾಜೇಂದ್ರ' ಕನ್ನಡದ ಒಂದು ಕೃತಿರತ್ನ; ಅತ್ಯುತ್ತಮ ಕಾದಂಬರಿ. ಪ್ರಕಟವಾಗಿ (೧೯೫೬) ಇಪ್ಪತ್ತೆಂಟು ವರ್ಷಗಳ ಮೇಲಾದರೂ ಅದು ಆಯ್ಕೆಗಾರರ ಕಣ್ಣನ್ನು ಸೆಳೆದು, ಮನ್ನಣೆಯನ್ನು ಪಡೆಯಿತಲ್ಲಾ ಎಂಬುದಕ್ಕಾಗಿ ಕನ್ನಡಿಗರೆಲ್ಲ 'ಜ್ಞಾನಪೀಠ ಪ್ರಶಸ್ತಿ' ಮಂಡಳಿಯನ್ನು ಕೊಂಡಾಡಲೇಬೇಕು!

ಎಂ. ರಾಮಚಂದ್ರ



ಅನೇಕ ವಿಷಯಗಳನ್ನು ಅರ್ಧರ್ಧ ಕಲಿಸುವುದಕ್ಕಿಂತ ಕೆಲವೇ ವಿಷಯಗಳನ್ನು ಚನ್ನಾಗಿ ಕಲಿಸುವುದು ಒಳ್ಳೆಯದು.

—ಆಂಡ್ರೆಮಾರೋಯಿಸ್

ಯಾರಿಗೆ ಅತಿ ಕಡಿಮೆ ಅವಶ್ಯಕತೆಗಳಿವೆಯೋ ಅವರು ದೇವರಿಗೆ ಅತಿ ಸಮೀಪದಲ್ಲಿದ್ದಾರೆ.

—ಡಿ. ಲಾಯರ್‌ಟಿಯಸ್

ಪ್ರತಿಭೆ ಮತ್ತು ಆತ್ಮವಿಶ್ವಾಸಗಳು ಯಾರೂ ಜಯಿಸಲಾರದ ಬಲ.

—ಜಾರ್ಜ್‌ಹರ್ಬರ್ಟ್

ರಾಜರ್ಷಿ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರು

ರಾಜರು ಎಂದರೆ ಮೊದಲಿನಿಂದಲೂ ನನಗೆ ಒಂದು ರೀತಿಯ ಅಲರ್ಜಿ. ದೌರ್ಜನ್ಯ, ದುರ್ನಡತೆ, ಶೋಷಣೆ, ಲೋಲುಪತೆ, ಇತ್ಯಾದಿ ಕಲ್ಯಾಣಗುಣಗಳನ್ನು ಮೈಗೂಡಿಸಿಕೊಂಡು, ಪ್ರಜೆಗಳನ್ನು ನಾನಾ ರೀತಿಯಲ್ಲಿ ಪೀಡಿಸುವ ರಾಜ ಮಹಾರಾಜರನ್ನೇ ಚರಿತ್ರೆಯುದ್ದಕ್ಕೂ ನಾವು ಕಾಣುತ್ತೇವೆ. ಆದರೆ ಅವರಲ್ಲಿ ಕೆಲವರಾದರೂ ಇದಕ್ಕೆ ಅಪವಾದವಾಗಿ ಉಳಿದಿರುವುದನ್ನು ಕಡೆಗಣಿಸಿದರೆ ನಾವು ಸತ್ಯಕ್ಕೆ ಅಪಚಾರ ಮಾಡಿದಂತಾಗುತ್ತದೆ. ಇಂಥ ಕೆಲವು ರಾಜರಲ್ಲಿ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರನ್ನು ನಿಸ್ಸಂದೇಹವಾಗಿ ಹೆಸರಿಸಬಹುದು.

ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನವನ್ನಾಳಿ ಕೀರ್ತಿಭಾಜನರಾದ ಮಹಾರಾಜರ ಗಡಣದಲ್ಲಿ ಪ್ರಥಮ ಪಂಕ್ತಿಗೆ ಸೇರುವವರಾಗಿದ್ದಾರೆ. ಹಿಂದಿನ ಮಹಾರಾಜರುಗಳು ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಮೈಸೂರು ಸಂಸ್ಥಾನದಲ್ಲಿ ಪುನರುಜ್ಜೀವನಗೊಳಿಸಲು ಕೈಗೊಂಡ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ನಾಲ್ವಡಿ ಶ್ರೀ ಕೃಷ್ಣರಾಜರು ತಮ್ಮ ಜೀವನದುದ್ದಕ್ಕೂ ತ್ರಿಕರಣ ಪೂರ್ವಕ ಶ್ರಮಿಸಿದರು.

೧೮೮೪ನೇ ಜೂನ್ ೪ರಂದು ಇವರು ಜನಿಸಿದರು. ಇನ್ನೂ ಚಿಕ್ಕವರಾಗಿರುವಾಗಲೆ ಇವರ ತಂದೆ ಚಾಮರಾಜ ಒಡೆಯರು ದೈವಾಧೀನರಾದರು ಆಗ ಇವರ ತಾಯಿ ವಾಣೀವಿಲಾಸದ ಕೆಂಪನಂಜಮ್ಮಣ್ಣಿಯವರು ರೀಜೆಂಟರಾಗಿ ಇವರು ರಾಜ್ಯ ಸೂತ್ರಗಳನ್ನು ಹಿಡಿಯಲು ಸಮರ್ಥರಾಗುವವರೆಗೂ ರಾಜ್ಯಭಾರದ ಹೊರೆಯನ್ನು ಹೊತ್ತರು.

ಶ್ರೀ ಕೃಷ್ಣರಾಜರ ವಿದ್ಯಾಭ್ಯಾಸಕ್ಕಾಗಿ ಖಾಸಬಂಗಲೆಯಲ್ಲಿ ರಾಯಲ್ ಸ್ಕೂಲ್ ಎಂಬ ಹೆಸರಿನಲ್ಲಿ ಒಂದು ಪಾಠಶಾಲೆಯು ಸ್ಥಾಪಿತವಾಯಿತು. ಮುಖ್ಯೋಪಾಧ್ಯಾಯ ಪಿ. ರಾಘವೇಂದ್ರರಾಯರು, ಸಹಾಯಕ ಉಪಾಧ್ಯಾಯರುಗಳಾದ ಎಂ. ಎ. ನಾರಾಯಣಯ್ಯಂಗಾರ್, ಬಿ. ಭೀಮರಾವ್, ಅಯ್ಯಾಶಾಸ್ತ್ರಿಗಳು ಮತ್ತು ಹಸನ್ ಅಲಿಯವರು ಕನ್ನಡ, ಸಂಸ್ಕೃತ, ಉರ್ದು ಭಾಷೆಗಳಲ್ಲಿ ಇವರಿಗೆ ತರಬೇತಿ ನೀಡಿದರು. ಜೆ. ಜೆ. ವಿಟ್ಲಿ, ಸ್ಟೂವರ್ಟ್ ಫ್ರೇಸರ್ ರವರ ಮೇಸ್ತ್ರಿಕೆಯಲ್ಲಿ ಇಂಗ್ಲೀಷ್ ಭಾಷೆ, ಸಾಹಿತ್ಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ಅಭ್ಯಾಸವೂ ನಡೆಯಿತು. ಆಗ ಇವರ ಸಹಪಾಠಿಗಳಾಗಿದ್ದವರಲ್ಲಿ

ಮುಂದೆ ದಿವಾನರಾದ ಮಿರ್ಜಾ ಸಾಹೇಬರೂ ಒಬ್ಬರು. ಪಾಠ ಪ್ರವಚನಗಳ ಜತೆಗೆ ಅಂಗಸಾಧನೆ, ಕುದುರೆ ಸವಾರಿ, ರ್‍ಯಾಕೆಟ್, ಪೋಲೋ ಮುಂತಾದ ಕ್ರೀಡೆಗಳಿಗೂ ಮನಸ್ಸು ಕೊಟ್ಟಿದ್ದರಿಂದ ದೇಹದಾರ್ಢ್ಯವೂ ಉತ್ತಮಗೊಳ್ಳಲು ಅನುಕೂಲವಾಯಿತು. ಪೋಲೋ ಕ್ರೀಡೆಯಲ್ಲಂತೂ ಆ ಕಾಲದ ವಿಶ್ವದ ಅದ್ವಿತೀಯ ಆಟಗಾರರಲ್ಲಿ ಒಬ್ಬರೆಂದು ಖ್ಯಾತರಾಗಿದ್ದರು. ಇವರ ವಿವಾಹವು ಕಾಥೇವಾಡದ ರಾಜವಾಡೆಯ ರಾಣಾ ವಿಜಯಸಿಂಹರ ಎರಡನೆಯ ಮಗಳು ಪ್ರತಾಪಕುಮಾರಿಯವರೊಡನೆ ೧೯೦೦ರ ಜೂನ್ ೬ನೇ ತಾರೀಖು ಜಗನ್ಮೋಹನ ಬಂಗಲೆಯಲ್ಲಿ ಜರುಗಿತು.

ಪಟ್ಟಾಭಿಷೇಕವು ೧೮೯೫ರಲ್ಲೇ ಆಗಿದ್ದರೂ ರಾಜ್ಯಾಡಳಿತವನ್ನು ತಾಯಿಯಿಂದ ವಹಿಸಿಕೊಂಡದ್ದು ೧೯೦೨ರಲ್ಲಿ. ರಾಜ್ಯಾಡಳಿತವನ್ನು ವಹಿಸಿಕೊಂಡ ಬಳಿಕ ತಾವು ಆಳಬೇಕಾದ ರಾಜ್ಯದ ಸ್ವರೂಪವೇನು, ಪ್ರಜಾ ಸಮುದಾಯದ ಸ್ಥಿತಿ ಗತಿಗಳು ಹೇಗಿವೆ, ಎನ್ನುವ ಬಗ್ಗೆ ಅವರಿವರಿಂದ ವರದಿ ತರಿಸಿಕೊಳ್ಳದೆ, ತಾವೇ ಸ್ವಂತವಾಗಿ ತಿಳಿದುಕೊಳ್ಳುವ ಸಲುವಾಗಿ ಮೈಸೂರು ಸಂಸ್ಥಾನದೊಳಗೆ ಪ್ರವಾಸ ಮಾಡಿದರು. ಕಡೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ ಸಂಚರಿಸುವಾಗ ಮಲೆನಾಡಿನ ಪ್ರಕೃತಿ ಸೌಂದರ್ಯ ಇವರ ಮನಸ್ಸನ್ನು ಸೂರೆಗೊಂಡಿತು. ಬೇಲೂರು, ಹಳೇಬೀಡುಗಳ ಹೊಯ್ಸಳ ದೇವಾಲಯಗಳನ್ನು ಸಂದರ್ಶಿಸಿ ಅಲ್ಲಿನ ಶಿಲ್ಪಕಲಾ ವೈಭವಕ್ಕೆ ಮನ ಸೋತರು. ಶ್ರವಣಬೆಳಗೊಳದ ಏಕಶಿಲಾ ಕೆತ್ತನೆಯ ಬಾಹುಬಲಿಯ ಧೀರ ಪ್ರಶಾಂತ ನಿಲುವನ್ನು ವೀಕ್ಷಿಸಿದಾಗಲಂತೂ ಮೂಕ ವಿಸ್ಮಿತರಾದರಂತೆ. ಹಂಪೆಗೆ ಪ್ರಯಾಣ ಬೆಳೆಸಿ, ಪಾಳು ಬಿದ್ದ ಅಲ್ಲಿನ ಅವಶೇಷಗಳನ್ನು ನೋಡಿ, ಸುಮಾರು ಮುನ್ನೂರು ವರ್ಷ ವೈಭವದಿಂದ ಮೆರೆದ ವಿಜಯನಗರ ಸಾಮ್ರಾಜ್ಯವನ್ನು ನೆನೆದು ಅವರ ಮನಸ್ಸು ಕ್ಷೋಭೆಗೊಳಗಾಯಿತಂತೆ.

ರಾಜ್ಯದೊಳಗೆಲ್ಲ ಸುತ್ತಾಡಿಬಂದ ನಂತರ ಕೃಷ್ಣರಾಜರು ಉತ್ತರ ಭಾರತದ ಪ್ರವಾಸ ಕೈಗೊಂಡು ಆಯಾಯ ಸ್ಥಳಗಳ ಜನತೆಯ ಆಚಾರ, ವ್ಯವಹಾರ, ಅಲ್ಲಿನ ದೊಡ್ಡ ಪಟ್ಟಣಗಳು, ಕಟ್ಟಡಗಳ ವಾಸ್ತುಶಿಲ್ಪ. ಕೈಗಾರಿಕೆಗಳು, ಗಿರಿದುರ್ಗಗಳು, ರಾಜ್ಯಾಡಳಿತ ವ್ಯವಸ್ಥೆ, ಇತ್ಯಾದಿಗಳನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿ, ಮನದಟ್ಟು ಮಾಡಿಕೊಂಡರು. ವೈಸ್‌ರಾಯ್ ಲಾರ್ಡ್ ಕರ್ಜನ್, ಸೈನ್ಯಾಧಿಪತಿ ಲಾರ್ಡ್‌ಕಿಚ್ನರ್ ಮೊದಲಾದ ಗಣ್ಯರೊಡನೆ ಸಮಾಲೋಚನೆ ಮಾಡುವ ಅವಕಾಶವೂ ದೊರೆಯಿತು.

ಇದಾದನಂತರ ಕೃಷ್ಣರಾಜರು ಬರ್ಮಾ ದೇಶಕ್ಕೆ ಭೇಟಿ ಕೊಟ್ಟಿದ್ದಲ್ಲದೆ ಯೂರೋಪಿನಲ್ಲೂ ಸಂಚಾರಮಾಡಿ ತಮ್ಮ ಲೋಕ ಜ್ಞಾನವನ್ನು ವರ್ಧಿಸಿಕೊಂಡರು.

ಹುಟ್ಟಿನಿಂದಲೆ ರಕ್ತಗತವಾಗಿ ಬಂದ ಗಾಂಭೀರ್ಯ, ವಿನಯ, ಸದಾಚಾರ, ಸನ್ನಡತೆ ಇತ್ಯಾದಿ ಗುಣಗಳ ಜತೆಗೆ ಈ ಎಲ್ಲ ಪ್ರವಾಸಗಳಿಂದ ಇವರ ಹೃದಯದಲ್ಲಿ ಹಿರಿಯ ಆಶಯಗಳು, ಪ್ರಗತಿ ಪರಭಾವನೆಗಳು ಪ್ರಚೋದನೆ ಪಡೆದವು. ಪ್ರಜೆಗಳನ್ನು ತಮ್ಮ ಮಕ್ಕಳಂತೆ ಕಾಣಬೇಕೆಂಬ ದೃಢ ಸಂಕಲ್ಪ ಅವರದಾಯಿತು. ಪ್ರಜೆಗಳೂ ಸಹ ಇವರ ನಡೆನುಡಿಯ ಗಾಂಭೀರ್ಯ, ಹಸನ್ಮುಖ, ಮಿತ ಹಾಗೂ ಮೃದು ಭಾಷೆ, ಸರಳ ಜೀವನ, ಹಿಂದೂ ಧರ್ಮದಲ್ಲಿ ಶ್ರದ್ಧೆಯಿದ್ದೂ ಬೇರೆ ಧರ್ಮಗಳನ್ನು ಗೌರವದಿಂದ ನಡೆಸಿಕೊಳ್ಳುವ ವಿಶಾಲ ಹೃದಯ, ಇವರಲ್ಲಿ ಸದಾ ಜಾಗೃತವಾಗಿದ್ದ ಪ್ರಜಾಹಿತ ಚಿಂತನೆ—ಇಂಥ ಮೋಹಕ ಗುಣಗಳಿಗೆ ಮಾರುಹೋಗಿ ಇವರನ್ನು ಪಿತೃಸಮಾನರೆಂದು ಗೌರವ ಪೂರ್ವಕವಾಗಿ ಪ್ರೀತಿಸುತ್ತಿದ್ದರು. ಪ್ರಜೆಗಳ ಬಗ್ಗೆ ಶ್ರೀ ಕೃಷ್ಣರಾಜರಿಗಿದ್ದ ಕಳಕಳಿ ೧೯೩೪ರಲ್ಲಿ ಇವರಾಡಿದ ಮಾತುಗಳಲ್ಲಿ ಹೀಗೆ ವ್ಯಕ್ತವಾಗಿದೆ. "ನಮ್ಮ ರಾಜ್ಯದ ಪ್ರಜೆಗಳು ತಮ್ಮ ಸಮಸ್ತ ಆಡಳಿತಗಳನ್ನು ಆತ್ಮಾವಲಂಬನದಿಂದ ತಾವೇ ನೆರವೇರಿಸಿಕೊಳ್ಳುವ ಸಾಮರ್ಥ್ಯಗಳನ್ನು ಅಭಿವೃದ್ಧಿ ಪಡಿಸಿಕೊಂಡು, ಮಹಾಕಾರ್ಯಗಳನ್ನು ಧೈರ್ಯದಿಂದ ಪ್ರಾರಂಭಿಸತಕ್ಕವರೂ ಉತ್ಸಾಹಶಾಲಿಗಳೂ ಅಧ್ಯವಸಾಯ ಪಟುಗಳೂ ಆಗಿ, ಸಮಸ್ತ ಪುರೋಭಿವೃದ್ಧಿಯ ಕಾರ್ಯಕಲಾಪಗಳಲ್ಲಿ ಮುಂದಾಗಿ ನಿಂತು, ಕೃತಕೃತ್ಯರಾಗುವುದನ್ನು ನೋಡಿ ಆನಂದ ಪಡಬೇಕೆಂಬುದೇ ನಮ್ಮ ಮನೋರಥವಾಗಿದೆ."

ಇವರ ಈ ಅಭಿಲಾಷೆಯು ಕೇವಲ ಹೇಳಿಕೆಯಲ್ಲಿ ಮುಕ್ತಾಯಗೊಳ್ಳಲಿಲ್ಲ. ಇದನ್ನು ಕಾರ್ಯಗತಗೊಳಿಸಲು ಕೆಲವು ಕಾರ್ಯಕ್ರಮಗಳನ್ನು ಜಾರಿಗೆ ತಂದರು. ೧೯೦೭ರಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ರಚಿಸಿ, ತರುವಾಯ ಶಾಸನ ಸಭೆಯನ್ನೂ ರೂಪಿಸಿದರು. ೩೭೫ ಮಂದಿ ಸದಸ್ಯರ ಪ್ರಜಾಪ್ರತಿನಿಧಿ ಸಭೆಯಲ್ಲಿ ಬಹುಮಂದಿ ಪ್ರಜೆಗಳಿಂದ ಆರಿಸಲ್ಪಟ್ಟವರೇ ಆಗಿದ್ದರು. ರಾಜ್ಯದ ಆಡಳಿತದ ಸುಧಾರಣೆ ಮಾಡಿ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೂ ದಾರಿ ಮಾಡಿದರು. ಸ್ತ್ರೀಯರಿಗೆ ಮತದಾನದ ಹಕ್ಕನ್ನು ಕಲ್ಪಿಸಿದ್ದಂತೂ ಈ ರಾಜರ ಪ್ರಗತಿ ಶೀಲ ಧೋರಣೆಗೆ ಕನ್ನಡಿ ಹಿಡಿಯುತ್ತದೆ.

ಸಂಸ್ಥಾನವನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯುವ ಮಹಾಕಾರ್ಯದಲ್ಲಿ

ದಕ್ಷರೂ ಪ್ರಾಮಾಣಿಕರೂ ಆದ ಅಧಿಕಾರಿಗಳ ಸಹಾಯ ಅಗತ್ಯವಾಗಿತ್ತು. ಸೂಕ್ಷ್ಮಜ್ಞರಾದ ಮಹಾರಾಜರು ಅಂಥ ಒಂದು ಪಡೆಯನ್ನೇ ಆರಿಸುವುದರಲ್ಲಿ ಜಾಣ್ಮೆ ತೋರಿ, ಸಫಲರಾದರು. ಸರ್. ಎಂ ವಿಶ್ವೇಶ್ವರಯ್ಯನವರಂಥ ಮಹಾ ಮೇಧಾವಿಗಳನ್ನೂ, ಸರ್. ಮಿರ್ಜಾ ಇಸ್ಮಾಯಿಲ್ ಅವರಂಥ ಅಸಾಧಾರಣ ಕಾರ್ಯ ಕುಶಲಿಗಳನ್ನೂ, ದಿವಾನರನ್ನಾಗಿ ನೇಮಿಸಿಕೊಂಡದ್ದಲ್ಲದೆ, ಇತರೇ ಅಧಿಕಾರ ವರ್ಗವನ್ನು ನೇಮಿಸುವಾಗಲೂ ದಕ್ಷತೆ ಹಾಗೂ ಪ್ರಾಮಾಣಿಕತೆಗಳಿಗೆ ಆದ್ಯತೆ ನೀಡಿದರಿಂದ ಇವರ ಕನಸುಗಳು ನನಸಾಗಲು ಭದ್ರತಳಪಾಯವನ್ನು ನಿರ್ಮಿಸಿಕೊಂಡಂತಾಯಿತು. ಹೀಗೆ ಅತ್ಯಂತ ಶ್ರೇಷ್ಠವಾದ ಅಧಿಕಾರಿ ಪಡೆಯನ್ನು ಸಜ್ಜುಗೊಳಿಸಿಕೊಂಡು ತಮ್ಮ ಪ್ರಜೆಗಳ ಹಿತಸಾಧನೆ ಮಾಡಲು ಕಾರ್ಯೋನ್ಮುಖರಾದರು.

ಪ್ರಜೆಗಳಲ್ಲಿ ಬಹುಮಂದಿ ವ್ಯವಸಾಯದಿಂದ ಬದುಕುತ್ತಿರುವರೆಂದು ಮನಗಂಡು ವ್ಯವಸಾಯಾಭಿವೃದ್ಧಿಗೆ ವಿಶೇಷ ಗಮನವಿತ್ತರು. ಅನೇಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಂಡರು. ಇದರಲ್ಲಿ ಭಾರತದಲ್ಲೇ ಮೊದಲನೆಯದಾದ ಕೃಷ್ಣರಾಜಸಾಗರ ಅಣೆಕಟ್ಟು ಪ್ರಮುಖವಾದುದು. ಇದಲ್ಲದೆ, ನಾಡಿನ ಉದ್ದಗಲಕ್ಕೂ ಕೆರೆ, ಕಾಲುವೆಗಳನ್ನು ಅಭಿವೃದ್ಧಿಗೊಳಿಸಿದರು. ಶಿವನಸಮುದ್ರದ ಬಳಿ ಇರುವ ಕಾವೇರಿ ನದಿಯ ಗಗನಚುಕ್ಕಿ, ಭರಚುಕ್ಕಿ ಜಲಪಾತಗಳಿಂದ ೧೯೦೦ರಲ್ಲಿ ವಿದ್ಯುಚ್ಛಕ್ತಿಯನ್ನು ಪಡೆದು ರಾಜ್ಯದ ಸಂಪತ್ತನ್ನು ಹೆಚ್ಚಿಸುವ ಸನ್ನಾಹ ಮಾಡಿದರು. ಇಡೀ ಭರತಖಂಡದಲ್ಲಿ ದುಮ್ಮಿಕ್ಕುವ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಪಡೆದದ್ದು ಪ್ರಥಮವಾಗಿ ಮೈಸೂರು ಸಂಸ್ಥಾನ ಎಂಬ ಕೀರ್ತಿಯನ್ನು ರಾಜ್ಯಕ್ಕೆ ತಂದು ಕೊಟ್ಟರು.

ಇದರಿಂದ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಕಾಗದ, ಸಿಮೆಂಟ್, ಗಂಧದೆಣ್ಣೆ, ರೇಷ್ಮೆ, ಗಾಜು, ಪಿಂಗಾಣಿ, ಸಾಬೂನು, ಮಂಡ್ಯದ ಸಕ್ಕರೆ ಕಾರ್ಖಾನೆ, ಮೊದಲಾದ ಕಾರ್ಖಾನೆಗಳು ನಿರ್ಮಾಣಗೊಂಡವು. ವಿಮಾನ ಕಾರ್ಖಾನೆಯೂ ಇವರ ಕಾಲದಲ್ಲೇ ರೂಪುಗೊಂಡಿತು.

ಕೈಗಾರಿಕೆಗಳ ಜತೆಗೆ ವಾಣಿಜ್ಯೋದ್ಯಮ, ಸಹಕಾರ ಸಂಘಗಳು, ಪ್ರಯಾಣ ಸೌಲಭ್ಯ, ಲೋಕೋಪಯೋಗಿ ಕಾಮಗಾರಿಗಳ ಯೋಜನೆಗಳನ್ನು ಸಿದ್ಧಗೊಳಿಸಿ ಪ್ರೋತ್ಸಾಹವಿತ್ತರು. ಇವಕ್ಕೆ ಅನುಗುಣವಾಗಿ 'ಮೈಸೂರು ಬ್ಯಾಂಕ್' ಸ್ಥಾಪನೆಯಾಗಿ ಸಾಮಾನ್ಯ ಜನರಿಗೆ ಆರ್ಥಿಕ ಸೌಲಭ್ಯ ದೊರಕುವಂತಾಯಿತು. ನಗರಾಭಿವೃದ್ಧಿ, ಪೌರಾಡಳಿತಗಳತ್ತಲೂ ಗಮನವಿತ್ತರು, ರೈಲು ಮಾರ್ಗವನ್ನು

ವಿಸ್ತರಿಸಿ, ಜನರ ವ್ಯಾಪಾರ ಹಾಗೂ ಪ್ರಯಾಣಕ್ಕೆ ಅನುಕೂಲ ಮಾಡಿ ಕೊಟ್ಟರು.

ವಿದ್ಯುಚ್ಛಕ್ತಿಯನ್ನು ಇನ್ನೊಂದು ರೀತಿಯಲ್ಲಿ ಇಷ್ಟೇ ಉತ್ಕೃಷ್ಟ ಕೆಲಸಕ್ಕೆ ಮಹಾರಾಜರು ಬಳಸಿಕೊಂಡು ರಾಜ್ಯದ ಸಹಸ್ರಾರು ಊರು ಕೇರಿಗಳಲ್ಲಿ ದೀಪದ ಬೆಳಕನ್ನು ನೀಡಿದರು. ಇದರಿಂದ "ಕೃಷ್ಣರಾಜ ಭೂಪ, ಮನೆ ಮನೆಗೂ ದೀಪ" ಎನ್ನುವ ನಾಣ್ಣುಡಿ ಜನ ಸಾಮಾನ್ಯರ ನಾಲಗೆಯಲ್ಲಿ ನಲಿಯು ಲಾರಂಭಿಸಿತು.

ಇವೆಲ್ಲಕ್ಕೂ ಮಿಗಿಲಾಗಿ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತುಕೊಟ್ಟರು. ರಾಜ್ಯದಲ್ಲಿ ಅನೇಕ ಶಾಲೆ, ಗ್ರಂಥ ಭಂಡಾರಗಳು ಆರಂಭಗೊಂಡವು. ಪ್ರಾಥಮಿಕ ಶಿಕ್ಷಣ ಉಚಿತವಾಗಿ ಮಕ್ಕಳಿಗೆ ದೊರಕುವಂತಲೂ ಏರ್ಪಾಡಾಯಿತು. ಮೈಸೂರಿನ ಮಹಾರಾಣಿ ಕಾಲೇಜು, ಮಹಾರಾಜ ಕಾಲೇಜು, ಬೆಂಗಳೂರಿನ ಸೆಂಟ್ರಲ್ ಕಾಲೇಜು, ವ್ಯವಸಾಯ ಮತ್ತು ಪಶುವೈದ್ಯ ಶಾಲೆಗಳು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಇವೇ ಮೊದಲಾದ ವಿದ್ಯಾ ಸಂಸ್ಥೆಗಳನ್ನು ಹುಟ್ಟು ಹಾಕಿದ್ದಲ್ಲದೆ, ದೇಶೀಯ ಸಂಸ್ಥಾನಗಳಲ್ಲೇ ಪ್ರಥಮವಾಗಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆಮಾಡಿ, ಅದರ ಮೊದಲನೆ ಕುಲಪತಿಗಳೂ ಆದರು.

ಪ್ರಜೆಗಳ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು, ಮೈಸೂರಿನಲ್ಲಿ ಕೃಷ್ಣ ರಾಜೇಂದ್ರ ಆಸ್ಪತ್ರೆ, ಕ್ಷಯರೋಗದ ಆಸ್ಪತ್ರೆ, ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ, ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ, ಕಣ್ಣಾಸ್ಪತ್ರೆ, ಚೆಲುವಾಂಬಾ ಹೆರಿಗೆ ಆಸ್ಪತ್ರೆ, ಮಿದುಳು ರೋಗದ ಆಸ್ಪತ್ರೆ, ಶಿವಮೊಗ್ಗೆಯಲ್ಲಿ ಮೆಗ್ಯಾನ್ ಆಸ್ಪತ್ರೆಗಳೇ ಅಲ್ಲದೆ ಪ್ರತಿ ತಾಲ್ಲೂಕು, ಹೋಬಳಿಯಲ್ಲೂ ವೈದ್ಯಶಾಲೆಗಳನ್ನು ಸ್ಥಾಪಿಸಿದರು.

ಇಷ್ಟಲ್ಲದೆ ನಾಲ್ವಡಿ ಕೃಷ್ಣರಾಜರು, ಸಂಗೀತ, ನೃತ್ಯ, ಶಿಲ್ಪ, ಚಿತ್ರಕಲೆ, ಇತ್ಯಾದಿ ಕಲೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದರು. ವೀಣೆ ಶೇಷಣ್ಣ, ಸುಬ್ಬಣ್ಣ, ವೆಂಕಟಗಿರಿಯಪ್ಪ, ವಾಸುದೇವಾಚಾರ್ಯ, ಬಿಡಾರಂ ಕೃಷ್ಣಪ್ಪ ಇಂಥಿಂಥ ಸಂಗೀತಗಾರರಿಗೂ ವೆಂಕಟಪ್ಪ, ನಾಗರಾಜು, ಸುಬ್ರಹ್ಮಣ್ಯರಾಜು, ಎಸ್. ಎನ್. ಸ್ವಾಮಿಯವರಂಥ ಚಿತ್ರಕಲಾವಿದರಿಗೂ ಜಟ್ಟಿತಾಯಮ್ಮ, ಸುಂದರಮ್ಮನೇ ಆದಿಯಾದ ನಾಟ್ಯಕಲಾಕೋವಿದೆಯರಿಗೂ ಆಶ್ರಯದಾತರಾಗಿದ್ದರು. ಕಲೋಪಾಸಕರಾದ ಇವರಿಗೆ ಕೊಳಲು, ವೀಣೆ ಇತ್ಯಾದಿ ನಾನಾ ವಾದ್ಯಗಳನ್ನು ಸೊಗಸಾಗಿ ನುಡಿಸಲೂ ಸಹ ಬರುತ್ತಿತ್ತು. ಉತ್ತರಾದಿ ಸಂಗೀತಗಾರರು ತಮ್ಮ

ಕಚೇರಿಯಲ್ಲಿ ಮಹಾರಾಜರು ಎಷ್ಟು ಸಮಯ ಕುಳಿತು ಕೇಳುತ್ತಿದ್ದರು ಎನ್ನುವುದರ ಮೇಲೆ ತಮ್ಮ ಯೋಗ್ಯತೆ ನಿಷ್ಕರ್ಷೆ ಆಯಿತು ಎಂದು ಭಾವಿಸುತ್ತಿದ್ದುದು ಶ್ರೀ ಕೃಷ್ಣರಾಜರ ಕಲಾಭಿರುಚಿಯನ್ನೂ ಕಲಾಭಿಜ್ಞತೆಯನ್ನೂ ಸಮರ್ಥವಾಗಿ ಸಾದರಪಡಿಸುತ್ತದೆ.

ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿಯನ್ನು ಗಳಿಸಿಕೊಟ್ಟ ಇಂತಹ ಪ್ರಜಾನುರಾಗಿ, ನಿಸ್ವಾರ್ಥಿ, ತ್ಯಾಗಮಯಿ, ಆದರ್ಶ ಪ್ರಭುವನ್ನು ಮಹಾತ್ಮ ಗಾಂಧಿಯವರು 'ರಾಜರ್ಷಿ' ಎಂದು ಕರೆದುದರಲ್ಲಿ ವಿಶೇಷವೇನಿಲ್ಲ.

ಇಂತಹ ದೊರೆ, ದೊರೆ ಎನ್ನುವುದಕ್ಕಿಂತಲೂ ಮಿಗಿಲಾಗಿ ಇಂತಹ ಶ್ರೇಷ್ಠ ಮಾನವ, ೧೯೪೦ರಲ್ಲಿ ಅಸು ನೀಗಿದಾಗ ಮೈಸೂರಿನ ಮನೆ ಮನೆಯೂ ಶೋಕತಪ್ತವಾಯಿತೆಂದರೆ ಅದರಲ್ಲಿ ಅತಿಶಯೋಕ್ತಿಯೇನಿಲ್ಲ.

ಚದುರಂಗ



ಜಲದೊಳಗೆ ಮುಳುಗಿದರೆ ತೊಲಗದು ಹೊಲೆಗೆಲಸ.

—ಕನಕದಾಸರು

ಸಮಯವರಿತು ಹೇಳಬೇಕಾದುದನ್ನು ಹೇಳಿದರೆ ಆಗ ಅದು ಸಫಲವಾಗಿ ಅಭ್ಯುದಯವನ್ನುಂಟುಮಾಡುತ್ತದೆ.

—ಕಾಳಿದಾಸ

ಸಂದೇಹಗಳನ್ನು ಹುಟ್ಟಿಸಿ ಅವುಗಳಿಗೆ ಸಮಾಧಾನ ಹೇಳುವುದು ಜಾಣತನವಲ್ಲ.

—ವ್ಹಾಟ್ಲೆ

ಪಿಲಿಪ್ಪೈನಿನಲ್ಲಿ ಉಗಿ ಸಮೃದ್ಧಿ

ಉಗಿ ಮತ್ತು ಬಿಸಿನೀರಿನ ಮಿಶ್ರಣ ಸಬ್‌ಟರೇನಿಯನ್ ಜಲಾಶಯದಿಂದ 'ಹಿಸ್' ಎಂದು ಚಿಮ್ಮುತ್ತ ಥಳಥಳಿಸುವ ೮೦ ಕಿ. ಮೀ. ಉದ್ದದ ಕೊಳವೆ ಮೂಲಕ ಶಕ್ತಿಸ್ಥಾವರಕ್ಕೆ ಸಾಗಿ, ಅಲ್ಲಿರುವ ದೈತ್ಯ ನೀರ್ಗಾಲಿಗಳನ್ನು ಗರಗರನೆ ತಿರುಗಿಸಿ ವಿದ್ಯುತ್ತು ಉತ್ಪಾದಿಸುವ ದೃಶ್ಯ ಪಿಲಿಪ್ಪೈನ್‌ನಲ್ಲಿಂದು ಸಾಮಾನ್ಯ. ಮಾಕಿಲಿಂಗ್ ಮತ್ತು ಬಾನಹೌ ಪರ್ವತಗಳ ಕೆಳ ಇಳುಕಲಿನ ಮಾಕ್‌ಬಾನ್ ಭೂಗರ್ಭೋಷ್ಣ ಕ್ಷೇತ್ರದ ಉಗಿ ೧೯೭೯ರಲ್ಲಿ ಮೆಟ್ರೊಮನಿಲಾಕ್ಕೆ ಅಗತ್ಯವಾದ ವಿದ್ಯುತ್ತಿನ ಶೇಕಡಾ ಐದರಷ್ಟನ್ನು ಉತ್ಪಾದಿಸಿತು.

ಇಂದು ಭೂಶಾಖದ ಯಶಸ್ವಿ ಬಳಕೆಯಲ್ಲಿ ಪಿಲಿಪ್ಪೈನರು ಇಡಿ ಏಷಿಯಾದಲ್ಲೆ ಪ್ರಥಮಸ್ಥಾನ ಹೊಂದಿದ್ದಾರೆ, ಪ್ರಪಂಚಮಟ್ಟದಲ್ಲಿ ದ್ವಿತೀಯಸ್ಥಾನ. ಸದ್ಯ ಮುಂಚೂಣಿಯಲ್ಲಿರುವ ಅಮೆರಿಕವನ್ನು ೧೯೮೫ರ ಸುಮಾರಿಗೆ ಹಿಂದೆ ತಳ್ಳಿ ಮುಂದೋಡಬಹುದೆಂದು ತಜ್ಞರ ನಿರೀಕ್ಷೆ.

ನವೀನ ತಂತ್ರವಿದ್ಯೆಯನ್ನು ಅಳವಡಿಸಿಕೊಂಡ ನಾಲ್ಕು ಭೂಗರ್ಭೋಷ್ಣ ಸ್ಥಾವರಗಳು ಪಿಲಿಪ್ಪೈನಿಗೆ ಅಗತ್ಯವಾಗಿರುವ ವಿದ್ಯುತ್ತಿನ ಶೇಕಡಾ ಹತ್ತು ಭಾಗವನ್ನು ಉತ್ಪಾದಿಸುತ್ತಿವೆ. ಈ ಅಂಕಿ ೧೯೮೫ರಲ್ಲಿ ಶೇಕಡಾ ಹತ್ತೊಂಬತ್ತಕ್ಕೇರಬಹುದೆಂದು ಶಕ್ತಿ ಮಂತ್ರಿ ಗೆರೆನಿಮೊ ವಲೆಸ್ಕೊ ಅವರ ಪ್ರವಾದಿ ವಾಣಿ. ೧೯೯೦ನೇ ಇಸವಿ-ತೈಲ, ಕಲ್ಲಿದ್ದಲು, ಜಲವಿದ್ಯುತ್ತು, ಪರಮಾಣುಶಕ್ತಿ ಒಟ್ಟಾರೆ ಶಕ್ತಿಮೂಲಗಳ ಸಮಷ್ಟಿಯಿಂದ ಪಿಲಿಪ್ಪೈನರು ತೈಲ ಆಮದನ್ನು ಕೈದುಗೊಳಿಸುವಷ್ಟು ಸ್ವಾವಲಂಬಿಗಳಾಗಬಲ್ಲರು.

ನವೀಕೃತ ಶಕ್ತಿಮೂಲವಾದ ಭೂಗರ್ಭೋಷ್ಣದ ಜನನ ಹೇಗಾಗಿರಬಹುದು? ಸಂತತವಾಗಿ ಕಾರಿ ಸ್ತಬ್ಧವಾದ ಜ್ವಾಲಾಮುಖಿಯಿಂದ ಶಿಲೆಗಳು ಬಿಸಿಯಾಗುತ್ತವೆ; ಮಳೆ ನೀರು ಕೂಡ. ಭೂಮಿಯಲ್ಲಿ ಇಂಗಿದ ಮಳೆ ನೀರು ೧೮೦ ಡಿಗ್ರಿ ಸೆಂಟಿಗ್ರೇಡುಗಳಿಗಿಂತ ಹೆಚ್ಚು ಕಾವೇರಿದಾಗ ಭೂಗರ್ಭೋಷ್ಣ ಶಕ್ತಿಯ ಉಗಮದ ಸಂಭಾವ್ಯತೆ ಅಧಿಕ. ೫೦೦ ರಿಂದ ೨,೦೦೦ ಮೀಟರ್ ಆಳದಲ್ಲಿ ಭೂ ಉಷ್ಣತೆ ಸಾಕಷ್ಟಿದ್ದರೆ ಬಿಸಿ ನೀರು ಕಲ್ಲ ಬಿರುಕುಗಳಿಂದ ಬಿಸಿ

೧೯೮೧ರ ಆಗಸ್ಟ್ ತಿಂಗಳ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ 'ಬೆಥ್ ಡೇ' ಅವರ 'ಇಟ್ ಈಸ್ "ಫುಲ್ ಸ್ಟೀಮ್ ಎಹೆಡ್!" ಇನ್ ದಿ ಪಿಲಿಪ್ಪೈನ್ಸ್' ಎಂಬ ಲೇಖನದ ಭಾವಾನುವಾದ.

ಬುಗ್ಗೆಯಾಗಿ ಇಣುಕುತ್ತದೆ. ಆದರೆ ಹೆಚ್ಚಾಗಿ ಬಿಸಿ ನೀರು ಭೂಮಿಯ ಮೇಲ್ಮೈಯನ್ನು ತಲುಪುವುದೇ ಇಲ್ಲ. ಇಂಥ ಸಂದರ್ಭಗಳಲ್ಲಿ ತೂತು ಕೊರೆದು ಬಿಸಿ ನೀರಿಗೆ ಹಾದಿ ಕಡಿಯಬೇಕು. ಫಿಲಿಪ್ಪೈನಿನಲ್ಲಿ ಅತಿ ಹೆಚ್ಚು ವಾರ್ಷಿಕ ಮಳೆ ಬೀಳುವುದರಿಂದ ಭೂ ಉಷ್ಣತೆ ಮುಗಿಯದೆ ದಾಸ್ತಾನು-ಅಕ್ಷಯ.

ತ್ಯಿಸೆಲಾಗೊ ಎಂಬ ಜ್ವಾಲಾಮುಖಿ ಪ್ರದೇಶದಲ್ಲಿ ಫಿಲಿಪ್ಪೈನರು ಆಕಸ್ಮಿಕವಾಗಿ ಭೂಗರ್ಭೋಷ್ಣದ ಸದುಪಯೋಗಕ್ಕಾರಂಭಿಸಿದರು. ಹಿಂಡನಾದ ನೆರೆಯಾದ ಕ್ಯಾಮಿಗಿಯಾನ್ ದ್ವೀಪದ ಹಿಬೋಕ್-ಹಿಬೋಕ್ ಪರ್ವತದ ಜ್ವಾಲಾಮುಖಿ ೧೯೫೧ರಲ್ಲಿ ಆಸ್ಫೋಟಿಸಿದ ಅನಂತರ ಫಿಲಿಪ್ಪೈನ್ ಸರಕಾರ ಭೂಗರ್ಭ ಶಾಸ್ತ್ರಜ್ಞ ಅರ್ಚುರೊ ಅಲ್ಕರಾಜ್ ಅವರನ್ನು ಜ್ವಾಲಾಮುಖಿ ಶಾಸ್ತ್ರದ ಜಾಡು ಹಿಡಿದು ಜ್ವಾಲಾಮುಖಿ ಆಸ್ಫೋಟನೆ ಬಗ್ಗೆ ಕಣಿ ನುಡಿಯುವ ಸಲಕರಣೆಗಳ ಸ್ಥಾಪನೆಗೆ ನಿಯೋಗ ನೇಮಿಸಲು ವಿನಂತಿಸಿತು. ಬೆಂಕಿ ಉಗುಳುವಿಕೆ ಬಗ್ಗೆ ಮುನ್ಸೂಚನೆ ಕೊಡುವ ತಂತ್ರಗಳು ಅಲ್ಕರಾಜ್‌ಗೆ ತಿಳಿಯದೆಹೋದರೂ ಜ್ವಾಲಾಮುಖಿ ರಚನೆಗಳ ಕೂಲಂಕಷ ಅವಲೋಕನದಿಂದ ಇವು ಅಪರಿಮಿತ ಉಷ್ಣ ಮೂಲವೆಂದು ಸ್ಪಷ್ಟವಾಯಿತು.

ಕೆಲವು ಪ್ರದೇಶಗಳ ಹೆಸರೇ ಉಷ್ಣ ಚಟುವಟಿಕೆಗಳ ಸೂಚಿ. ಮಯಾನ್ ಜ್ವಾಲಾಮುಖಿ ಪ್ರದೇಶದಲ್ಲಿ ಬಹಳ ಹಿಂದಿನಿಂದಲೂ 'ತಿಕ್ಕನ್‌ಬಾನೊ' ಎಂಬ ಹೆಸರಿನ ಸ್ಥಳವಿದೆ. ಹೆಸರು ಜೊಟ್ಟುಮಾಡುವಂತೆ-ಕಲ್ಲು ನೆಲದ ತೂತಿನ ಮೇಲೆ ಪ್ರತಿದಿನ ಅಕ್ಕಿ ಬೇಯಿಸುತ್ತಾರೆ. ಮೂಟೆಯ ಕೆಳಗಡೆ ಉಷ್ಣದ ಊಟೆ!

ತಾಂತ್ರಿಕ ಸಮೀಕ್ಷೆಗೆ ಆರ್ಥಿಕ ಹಿನ್ನೆಲೆ ಅನಿವಾರ್ಯ. ಸಿಪಾಯಿ ತೈಲ ರೂಪಾಯಿ ೨ಕ್ಕಿಂತ ಅಗ್ಗದಲ್ಲಿ ಸಿಗುತ್ತಿರುವಾಗ, ಪರ್ಯಾಯ ಶಕ್ತಿ ಮೂಲದ ಅನ್ವೇಷಣೆಗೆ ಯಾರೂ ಪ್ರಯತ್ನಿಸಲಾರರು. ತೀವ್ರ ಒತ್ತಾಯ ಫಲ ನೀಡಿತು. ಫಿಲಿಪ್ಪೈನಿನ 'ದೇಶೀಯ ವಿಜ್ಞಾನ ಬೆಳವಣಿಗೆ ಮಂಡಲಿ' (NSDB) ಕೊನೆಗೂ ಮೂರು ಲಕ್ಷ ರೂಪಾಯಿ ಮಂಜೂರಿಸಿತು. ಸರಿ, ಅಲ್ಕರಾಜ್ ಮತ್ತಿತರ ಭೂಗರ್ಭಶಾಸ್ತ್ರಜ್ಞರ ಚಿಕ್ಕ ತಂಡ ದಕ್ಷಿಣ ಲೂಜಾನ್ ಮತ್ತು ಲೊಯ್ಟ ಪರ್ವತಶ್ರೇಣಿಯ ಕಗ್ಗಾಡುಗಳಲ್ಲಿ, ಎತ್ತರದ ಪರ್ವತ ಪಂಕ್ತಿಗಳಲ್ಲಿ, ಕಲ್ಲು ಬಂಡೆಗಳ ಸಂದಿಗೊಂದಿಗಳಲ್ಲಿ ಉಷ್ಣಪ್ರದೇಶಗಳನ್ನು ಅನ್ವೇಷಿಸುತ್ತ ಮುಂದುವರಿಯಿತು.

ಭೂಮಿಯ ಅಂತರಾಳ ಮೇಲ್ಮೈಯಂತೆ ಸ್ತಬ್ಧ ಖಂಡಿತ ಅಲ್ಲ. ಅಂತರಾಳದ ಕೋಲಾಹಲವನ್ನು ತಂಡದ 'ಮಾಂತ್ರಿಕ ದಂಡ' ಗುರುತಿಸಿತು. ಮಾಂತ್ರಿಕ ದಂಡ! ಹೌದು, ಉಷ್ಣಮೂಲದ ಕ್ಲೋರೈಡ್ ನೀರಿನಿಂದ ಪ್ರಭಾವಿಸಲ್ಪಟ್ಟ ಶಿಲೆಗಳ ವಿದ್ಯುತ್ ವಿಸರಣವನ್ನು ಈ ದಂಡ ಗುರುತಿಸುತ್ತದೆ. ಬಿಸಿ ನೀರಿನ ಗುಣ ಧರ್ಮಗಳನ್ನು ಪರೀಕ್ಷಿಸಿ ನೂತನ ಹೊಳವುಗಳನ್ನು ತೋರಿಸುತ್ತದೆ. ಭೂ ಬಿರುಕುಗಳಿಂದಿಣುಕುವ ನೈಸರ್ಗಿಕ ಉಗಿಯನ್ನು ಪತ್ತೆಹಚ್ಚಿ, ಆ ಉಗಿಯ ಉಷ್ಣತೆಯನ್ನು ಅಳೆಯುತ್ತದೆ. ಈಗ ಹೇಳಿ–ಇದು ಸಾಮಾನ್ಯ ದಂಡವೆ?

ಜೆಚ್ಚಗಿನ ಭೂಗರ್ಭದ ರಹಸ್ಯಗಳ ಗೋಜಿಗೆ ಹೋಗುವುದೆಂದರೆ ಪ್ರಾಚೀನ ಹೆದರಿಕೆ ಮತ್ತು ನಂಬಿಕೆಗಳನ್ನು ಕೆಣಕಿದಂತೆ. ರಾಜ್ ತಂಡ ಜ್ವಾಲಾಮುಖಿ ಯೊಂದನ್ನು ಪರೀಕ್ಷಿಸುತ್ತಿದ್ದಾಗ ಭೂತವನ್ನು ಕೆರಳಿಸುವ ಕಾರ್ಯದ ಸ್ತಂಭನಕ್ಕೆ ಸ್ಥಳೀಯ ಮುಗ್ಧರು ಗೋಗರೆದರು. ತಾತಲ್ ಜ್ವಾಲಾಮುಖಿಯ ಕುಳಿಯಲ್ಲಿ ದೊಡ್ಡ ಕೊಳವಿದೆ. ಭೂಗರ್ಭಶಾಸ್ತ್ರಜ್ಞರು ಕೊಳದ ಅಂಚಿನಲ್ಲಿ ಹೋಗದಂತೆ ಸ್ಥಳೀಯ ಮಾರ್ಗದರ್ಶಿ ತಡೆದ. ಬಿದಿರಿನ ತೆಪ್ಪದಲ್ಲಿ ಕರಿದ ಹಂದಿಯನ್ನಿರಿಸಿ ವಿಧ್ಯುಕ್ತವಾಗಿ ಆ ಕೊಳದಲ್ಲಿ ತೇಲಬಿಟ್ಟು, ಅಲ್ಲಿರುವ ಅಜ್ಞಾತ ದೈವವನ್ನು ಮನಸಾರೆ ಧ್ಯಾನಿಸಿ ಸಮಾಧಾನಿಸಿದ ಮೇಲೆ ಮುಂದುವರಿಯಲು ಅನುಮತಿ ನೀಡಿದ.

ತೀವ್ರಸ್ಥಳ ತಪಾಸಣೆ ಅನಂತರ ತಿವಿ ಹಳ್ಳಿಯ ಇಳಿಜಾರಿನ ಚಿಕ್ಕಭಾಗ–ಮೆಲಿಸಾವೊ ಜ್ವಾಲಾಮುಖಿಯ ಬುಡ ಪ್ರದೇಶವನ್ನು ಪ್ರಯೋಗಕ್ಕಾರಿಸಿದರು. ೧೯೬೭ರಲ್ಲಿ ದೇಶೀಯ ವಿಜ್ಞಾನ ಬೆಳವಣಿಗೆಗೆ ಮಂಡಲಿಯಿಂದ ೮೬ ಲಕ್ಷ ರೂಪಾಯಿ ವೆಚ್ಚದಲ್ಲಿ ಪ್ರದರ್ಶನಕ್ಕೆಂದು ಬಾವಿ ತೋಡಲಾರಂಭಿಸಿದರು.

೧೯೫ ಮೀಟರ್ ಆಳದಿಂದ ಉಗಿ ರಾಶಿ ಬಲವಾಗಿ ಹೊರ ಚಿಮ್ಮಿತು. ಈ ಯೋಜನೆಯನ್ನು ಕ್ಯಾಲಿಫೋರ್ನಿಯಾದ 'ಯೂನಿಯನ್ ಆಯಿಲ್' ಕಂಪೆನಿಯ ಗಮನಕ್ಕೆ ತರಲಾಯಿತು. ದೈತ್ಯಾಕಾರದ ಉಗಿ ಬುಗ್ಗೆಗಳ ಪ್ರಯೋಜನ ಪಡೆಯುವಲ್ಲಿ ಸಾಕಷ್ಟು ಅನುಭವ, ಅರಿವು ಹೊಂದಿದ್ದ ಕಂಪೆನಿ 'ತಿವಿ'ಯ ಉಷ್ಣ ಸ್ಥಾವರವನ್ನು ಆರ್ಥಿಕವಾಗಿ ಅಭಿವೃದ್ಧಿಗೊಳಿಸುವ ಕರಾರಿಗೆ ರುಜು ಹಾಕಿತು.

ಪ್ರಥಮ ಘಟಕ ೧೯೭೯ ಜನವರಿಯಲ್ಲಿ ಉತ್ಪಾದಿಸಿದ ವಿದ್ಯುತ್ತು ೫೫ ಮೆಗಾವಾಟ್. ೧೯೭೩ರಲ್ಲಿ ಜಗತ್ತಿನಾದ್ಯಂತ ಉಂಟಾದ ತೀವ್ರ ತೈಲದುಬ್ಬರ ದಿಂದ ಕಣ್ಣು ತೆರೆದ ಫಿಲಿಪ್ಪೈನ್ ಸರಕಾರ ಪ್ರತ್ಯೇಕ ಶಕ್ತಿ ಇಲಾಖೆಯೊಂದನ್ನು

ಸ್ಥಾಪಿಸಿ ಪರ್ಯಾಯ ಶಕ್ತಿ ಮೂಲದ ಶೋಧನೆಗೆ ಕುಮ್ಮಕ್ಕು ಕೊಟ್ಟಿತು.

ಪಿಲಿಪ್ಪೈನಿನ ಮಕ್‌ಬಾನ್ ಪ್ರಪಂಚದಲ್ಲಿ ಎರಡನೆಯ ಅತಿ ದೊಡ್ಡ ಉಷ್ಣ ಕ್ಷೇತ್ರ. ೧,೪೨,೦೦೦ ಹೆಕ್ಟೇರ್ ವಿಸ್ತೀರ್ಣದ ಈ ಕ್ಷೇತ್ರದಲ್ಲಿ ಈಗಾಗಲೆ ೪೦ ಬಾವಿಗಳನ್ನು ತೋಡಲಾಗಿದೆ. ಕುದಿಯುವ ನೀರಿನ ಹರಿವನ್ನು ತಲಪುವವರೆಗೆ ಬಾವಿ ತೋಡುವ ಕೆಲಸ ಸಾಗುತ್ತದೆ. ಕುದಿಯುವ ನೀರು ಬಾವಿಯನ್ನು ಪ್ರವೇಶಿಸುತ್ತಿರುವಂತೆ ಒತ್ತಡ ಕಡಿತಕ್ಕಾಗಿ ಉಗಿ ಮತ್ತು ಬಿಸಿ ನೀರಿನ ಮಿಶ್ರಣ ತಟ್ಟನೆ ಬಾವಿಯ ಮೇಲ್ಮೈಯಲ್ಲಿ ಕಾಣಿಸುತ್ತದೆ. ಈ ಮಿಶ್ರಣವನ್ನು ಬಿಸಿ ನೀರು ಹಾಗೂ ಉಗಿಯಾಗಿ ಪ್ರತ್ಯೇಕಿಸಲಾಗುತ್ತದೆ. ಶಕ್ತಿ ಸ್ಥಾವರಗಳಿಗೆ ಕೊಳವೆ ಮೂಲಕ ಉಗಿ ಸಾಗಿ ಅಲ್ಲಿರುವ ಅಲಗು ಚಕ್ರಗಳನ್ನು ಗರಗರನೆ ತಿರುಗಿಸಿ ವಿದ್ಯುತ್ತನ್ನುತ್ಪಾದಿಸುತ್ತದೆ.

ಉಗಿ ಶುಷ್ಕವಾಗಿದ್ದರೆ ಕೆಲಸ ಸುಲಭ. ಇಂಥ ಉಗಿಯನ್ನು ನೇರ ಶಕ್ತಿ ಸ್ಥಾವರಗಳಿಗೆ ರವಾನಿಸುತ್ತಾರೆ. ಆದರೆ ಮಾಕ್‌ಬಾನ್ನಿನಲ್ಲಿ ಹೊರ ಬರುವ ಮಿಶ್ರಣದಲ್ಲಿ ೩೫ ಶೇಕಡಾ ಉಗಿಯಾದರೆ, ಉಳಿದ ೬೫ ಶೇಕಡಾ ಬಿಸಿ ನೀರು. ಪ್ರತಿ ಐದು ಬಾವಿಗಳಿಗೊಂದರಂತೆ ಮಿಶ್ರಣವನ್ನು ಪ್ರತ್ಯೇಕಿಸುವ ಠಾಣ್ಯವಿದೆ. ಇಲ್ಲಿ ಆರ್ದ್ರತೆ ಉಳ್ಳ ಉಗಿಯನ್ನು ಬೇರ್ಪಡಿಸಿ, ಆ ಉಗಿಯನ್ನು ಶುಷ್ಕಗೊಳಿಸುತ್ತಾರೆ. ಶುಷ್ಕ ಉಗಿಯನ್ನು ಅಧಿಕ ಒತ್ತಡದಲ್ಲಿ ಶಕ್ತಿ ಸ್ಥಾವರಗಳಿಗೆ ಊಡುತ್ತಾರೆ. ಉತ್ಪಾದಿತ ವಿದ್ಯುತ್ತನ್ನು ಕಾರ್ಖಾನೆಗಳಲ್ಲಿ, ಮನೆಗಳಲ್ಲಿ ಬಳಸುವುದು ಮಾಮೂಲಿ–ನಿರೀಕ್ಷಿತ.

ಉಷ್ಣ ಕ್ಷೇತ್ರಗಳ ಪ್ರಗತಿ ಅತಿ ಮೆಚ್ಚದಾಯಕ. 'ತ್ರಿವಿ'ಯಲ್ಲಿರುವ ಸ್ಥಾವರ ನಿರ್ಮಾಣಕ್ಕೆ ೯೨ ಕೋಟಿ ರೂಪಾಯಿ ವ್ಯಯವಾಯಿತು. ಪಿಲಿಪ್ಪೈನ್ ಎದೆಗುಂದಲಿಲ್ಲ. ನೆರೆ ರಾಷ್ಟ್ರಗಳ ಸಹಾಯ ಯಾಚಿಸಿತು ಯಾಚನೆಗೆ ಸಂದ ಪ್ರತಿಕ್ರಿಯೆ ಅದ್ಭುತ. ಶಕ್ತಿ ಉತ್ಪಾದಕ ರಾಷ್ಟ್ರಗಳಲ್ಲಿ ನಾಲ್ಕನೆಯ ಸ್ಥಾನ ಹೊಂದಿರುವ ನ್ಯೂಜಿಲೆಂಡ್ ಪಿಲಿಪ್ಪೈನರ ಲಿಯೊಟಿ ಮತ್ತು ನಿಗ್ರೊ ದ್ವೀಪಗಳಲ್ಲಿ ಉತ್ತಮ ಸ್ಥಳ ಪರಿಶೋಧನೆಗೆಂದು ತಜ್ಞರ ತಂಡವನ್ನು ಕಳುಹಿಸಿದ್ದಲ್ಲದೆ ೧೦ ಕೋಟಿ ರೂಪಾಯಿಗಳ ದೇಣಿಗೆ ನೀಡಿತು. ಜಪಾನ್ ನೀಗಾರ್ಲಿಗಳನ್ನು ಒದಗಿಸುವ ಹೊಣೆ ಹೊತ್ತಿತು. ಭೂಗರ್ಭೋಷ್ಣ ಉಗಿಯಿಂದ ವಿದ್ಯುತ್ತು ತಯಾರಿಸಿದ (೧೯೧೩) ಪ್ರಥಮ ರಾಷ್ಟ್ರ ಇಟಲಿ–ಉಷ್ಣ ಕ್ಷೇತ್ರಗಳ ಪತ್ತೆ ಮತ್ತು ಸ್ಥಳೀಯ ಭೂಗರ್ಭಶಾಸ್ತ್ರಜ್ಞರಿಗೆ ಯುಕ್ತ ತರಬೇತಿ ನೀಡಲು ಐವರು ತಜ್ಞರನ್ನು ಕಳುಹಿಸಿತು.

ಉಗಿ ಬಸಿಯುವಿಕೆಗೆ ಬಾವಿ ಕೊರೆಯುವ ಕ್ರಮದ ವಿರುದ್ಧ ಕೆಲವು ಸೂಚನೆಗಳನ್ನು ಐಸ್‌ಲ್ಯಾಂಡಿನ ತಂತ್ರವಿದರು ಮಂಡಿಸುತ್ತಾರೆ. ಐಸ್‌ಲ್ಯಾಂಡಿನ ಜ್ವಾಲಾಮುಖಿಗಳು ತೀವ್ರ ಚುರುಕು ಚಟುವಟಿಕೆಗಳಿಂದ ಕೂಡಿವೆ. ತೂತು ಕೊರೆಯುವುದರಿಂದ ಉಂಟಾಗುವ ಕಂಪನದಿಂದ ನೆರೆಯ ಜ್ವಾಲಾಮುಖಿಗಳು ಸ್ಫೋಟಿಸುವ ಅಪಾಯ ಇದ್ದದ್ದೆ. ಇದು ಪಿಲಿಪ್ಪೈನಿಗೂ ಅನ್ವಯಿಸುತ್ತದೆ. ಆದುದರಿಂದ ಉಗಿ ಉತ್ಪಾದನೆಗೆ ಬಾವಿ ತೋಡುವಾಗ ಎಚ್ಚರಿಕೆ ವಹಿಸುವುದು ಜರೂರಿನ ಅಗತ್ಯ.

ಪಿಲಿಪ್ಪೈನಿನಲ್ಲಿಂದು ಶಕ್ತಿ ಸ್ಥಾವರಗಳ ನಿರ್ಮಾಣಕ್ಕೆ ಸುಮಾರು ೨೫ ಭೂಗರ್ಭೋಷ್ಣ ಕ್ಷೇತ್ರಗಳನ್ನು ಆರಿಸಲಾಗಿದೆ. ಹಲವು ದ್ವೀಪಗಳಲ್ಲಿ ಈಗಾಗಲೆ ಉಗಿ ಬಳಕೆ ವ್ಯಾಪಕ–ಅಕ್ಕಿ ಒಣಗಿಸುವುದರಿಂದ ತೊಡಗಿ, ಉಪ್ಪು ತಯಾರಿಯವರೆಗೆ. ಕೊಬ್ಬರಿ ಒಣಗಿಸುವುದಕ್ಕೂ ಉಗಿ ಬಳಕೆ. ಈ ರೀತಿ ನಿರ್ದ್ರವಗೊಳಿಸಿದ ಕೊಬ್ಬರಿ ಬೂಷ್ಟು, ಶಿಲೀಂಧ್ರಗಳಿಂದ ಹೊರತಾಗಿದೆ ಎಂದೇ ಗುಣಮಟ್ಟ ಮೇಲ್ದರ್ಜೆಯದು; ದರ್ಜೆಗನುಗುಣವಾಗಿ ದೊರೆಯುವ ಬೆಲೆ ಕೂಡ ಹೆಚ್ಚಿನದು. ಉಗಿಯಿಂದ ಪಿಲಿಪ್ಪೈನಿನ ಕೊಬ್ಬರಿ ರಫ್ತುಗಾರರ ಸುಗ್ಗಿ.

ದಕ್ಷಿಣ ಲೂಜಾನಿನ ಕಾಲಿರಯ್ಯ ಸರೋವರದ ಜಲವಿದ್ಯುತ್‌ಗಾರದಲ್ಲಿ ನೀರು ಶೇಖರಣೆಗೆ ಮಾಕ್‌ಬಾನ್ ಮತ್ತು ತಿವಿಯ ಭೂಗರ್ಭೋಷ್ಣ ಶಕ್ತಿ ಸಹಾಯಕವಾಗಿದೆ. ಮಧ್ಯ ಪಿಲಿಪ್ಪೈನಿನ ಲಿಯೊಟೆ ಪ್ರಾಂತ್ಯದ ಟೊಂಗೊನಾನ್ ಎಂಬಲ್ಲಿ ೩೪ ಬಾವಿಗಳನ್ನು ತೋಡಲಾಗಿದ್ದು ಅಲ್ಲಿರುವ ಸ್ಥಾವರ ೧೧೨ ಮೆಗಾವಾಟ್‌ಗಳಷ್ಟು ವಿದ್ಯುತ್ತನ್ನು ಉತ್ಪಾದಿಸುತ್ತಿದೆ. ತಾಮ್ರ ಕರಗಿಸುವ ಕಾರ್ಖಾನೆಯೊಂದನ್ನು ತೆರೆಯಲಾಗಿದ್ದು ಅದಕ್ಕೆ ಅಗತ್ಯವಾದ ವಿದ್ಯುತ್ತನ್ನು ಟೊಂಗೊನಾನ್ ನೀಡುತ್ತಿದೆ. ರಸಗೊಬ್ಬರ ಮತ್ತು ಅಲ್ಯೂಮಿನಿಯಮ್ ಕಾರ್ಖಾನೆಗಳನ್ನು ಅದೇ ಸ್ಥಳದಲ್ಲಿ ಮತ್ತು ಇನ್ನಿತರ ಕೆಲವು ಕಾರ್ಖಾನೆಗಳನ್ನು ಉಷ್ಣಪ್ರದೇಶದ ಇಕ್ಕೆಲಗಳಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ.

ಭೂಗರ್ಭೋಷ್ಣ ಶಕ್ತಿ ಕಾರು ಅಥವಾ ಡೀಸೆಲ್ ಯಂತ್ರಗಳನ್ನು ನಡೆಸುವ ಇಂಧನವಾಗದು. ಆದರೆ ಭೂಮಿಯಿಂದ ಅಗೆದು ತೆಗೆಯುವ ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯನ್ನು ಸಾಕಷ್ಟು ಕಡಿಮೆ ಮಾಡುವುದಂತೂ ಖಾತ್ರಿ. ಇಂದು ಪಿಲಿಪ್ಪೈನರು ಚಹಾ ಪಾತ್ರೆಯ ಮೇಲೆ ಕುಳಿತಿದ್ದಾರೆ. ಅಪರಿಮಿತ ಶಕ್ತಿ ಮೂಲವಾದ 'ಬೆಚ್ಚಗಿನ ಭೂಮಿ' ನಿಸರ್ಗ ತಾಯಿಯ ಆತ್ಮೀಯ ಕೊಡುಗೆ.

ಎ. ಪಿ. ರಾಧಾಕೃಷ್ಣ

ತಾಯಿಯ ಹಾಲು

ಕೆಲವು ಹೊಸ ತಥ್ಯಗಳು

ತಾಯಿಯ ಹಾಲು ಮಾನವ ಜಾತಿಯ ಜೀವನ ಸ್ತ್ರೋತ್ರ. ಐವತ್ತು ವರ್ಷಗಳ ಹಿಂದೆ ಹಾಲಿನ ಡಬ್ಬ ಪ್ರಚಾರಕ್ಕೆ ಬಂದಾಗಲೂ, ಸ್ತನಪಾನವೇ ರೂಢಿಯಲ್ಲಿತ್ತು. ಮಗುವಿನ ಆರೋಗ್ಯಕರ ಜೀವನದ ಪ್ರಾರಂಭಕ್ಕೆ ಹಾಗೂ ಮಗುವಿನ ಮಾನಸಿಕ ಮತ್ತು ಶಾರೀರಿಕ ವಿಕಾಸದ ದೃಷ್ಟಿಯಲ್ಲಿ ತಾಯಿ ಹಾಲಿನ ಮಹತ್ವ ವರ್ಣನೀಯ. ಮಗುವಿನ ಮೊದಲ ಆರು ತಿಂಗಳವರೆಗೆ ಮಗುವಿಗೆ ಯಾವ ವಿಧದ ಆಹಾರ (ಹಾಲು) ಸಿಗುವುದೆಂಬುವುದರ ಮೇಲೆ ಆ ಮಗುವಿನ ಶಾರೀರಿಕ ಮತ್ತು ಮಾನಸಿಕ ಬೆಳವಣಿಗೆಯು ನಿಂತಿದೆ.

ಕಳೆದ ಹತ್ತು ವರ್ಷಗಳಲ್ಲಿ, ಮಗುವಿಗೆ ತನ್ನ ಎದೆಯ ಹಾಲು ಕುಡಿಸದೇ ಡಬ್ಬಗಳಲ್ಲಿ ದೊರೆಯುವ ಪುಡಿಯಿಂದ ತಯಾರಿಸಿದ ಹಾಲನ್ನುಣ್ಣಿಸುತ್ತಿರುವ ತಾಯಂದಿರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದಕ್ಕೆ ಕಾರಣ—ಇಂತಹ ಹಾಲುಪುಡಿಯನ್ನು ತಯಾರಿಸುತ್ತಿರುವ ಸಂಸ್ಥೆಗಳಿಂದ ಭಾರೀ ಪ್ರಚಾರ. ಈ ಬಗ್ಗೆ ತನ್ನ ಕಾಳಜಿಯನ್ನು ವ್ಯಕ್ತಪಡಿಸುತ್ತ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯೂ.ಎಚ್.ಓ.) ನಿರ್ದೇಶಕರಾದ ಜನರಲ್ ಹಾಫ್‌ಡನ್ ಮೆಹಲರ್‌ರವರು ಹೇಳಿದರು—ಡಬ್ಬದ ಹಾಲು ಕುಡಿಯುವ ಮಕ್ಕಳಲ್ಲಿ ಸಾವಿನ ಪ್ರಮಾಣ ತಾಯಿಯ ಎದೆ ಹಾಲನ್ನು ಕುಡಿಯುವ ಮಕ್ಕಳಿಗಿಂತ ಹೆಚ್ಚಾಗಿದೆ. ಅಲ್ಲದೇ, ಆರು ತಿಂಗಳಿಗಿಂತಲೂ ಕಡಿಮೆ ಅವಧಿಗೆ ತಾಯಿಯ ಹಾಲನ್ನು ಕುಡಿಯುವ ಮಕ್ಕಳಲ್ಲೂ ಈ ಅಂಶವನ್ನು ಗಮನಿಸಬಹುದು.

ಭಾವೀ ಮಾತೆಯರು ಸಂತೃಪ್ತಿಯಿಂದ ತಮ್ಮ ಮಕ್ಕಳಿಗೆ ಹಾಲುಣ್ಣಿಸುವ ಪ್ರವೃತ್ತಿಯನ್ನು ಬೆಳೆಸಲೋಸುಗ, ಅಲ್ಲದೆ, ಅವರಿಗೆ ತಾಯಿಯ ಹಾಲು ಮಕ್ಕಳಿಗೆ ಎಷ್ಟು ಉಪಯೋಗಕರ ಎಂಬುದನ್ನು ಮನವರಿಕೆ ಮಾಡಿಕೊಡಲು ಸರ್ವೋತ್ತಮ ರೀಡರ್ಸ್ ಡೈಜೆಸ್ಟ್ ಮಾಸಿಕವು ಇಬ್ಬರು ಪ್ರಸಿದ್ಧ ವೈದ್ಯರುಗಳನ್ನು—ಬೊಂಬಾಯಿಯ ವಿಶ್ವವಿದ್ಯಾಲಯದಲ್ಲಿ ಮಕ್ಕಳ ಚಿಕಿತ್ಸಕರಾದ (ಅವೈತನಿಕ) ಪ್ರೊಫೆಸರ್ ಡಾ. ಎಸ್. ಎಂ. ಮರ್ಚೆಂಟ್ ಮತ್ತು ಬೊಂಬಾಯಿಯ ಟೋಪಿವಾಲಾ ನೇಶನಲ್ ಮೆಡಿಕಲ್ ಕಾಲೇಜಿನಲ್ಲಿ ಚಿಕಿತ್ಸಕ

ಡಿಸೆಂಬರ್ ೧೯೮೪ರ ರೀಡರ್ಸ್ ಡೈಜೆಸ್ಟ್ ಸರ್ವೋತ್ತಮ್‌ನಲ್ಲಿ ಪ್ರಕಟಗೊಂಡ ರೂಮೀ ಚಿನಾಯ್‌ರವರ "ಸ್ತನ ಪಾನ್, ಕುಛ್ ಅನ್ ಜಾನ್ ತಥ್ಯ" ಲೇಖನದ ಸಂಗ್ರಹಾನುವಾದ.

ರಾದ (ಅವೈತನಿಕ) ಪ್ರೊಫೆಸರ್ ಡಾ|| ಆರ್.ಕೆ. ಆನಂದ—ಸಂಪರ್ಕಿಸಿ ವಿಚಾರ ವಿನಿಮಯ ಮಾಡಿತು. ಆ ಪ್ರಶ್ನೋತ್ತರಗಳು ಈ ಕೆಳಕಂಡಂತಿವೆ.

ತಾಯಿಯ ಹಾಲು ಮಕ್ಕಳಿಗೇಕೆ ತುಂಬಾ ಮಹತ್ವ ?

ತಾಯಿಯ ಹಾಲು ಮಗುವಿನ ಪಚನಕ್ರಿಯೆಗೆ ಹಾಗೂ ಮಗುವಿನ ಶಾರೀರಿಕ ವಿಕಾಸಕ್ಕೆ ಅತ್ಯಗತ್ಯವಾದ ಸಂಪೂರ್ಣ ಪ್ರಾಕೃತಿಕವಾದ ಆಹಾರ. ಪ್ರೋಟೀನ್, ಕಾರ್ಬೋಹೈಡ್ರೇಟ್, ಮೇದಸ್ಸು, ಖನಿಜ ಮತ್ತು ಜೀವಸತ್ವಗಳನ್ನಲ್ಲದೆ ತಾಯಿಯ ಹಾಲಿನಲ್ಲಿ ಇಮ್ಯಾನೋ ಗ್ಲೋಬುಲಿನ್‌ನಂತಹ ತತ್ವಗಳೂ ಇರುತ್ತವೆ. ಇದು ಮಗುವಿಗೆ ಬರುವ ಕೆಮ್ಮು, ಭೇದಿ, ಗೂರಲು ಮತ್ತು ಎಗ್ಜಿಮಾದಂತಹ ಅಲರ್ಜಿಯಿಂದುಂಟಾಗುವ ರೋಗಗಳನ್ನು ತಡೆಯುವುದು. ಅಲ್ಲದೆ, ತಾಯಿಯ ಹಾಲು ಸ್ಟರ್‌ಲೈಸ್ (ಕ್ರಿಮಿಗಳನ್ನು ನಾಶಪಡಿಸದೆಯೇ) ಮಾಡದೆಯೇ ವಿಶುದ್ಧವಾಗಿರುತ್ತದೆ. ಈ ಹಾಲು ಸದಾ ತಾಜಾ ರೂಪದಲ್ಲಿ ದೊರೆಯುತ್ತದೆ. ತಾಯಿಯ ಹಾಲು ಕುಡಿಯುವಾಗ ಮಗು ತಾಯಿಯ ಸ್ತನಗಳನ್ನು ಹೀರಿದಾಗ ಮಗುವಿಗೂ ತೃಪ್ತಿ ಸಿಗುವುದಲ್ಲದೆ, ತಾನು ಸುರಕ್ಷಿತ ಎಂಬ ಮನೋಭಾವನೆಯೂ ಬೆಳೆಯುತ್ತದೆ.

ಮಗು ಹುಟ್ಟಿದ ಮೇಲೆ ಮಗುವಿಗೆ ತಾಯಿಯು ತನ್ನ ಹಾಲನ್ನು ಯಾವಾಗ ಕುಡಿಸಲು ಪ್ರಾರಂಭಿಸಬೇಕು ?

ಆದಷ್ಟು ಶೀಘ್ರ ಕುಡಿಸುವುದು ಒಳ್ಳೆಯದು. ಆಸ್ಪತ್ರೆಗಳಲ್ಲಿ ನಾವು ಮಗು ಹುಟ್ಟಿದ ೪೫ ನಿಮಿಷಗಳೊಳಗೆ ಆರೋಗ್ಯವಂತ ಮಕ್ಕಳು ತಾಯಿಯ ಹಾಲನ್ನು ಕುಡಿಯಲು ಪ್ರಾರಂಭ ಮಾಡುತ್ತವೆ. ಆಪರೇಶನ್ ಮೂಲಕ ಹುಟ್ಟಿದ ಮಕ್ಕಳಿಗೂ ತಾಯಿಗೆ ಮೂರ್ಛಾವಸ್ಥೆಯನ್ನು ತಲುಪುವ ಔಷಧಿಯ ಕೊಟ್ಟ ಪ್ರಭಾವ ಕುಗ್ಗಿದೊಡನೆಯೇ, ಹಾಲು ಕುಡಿಸಲು ಹೇಳುತ್ತೇವೆ. ಹುಟ್ಟಿದ ಒಂದು ಗಂಟೆಯವರೆಗೆ ಮಗುವಿಗೆ ಮೊಲೆ ಹಾಲು ಕುಡಿಯುವ ತೀವ್ರ ಇಚ್ಛೆಯಿರುತ್ತದೆ. ಕಡೆಗೆ ಮಗುವಿಗೆ ನಿದ್ದೆ ಬರಲಾರಂಭಿಸುತ್ತದೆ.

'ಹಳದಿ ಹಾಲು' ಎಂದರೇನು ? ಅದರಿಂದ ಮಗುವಿಗೇನು ಲಾಭ ?

ಮಗು ಹುಟ್ಟಿದ ಮೂರ್ನಾಲ್ಕು ದಿನಗಳವರೆಗೆ ತಾಯಿಯ ಎದೆಯಲ್ಲಿ ಸಂಪೂರ್ಣ ಪ್ರಮಾಣದಲ್ಲಿ ಪರಿಪಕ್ವ ಹಾಲು ಉತ್ಪತ್ತಿಯಾಗುವುದಕ್ಕೆ ಮೊದಲು

ಹಳದಿ ಹಾಲಿನಂತಹ ತರಲತೆ ಸ್ರವಿಸುತ್ತದೆ. ಇದಕ್ಕೆ ಹಳದಿ ಹಾಲು (ಕೋಲೋಸ್ಟ್ರಮ್) ಎನ್ನುತ್ತಾರೆ. ಇದರಲ್ಲಿ ಸಾಕಷ್ಟು ಪೋಷಕಾಂಶಗಳಿದ್ದು, ರೋಗ ನಿರೋಧಕ ಶಕ್ತಿಯನ್ನು ಹೊಂದಿರುತ್ತದೆ. ಈ ಹಾಲು ಮಗುವಿಗೆ ತುಂಬಾ ಲಾಭಕಾರಿ; ಇದು ಅತ್ಯಲ್ಪ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ಆದರೂ ಮೊದಲ ಮೂರ್ನಾಲ್ಕು ದಿನಗಳವರೆಗೆ ಶಿಶುವಿನ ಅಗತ್ಯಕ್ಕಾಗಿ ಸಾಕಷ್ಟಾಗುತ್ತದೆ. ಈ ಹಾಲನ್ನುಣಿಸುವುದರಿಂದ ತಾಯಿಯ ನೈಸರ್ಗಿಕ ಹಾಲೂ ಶೀಘ್ರವೇ ಇಳಿಯಲಾರಂಭಿಸುತ್ತದೆ.

ಮೊಲೆಹಾಲು ಶೀಘ್ರ ಪ್ರಾರಂಭಿಸುವುದರಿಂದ ಶಿಶು ತಾನು ಸುರಕ್ಷಿತನೆಂಬ ಭಾವನೆಯನ್ನನುಭವಿಸುವುದೇ ?

ಹೌದು. ಸ್ತನಪಾನದಿಂದ ತಾಯಿ ಮತ್ತು ಮಗುವಿನ ಪರಸ್ಪರ ಆಸಕ್ತಿ ಹೆಚ್ಚು ಬಲಗೊಳ್ಳುತ್ತದೆ. ಹುಟ್ಟಿದೊಡನೆಯೇ ಮಗು ಮತ್ತು ತಾಯಿ ಎಷ್ಟು ಸಮೀಪದಲ್ಲಿರುವರೋ ಅಷ್ಟು ಅವರ ಪರಸ್ಪರ ಆಸಕ್ತಿ ಗಾಢವಾಗುತ್ತದೆ. ಇದೀಗ ತಾನೇ ಅಮೇರಿಕಾದಲ್ಲಿ ಕೈಗೊಳ್ಳಲಾದ ಒಂದು ಸರ್ವೇಕ್ಷಣೆಯಿಂದ, ಡಬ್ಬದ ಹಾಲು ಕುಡಿಯುವ ಮಕ್ಕಳಲ್ಲಿ, ತಾಯಿಯ ಹಾಲು ಕುಡಿಯುವ ಮಕ್ಕಳಿಗಿಂತ ಶಾರೀರಿಕ ದುರ್ಬಲತೆ ಹೆಚ್ಚೆಂಬ ಅಂಶ ಬೆಳಕಿಗೆ ಬಂದಿದೆ. ಮಕ್ಕಳಿಗೆ ಪರಂಪರಾಗತವಾಗಿ ಹಾಲುಣ್ಣಿಸುವ ಏಶಿಯಾ ಹಾಗೂ ಆಫ್ರಿಕಾ ದೇಶಗಳ ಮಕ್ಕಳ ಕುತ್ತಿಗೆ ಶೀಘ್ರವೇ ಬಲಗೊಂಡು, ಮಗು ಬೇಗನೇ ಕೂರುವುದು, ನಡೆಯುವುದು ಮತ್ತು ಮಾತನಾಡುವುದನ್ನು ಪ್ರಾರಂಭಿಸುತ್ತದೆಂಬ ಅಂಶವೂ ಗಮನಕ್ಕೆ ಬಂದಿದೆ. ಡಬ್ಬದ ಹಾಲು ಕುಡಿಯುವ ಮಕ್ಕಳಿಗಿಂತ ಇಂಥ ಮಕ್ಕಳಲ್ಲಿ ಹೆಚ್ಚು ಆತ್ಮವಿಶ್ವಾಸವಿದ್ದು ಈ ಮಕ್ಕಳ ಭಾವನಾತ್ಮಕ ಮಟ್ಟ ಹೆಚ್ಚು ಸ್ಥಿರವಾಗಿರುತ್ತದೆ.

ಮಗು ಬಯಸಿದಾಗಲೆಲ್ಲಾ ಹಾಲುಣ್ಣಿಸಬೇಕೆ? ಎಷ್ಟೆಷ್ಟು ವೇಳೆಗೆ ಹಾಲುಣಿಸಬೇಕು ?

ಮಗು ಬಯಸಿದಾಗಲೆಲ್ಲಾ ಅದಕ್ಕೆ ಹಾಲುಣ್ಣಿಸಿ; ಮಗು ಎಷ್ಟು ಹೊತ್ತು ಹಾಲು ಕುಡಿಯುವುದೋ ಅಷ್ಟು ಹೊತ್ತು ಅದಕ್ಕೆ ಮೊಲೆಯುಣ್ಣಲು ಬಿಡಿ. ಒಂದು ವೇಳೆ ಮೊಲೆ, ಹಾಲಿನಿಂದ ತುಂಬಿದ್ದರೆ ಎರಡನೇ ಬಾರಿ ಹಾಲುಣಿಸುವುದರ ನಡುವಿನ ಅಂತರ ಮೂರು ಗಂಟೆಗಳಿಗಿಂತ ಹೆಚ್ಚಾಗಬಾರದು ಮತ್ತು

ಒಂದು ವೇಳೆ ಹಾಲು ಕುಡಿಯುವ ವೇಳೆಯಲ್ಲಿ ಮಗು ನಿದ್ರಿಸುತ್ತಿದ್ದರೆ ಮಗುವನ್ನು ಎಚ್ಚರಿಸಿ. ಸರಿಯಾದ ವಿಧಾನವೇನೆಂದರೆ—ಮಗುವಿಗೆ ಒಂದೇ ಮೊಲೆಯಿಂದ ಮಗುವಿನ ಹೀರುವ ಗತಿ ಮಂದವಾಗುವವರೆಗೂ ಹಾಲುಣಿಸಬೇಕು. ಮೊಲೆಯಲ್ಲಿ ಇನ್ನು ಹಾಲು ಇಲ್ಲವೆಂಬ ಅನುಭವವಾದಾಗ ಎರಡನೇ ಮೊಲೆಯಿಂದ ಹಾಲುಣಿಸಬೇಕು. ಒಂದೇ ಸಮನೆ ಹಾಲು ಕುಡಿಯುತ್ತಿದ್ದರೆ ಒಂದು ಮೊಲೆಯ ಹಾಲನ್ನು ಮಗು ಹತ್ತು ನಿಮಿಷದಲ್ಲಿ ಕುಡಿದು ಮುಗಿಸುತ್ತದೆ, ಆದಾಗ್ಯೂ ಪ್ರಾರಂಭದ ಕೆಲವು ದಿನಗಳಲ್ಲಿ ಮಗು ಹಾಲು ಕುಡಿಯುತ್ತಾ ಎರಡು ಅಥವಾ ಮೂರು ನಿಮಿಷಗಳಲ್ಲೇ ನಿದ್ರಿಸಿಬಿಡುತ್ತದೆ.

ಸ್ತನಪಾನದಿಂದ ಮಗುವಿನ ಹೊಟ್ಟೆಯಲ್ಲಿ ನೋವು ಕಾಣಿಸಿಕೊಳ್ಳುವುದೇ ? ಇದಕ್ಕೇನು ಚಿಕಿತ್ಸೆ ?

ತಾಯಿಯ ಹಾಲು ಅಥವಾ ಡಬ್ಬದ ಹಾಲು ಕುಡಿಸುವುದರಿಂದ ಸಾಮಾನ್ಯವಾಗಿ ಮಗುವಿನ ಹೊಟ್ಟೆಯಲ್ಲಿ ತೀವ್ರ ನೋವು (ಉದರ ಶೂಲೆ) ಕಾಣಿಸಿಕೊಳ್ಳುವುದು. ಇದಕ್ಕೆ ಕಾರಣ—ಮಗು ಹಾಲು ಕುಡಿಯುವಾಗ ಗಾಳಿಯನ್ನೂ ಎಳೆದುಕೊಳ್ಳುತ್ತದೆ. ಈ ಗಾಳಿ ಹೊಟ್ಟೆಯಲ್ಲಿ ತುಂಬಿಕೊಳ್ಳುವುದು. ಆಗ ಹೊಟ್ಟೆ ಉಬ್ಬಿ ಮಗು ತನ್ನ ಕಾಲುಗಳನ್ನು ಮುದುಡಿಕೊಳ್ಳುತ್ತದೆ. ಆಗ ಮಗು ಅಳಲಾರಂಭಿಸುತ್ತದೆ. ಇದರಿಂದ ಪಾರಾಗಲು ತಾಯಿ ಪ್ರತಿ ಬಾರಿಯೂ ಮಗು ಹಾಲು ಕುಡಿದಾದ ಮೇಲೆ ಮಗುವನ್ನು ಹೆಗಲ ಮೇಲೆ ಮಲಗಿಸಿಕೊಂಡು ಅದರ ಬೆನ್ನನ್ನು ಅದಕ್ಕೆ ತೇಗು ಬರುವವರೆಗೂ ಸವರುತ್ತಿರಬೇಕು. ಈ ಲಕ್ಷಣಗಳು ಸಾಮಾನ್ಯವಾಗಿ ಮಗುವಿಗೆ ಮೂರು ತಿಂಗಳಾಗುವ ಹೊತ್ತಿಗೆ ಮರೆಯಾಗಿಬಿಡುತ್ತದೆ.

ಉದ್ಯೋಗಸ್ಥ ಮಹಿಳೆಯರು ತಮ್ಮ ಮಗುವಿಗೆ ಹಾಲು ಕುಡಿಸಬಹುದೇ?

ಉದ್ಯೋಗಸ್ಥ ಮಹಿಳೆಯರು ಅವರ ಹೆರಿಗೆ ರಜಾದ ಮೂರು ತಿಂಗಳ ಅವಧಿಯಲ್ಲಿ ತಮ್ಮ ಎದೆಹಾಲನ್ನು ಕೊಡಬೇಕು. ಈ ಅವಧಿಯಲ್ಲಿಯೇ ಮಗುವಿನ ಬೆಳವಣಿಗೆ ಶೀಘ್ರ ಗತಿಯುಳ್ಳದ್ದಾಗುವುದು. ಕಡೆಗೆ ಅವರು ಉದ್ಯೋಗಕ್ಕೆ ಹೋಗುವ ವೇಳೆಗೆ ಮೊದಲು ಹಾಲುಣ್ಣಿಸಿ ಹೋಗಬಹುದು. ಮರಳಿಬಂದು ಸಂಜೆ ಮತ್ತು ರಾತ್ರಿ ವೇಳೆಗೆ ಹಾಲು ಉಣ್ಣಿಸುವ ಕ್ರಮವನ್ನು ಹೆಚ್ಚಿಸಿಕೊಳ್ಳ

ಬಹುದು. ಉದ್ಯೋಗಸ್ಥ ಮಹಿಳೆಯರು ಕೈಯಿಂದಲೂ ತಮ್ಮ ಎದೆ ಹಾಲನ್ನು ಸುವಿಧಾನುಸಾರ ತೆಗೆದು ಮಗುವಿಗೆ ಚಮಚದ ಮೂಲಕ ಕುಡಿಸಬಹುದು.

ಕೈಯಿಂದ ಹಾಲು ತೆಗೆಯುವುದು ಹೇಗೆ?

ಸ್ತನವನ್ನು ಎರಡೂ ಕೈಯಿಂದ ಹಿಡಿದು ಮೇಲ್ಭಾಗದಿಂದ ಒತ್ತಲು ಪ್ರಾರಂಭಿಸಿ. ಕಾರಣ—ಹಾಲು ಉತ್ಪತ್ತಿಯಾಗುವುದು ಈ ಭಾಗದಲ್ಲಿಯೇ. ನಂತರ ಸ್ತನ ಪರಿವೇಶದ ಕೆಳಗಿರುವ ಕಪ್ಪು ಗೋಳಾಕಾರದ ಭಾಗದೆಡೆಗೆ ಒತ್ತುತ್ತಿರಿ ಕಾರಣ—ಅಲ್ಲಿಯೇ ಹಾಲು ಜಮಾಯಿಸಿರುತ್ತದೆ. ಹೀಗೆ ೧೦ ರಿಂದ ೧೨ ಬಾರಿ ಮಾಡಿ. ಕಡೆಗೆ ಆ ಕಪ್ಪು ಭಾಗದ ಹಿಂಭಾಗವನ್ನು ಬೆರಳಿನಿಂದ ಒಂದೇ ಸಮನೆ ಒತ್ತಿ ಹಿಂಡಿ, ಬರುವ ಹಾಲನ್ನು ಒಂದು ಬಟ್ಟಲಿಗೆ ತುಂಬಿಸಿಟ್ಟು ಕೊಳ್ಳಿ. ಈ ರೀತಿ ತೆಗೆದ ಹಾಲು ಫ್ರಿಜ್‌ನಲ್ಲಿ ೪೮ ಗಂಟೆಗಳ ಕಾಲ ತಾಜಾ ರೂಪದಲ್ಲಿಯೇ ಇರುತ್ತದೆ.

ಸ್ತನಾಗ್ರದ ರಕ್ಷಣೆಗಾಗಿ ಯಾವುದಾದರೂ ಸಲಹೆ?

ನಿಮ್ಮ ಸ್ತನಗಳು ಹಾಲಿನಿಂದ ತುಂಬಿದಾಗ ಮಗುವಿಗೆ ಹಾಲುಣ್ಣಿಸಿ. ಮುಂದೆ ಬಾಗಿ, ಮಗುವನ್ನು ಸರಿಯಾಗಿ ಒತ್ತಿಕೊಂಡು (ಮಗುವಿನ ಎದೆ ನಿಮ್ಮೆದೆಗೆ ತಾಗಿರಲಿ, ಸ್ತನಾಗ್ರ ಭಾಗ ಪೂರ್ಣವಾಗಿ ಅವನ ತುಟಿಯೊಳಗಿರಲಿ) ಮಗು ನಿಮ್ಮ ಸ್ತನಾಗ್ರವನ್ನು ಎಳೆದು ಚೀಪದಂತೆ ನೋಡಿಕೊಳ್ಳಿ. ಹಾಲುಣಿಸು ವುದಕ್ಕೂ ಮೊದಲು ಕೈಯಿಂದ ಒತ್ತಿ ಸ್ವಲ್ಪ ಹಾಲು ಹೊರಹೋಗುವಂತೆ ನೋಡಿ ಕೊಳ್ಳಿ. ಆಗ ಆ ಭಾಗ ಮೃದುವಾಗಿ ಮಗು ಸ್ತನಾಗ್ರವನ್ನು ಬಾಯೊಳಗೆ ಹಾಕಿಕೊಳ್ಳುವುದು. ಪ್ರತಿ ಬಾರಿಯೂ ಮಗುವಿಗೆ ಹಾಲುಣಿಸಿದ ಮೇಲೆ ಸ್ತನಾಗ್ರವನ್ನು ಸ್ವಚ್ಛಮಾಡಿಕೊಳ್ಳಿ. ಒಂದು ವೇಳೆ ಮಗುವಿಗೆ ಹಲ್ಲು ಬರುವ ವೇಳೆಗೆ ಮಗು ಸ್ತನಾಗ್ರವನ್ನು ಕಚ್ಚಿದರೆ ಅವನ ಒಸಡುಗಳ ಮಧ್ಯೆ ಬೆರಳಿಟ್ಟು 'ಹೀಗೆಲ್ಲಾ ಕಚ್ಚಬಾರದು' ಎಂದು ಕಠೋರವಾಗಿ ಹೇಳಿ.

ಸ್ತನ ಹುಣ್ಣು ಎಂದರೇನು? ಆಗ ತಾಯಿ ಏನು ಮಾಡಬೇಕು?

ಹಾಲುಣ್ಣಿಸಿದ ನಂತರವೂ ಮೊಲೆಯಲ್ಲಿ ಹಾಲುಳಿದು ಅದರಿಂದ ಹುಣ್ಣಾಗ ಬಹುದು. ಸ್ತನದ ಯಾವುದೋ ಒಂದು ಭಾಗದಲ್ಲಿ ನೋವು ಪ್ರಾರಂಭವಾಗಿ ಅದು ಊದಿಕೊಂಡು ಕೆಂಪಗಾಗುವುದಲ್ಲದೆ ಬಿಸಿಯಾಗುತ್ತದೆ. ಯಾವ ಆಸ್ಪತ್ರೆ

ಗಳಲ್ಲಿ ಪ್ರತಿ ಮೂರ್‍ನಾಲ್ಕು ಗಂಟೆಗಳಿಗೊಮ್ಮೆ ಹಾಲುಣ್ಣಿಸುವ ವ್ಯವಸ್ಥೆಯನ್ನು ಕಠೋರವಾಗಿ ಪಾಲಿಸಲಾಗುವುದೋ ಮತ್ತು ತಾಯಿ ಹಾಗೂ ಡಬ್ಬಿಯ ಹಾಲನ್ನು ಒಟ್ಟೊಟ್ಟಿಗೇ ಕುಡಿಸಲಾಗುವುದೋ ಅಂಥಲ್ಲಿ ಸಾಮಾನ್ಯವಾಗಿ ತಾಯಿಯ ಸ್ತನಗಳಲ್ಲಿ ಹುಣ್ಣಾಗುವುದು. ಮಗುವಿಗೆ ಹಾಲುಣ್ಣಿಸಿ ಅಥವಾ ಕೈಯಿಂದ ಹಾಲು ತೆಗೆದು ಸ್ತನಗಳನ್ನು ಖಾಲಿಯಾಗಿಟ್ಟುಕೊಳ್ಳಿ. ಬಿಸಿ ಅಥವಾ ತಣ್ಣನೆಯ ನೀರಿನಿಂದ ಏಟು ಕೊಟ್ಟು ಎಸ್ಪಿರೀನ್‌ನಂತಹ ನೋವು ನಿವಾರಕ ಔಷಧಿಯನ್ನು ಸೇವಿಸಿ ಸ್ತನಗಳ ನೋವಿನಿಂದ ಮುಕ್ತರಾಗಿರಿ. ಒಂದು ವೇಳೆ ಸ್ತನಾಗ್ರದಿಂದ ಕೀವು ಬರಲಾರಂಭಿಸಿದರೆ ಆ ಮೊಲೆಯಿಂದ ಹಾಲು ಕುಡಿಸಬೇಡಿ. ಆದಾಗ್ಯೂ ಹುಣ್ಣು ವಾಸಿಯಾಗದಿದ್ದರೆ ಆಪರೇಶನ್ ಮಾಡಿಸಿ ಕೊಂಡು ಕೀವನ್ನು ತೆಗೆಸಿಕೊಳ್ಳಬೇಕಾಗುವುದು.

ಮಗುವಿಗೆ ಹಾಲು ಕುಡಿಸುವುದನ್ನು ಯಾವಾಗ ನಿಲ್ಲಿಸಬೇಕು? ಆಗ ಮಗುವಿಗೆ ಯಾವ ಆಹಾರವನ್ನು ಕೊಡಬೇಕು?

ಈ ಬಗ್ಗೆ ಯಾವುದೇ ನಿಯಮಗಳಿಲ್ಲ. ಆರು ತಿಂಗಳವರೆಗೆ ಪೂರ್ಣವಾಗಿ ತಾಯಿಯ ಹಾಲನ್ನು ಕುಡಿಯುವ ಮಗುವಿಗೆ ತಾಯಿಯ ಹಾಲಿನಿಂದ ಎಲ್ಲಾ ಪೋಷಕಾಂಶಗಳೂ ದೊರೆಯುತ್ತವೆ. ನೀವು ಬಯಸುವವರೆಗೂ ಮಗುವಿಗೆ ನಿಮ್ಮ ಎದೆ ಹಾಲನ್ನು ನೀವು ಕುಡಿಸಬಹುದು. ಮೊದಲು ನಿಮ್ಮ ಹಾಲು ಕುಡಿಸಿ. ಕಡೆಗೆ ಚೆನ್ನಾಗಿ ಅರೆದ ಬಾಳೆಹಣ್ಣು, ತರಕಾರಿಗಳು, ಅನ್ನ, ಬೇಳೆ, ಬೇಯಿಸಿದ ಮೊಟ್ಟೆ, ಎಲುಬಿನೊಳಗಿನ ಚರ್ಬಿ ಮತ್ತು ಮಾಂಸದ ಚಿಕ್ಕ ಚಿಕ್ಕ ಚೂರುಗಳನ್ನು ಕೊಡಿ.

ಹಾಲುಣ್ಣಿಸುವುದರಿಂದ ತಾಯಿಯ ಶರೀರ ಸೌಂದರ್ಯ ಕುಂದುತ್ತ ದೆಯೇ?

ಇಲ್ಲ. ಇದಕ್ಕೆ ಪ್ರತಿಯಾಗಿ, ಹಾಲುಣಿಸುವುದರಿಂದ ತಾಯಿಯ ಶರೀರ ಮತ್ತೂ ಸುಂದರವಾಗುತ್ತದೆ. ಗರ್ಭಾವಸ್ಥೆಯಲ್ಲಿ ಹೆಚ್ಚಾದ ತಾಯಿಯ ತೂಕ ಹಾಲುಣ್ಣಿಸುವುದರಿಂದ ಕಡಿಮೆಯಾಗುತ್ತದೆ. ಯಾವ ತಾಯಿ ತನ್ನ ಎದೆ ಹಾಲನ್ನು ಮಗುವಿಗುಣ್ಣಿಸುವುದಿಲ್ಲವೋ ಅವಳು ಮಿಗಿಲಾದ ಕೊಬ್ಬನ್ನು ಕಡಿಮೆಗೊಳಿಸಿಕೊಳ್ಳಲು ಸಂತುಲಿತ ಆಹಾರವನ್ನು ಸೇವಿಸಬೇಕಾಗುವುದು. ಹೆಚ್ಚು ತಾಯಂದಿರಿಗೆ, ಮಗುವಿಗೆ ಹಾಲುಣಿಸಿದರೆ ತಮ್ಮ ಸ್ತನಗಳು

ಜೋತಾಡುತ್ತವೆಯೆಂಬ ಚಿಂತೆ ಕಾಡಿಸುತ್ತಿರುತ್ತದೆ. ಆದರೆ ಅವರ ಈ ಅಭಿಪ್ರಾಯ ತಪ್ಪು. ಗ್ರಂಥಿಗಳ ಅವ್ಯವಸ್ಥೆ ದಪ್ಪೂತಿತನ ಮತ್ತು ವಯಸ್ಸಿನಿಂದಾಗ ಸ್ತನಗಳು ಜೋಲು ಬೀಳುತ್ತವೆ. ಗರ್ಭಾವಸ್ಥೆಯ ಕಡೆಯ ಮೂರು ತಿಂಗಳುಗಳಲ್ಲಿ ಹಗಲು-ರಾತ್ರಿ ಚೋಲಿ (ಬ್ರಾ) ಧರಿಸಿ ಸ್ತನಗಳ ಗಾತ್ರವನ್ನು ಕಾಯ್ದಿಟ್ಟುಕೊಳ್ಳಿ.

ಹಾಲುಣಿಸುವ ತಾಯಂದಿರು ಶೀಘ್ರ ಗರ್ಭವತಿಯರಾಗುವುದಿಲ್ಲವೆಂಬುದು ನಿಜವೇ?

ಹಾಲುಣಿಸುವ ತಾಯಿಂದಿರು ಶೀಘ್ರ ಗರ್ಭವತಿಯರಾಗುವುದಿಲ್ಲ. ಮಗು ಎದೆ ಹಾಲು ಕುಡಿಯುವುದರಿಂದ ಗರ್ಭಧಾರಣೆಯ ಹಾರ್ಮೋನ್‌ಗಳು ಕಾರ್ಯ ನಿರ್ವಹಿಸಲು ವಿಲಂಬವಾಗುತ್ತದೆ. ಆದರೂ ಗರ್ಭ ನಿರೋಧಕಗಳನ್ನು ಉಪಯೋಗಿಸುವುದು ಸುರಕ್ಷಿತ.

ಪ್ರತಿಯೊಬ್ಬ ತಾಯಿಯೂ ಮಗುವಿಗೆ ತನ್ನ ಎದೆ ಹಾಲನ್ನು ಕುಡಿಸಬಹುದೆ?

ಅಗತ್ಯವಾಗಿ ಕುಡಿಸಬೇಕು. ತಾಯಿ ಸಂತೋಷಚಿತ್ತದವಳಾಗಿದ್ದು, ಮಗುವಿಗೆ ತನ್ನೆದೆ ಹಾಲನ್ನು ಕುಡಿಸಲು ಹೆಮ್ಮೆಯನ್ನನುಭವಿಸಿದರೆ ಖಂಡಿತವಾಗಿಯೂ ಅವಳಿಗೆ ಯಶಸ್ಸು ಸಿಗುವುದು. ಈ ಭಾವನೆಗಳಿಲ್ಲದಿದ್ದರೆ ಅವಳ ಸ್ತನಗಳಿಂದ ಹಾಲು ಇಳಿಯುವುದು ನಿಂತುಹೋಗುತ್ತದೆ. ಪ್ರಾರಂಭದಲ್ಲಿ ಮಗು ತಾಯಿಯ ಸ್ತನಗಳನ್ನು ಸಾಮಾನ್ಯವಾಗಿ ಹೀರುವುದರಿಂದ ಸ್ತನಗಳಿಗೆ ಉತ್ತೇಜನ ಸಿಕ್ಕಿ ಹಾಲು ಇಳಿಯಲಾರಂಭಿಸುತ್ತದೆ.

ಎಂತಹ ಪರಿಸ್ಥಿತಿಗಳಲ್ಲಿ ಮೊಲೆ ಹಾಲು ಕುಡಿಸಬಾರದು?

ಒಂದು ವೇಳೆ ತಾಯಿಗೆ ರೇಡಿಯೋ ಆ್ಯಕ್ಟಿವ್ ಕಾಂಪಾಂಡ್, ಲೀಥಿಯಂ ಮತ್ತು ಎಂಟಿ ಮೆಟಾಬೋಲೈಟ್ ಔಷಧಿಗಳನ್ನು ಕೊಟ್ಟಾಗ ಎದೆ ಹಾಲುಣಿಸಬಾರದು. ಸಾಮಾನ್ಯವಾಗಿ ಉಪಯೋಗಿಸುವ ಔಷಧಿಗಳು ಹಾಲಿಗೆ ಬಂದರೂ ಔಷಧಿಯ ಪ್ರಮಾಣ ಮಗುವಿಗೆ ಕೆಡುಕಾಗದಷ್ಟಿರುತ್ತದೆ. ಆದರೂ ಒಂದು ವೇಳೆ ತಾಯಿ ಯಾವುದಾದರೂ ಔಷಧಿಯ ಸೇವನೆಯನ್ನು ಪ್ರಾರಂಭಿಸುವುದಾದರೆ ಮೊದಲು ವೈದ್ಯರ ಸಲಹೆಯನ್ನು ಪಡೆಯಬೇಕು.

ಒಬ್ಬ ತಾಯಿಯ ಎದೆಯ ಹಾಲು ಇನ್ನೊಬ್ಬ ತಾಯಿಯ ಎದೆ ಹಾಲಿಗಿಂತ ಭಿನ್ನವಾಗಿರುವುದೇ ?

ತಾಯಿಯ ಹಾಲು ಒಂದು ಸ್ಟ್ಯಾಂಡರ್ಡ್ ಉತ್ಪಾದನೆಯಲ್ಲ; ಅದರ ಗುಣ ಪ್ರತಿಯೊಬ್ಬ ತಾಯಿಯಲ್ಲೂ ಭಿನ್ನವಾಗಿರುತ್ತದೆ. ಅಲ್ಲದೆ, ಒಂದೇ ತಾಯಿಯಲ್ಲೂ ಬೇರೆ ಬೇರೆ ಸಮಯದಲ್ಲಿ ಭಿನ್ನವಾಗಿರುತ್ತದೆ.

ಗರ್ಭಿಣಿ ಮತ್ತು ಸ್ತನಪಾನ ನೀಡುವ ತಾಯಿಯಂದಿರಿಗೆ ಯಾವ ಆಹಾರವನ್ನು ಕೊಡಬೇಕು ;

ಒಂದು ವೇಳೆ ನೀವು ಪ್ರಾರಂಭದಿಂದಲೇ ಸಾಮಾನ್ಯ ಸಂತುಲಿತ ಆಹಾರವನ್ನು ಸೇವಿಸುತ್ತಿದ್ದರೆ ಅದರ ಪ್ರಮಾಣವನ್ನೇ ಸ್ವಲ್ಪ ಹೆಚ್ಚೆಚ್ಚುಗೊಳಿಸಿಕೊಳ್ಳಿ. ನಿಮ್ಮ ಆಹಾರದಲ್ಲಿ ಸಾಕಷ್ಟು ಬೇಳೆಗಳು, ಅವರೆ, ಹಸಿರು ತರಕಾರಿಗಳು ಆಯಾ ಕಾಲದ ಹಣ್ಣು ಹಂಪಲುಗಳು, ಹಾಲು, ಬೆಣ್ಣೆ ಮತ್ತು ಮೊಸರು ಇರಬೇಕು. ನೀವು ಒಂದು ವೇಳೆ ಮಾಂಸಾಹಾರಿಗಳಾಗಿದ್ದರೆ, ಮಾಂಸ ಮತ್ತು ಮೊಟ್ಟೆಯನ್ನು ತಿನ್ನಿ. ಆದರೆ ಹೆಚ್ಚು ಮಸಾಲೆ ಪದಾರ್ಥಗಳು, ಖಾರದ ವಸ್ತುಗಳಿರುವ ಆಹಾರವನ್ನು ಸೇವಿಸಬೇಡಿ. ಸಿಹಿ ಪದಾರ್ಥಗಳು ಮತ್ತು ತುಪ್ಪವನ್ನು ಹೆಚ್ಚು ತಿನ್ನಬೇಡಿ. ನೀರನ್ನು ಹೆಚ್ಚು ಪ್ರಮಾಣದಲ್ಲಿ ಕುಡಿಯಿರಿ.

ತಮ್ಮ ಎದೆಹಾಲನ್ನುಣ್ಣಿಸುವ ತಾಯಂದಿರು ಪಥ್ಯ ಮಾಡಬೇಕೆ ?

ಗರ್ಭನಿರೋಧಕ್ಕಾಗಿ ತಿನ್ನುವ ಮಾತ್ರೆಗಳನ್ನು ನಿಲ್ಲಿಸಿ. ಬೇರೆ ಯಾವುದಾದರೂ ಮಾರ್ಗವನ್ನು ಅನುಸರಿಸಿ. ನಿಕೋಟಿನ್ ಮತ್ತು ಮಾದಕ ಅಂಶಗಳು ಹಾಲಿನೊಂದಿಗೆ ಮಗುವಿನ ಹೊಟ್ಟೆಯನ್ನು ಪ್ರವೇಶಿಸುವುದರಿಂದ ಧೂಮಪಾನ ಮತ್ತು ಮದ್ಯಪಾನ ಮಾಡಬೇಡಿ. (ಒಂದೊಂದುಸಲ ಒಂದರ್ಧ ಗ್ಲಾಸ್ ವೈನ್ ಅಥವಾ ಬೀಯರ್) ಕುಡಿಯುವುದರಿಂದ ತೊಂದರೆಯಿಲ್ಲ.

ಡಿ. ಎನ್. ಶ್ರೀನಾಥ್

ಕೋಪದ ಬೆಂಕಿ ಮೊದಲು ಸುಡುವುದು, ಕೋಪಮಾಡಿಕೊಂಡವನನ್ನೆ. ಅದು ಬೇರೆಯವರನ್ನು ಮುಟ್ಟಬಹುದು. ಮುಟ್ಟದೆಯೇ ಇರಬಹುದು.

—ಸಾದಿ

ನವಿಲು

ನವಿಲ ಹೆಸರಿನಲ್ಲಿ ವ್ಯಕ್ತಿನಾಮಗಳನ್ನೂ ಸ್ಥಳನಾಮಗಳನ್ನೂ ಇಡುವ ಪದ್ಧತಿ ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಕರ್ನಾಟಕದ ಕದಂಬವಂಶದ ಆದ್ಯ ಪುರುಷನ ಹೆಸರು ಮಯೂರವರ್ಮ ಎಂದಿತ್ತು. ಪಲ್ಲವ ದೊರೆ ೩ನೆಯ ನಂದಿವರ್ಮನಿಗೆ ಮೈಲ್ಪಿ ಕಾವಲನ್ (ನವಿಲೂರ ರಕ್ಷಕ) ಎಂಬ ಬಿರುದಿದ್ದುದಾಗಿ ತಿಳಿದು ಬರುತ್ತದೆ. ಕೆಲವು ರಾಜರು ನವಿಲನ್ನು ತಮ್ಮ ಧ್ವಜದ ಲಾಂಛನವಾಗಿ ಮಾಡಿಕೊಂಡಿದ್ದರು. ಮಯೂರಧ್ವಜ ಎಂಬ ಹೆಸರು ಮಹಾಭಾರತದಲ್ಲಿ ಕಂಡುಬರುತ್ತದೆ. ತಮಿಳುನಾಡು ನವಿಲಿನ ಆರಾಧನೆಯ ಮೂಲ ನೆಲೆ. ಅಲ್ಲಿನ ಮುರುಘ ದೇವತೆಯ ಜೊತೆ ನವಿಲಿನ ಅವಿನಾಭಾವ ಸಂಬಂಧವಿದೆ. ಮುರುಘನ ವಾಹನ ನವಿಲು ಪೊಂಗಲ್ ಹಬ್ಬದ ಸಂದರ್ಭದಲ್ಲಿ ನವಿಲನ್ನು ಪೂಜಿಸುವ ಪದ್ಧತಿ ತಮಿಳುನಾಡಿನಲ್ಲಿದೆ. ತಂಜಾವೂರು ಜಿಲ್ಲೆಯ ಒಂದು ತಾಲ್ಲೂಕಿಗೆ ಮಯೂರಂ ಎಂಬ ಹೆಸರಿದೆ. ಅಲ್ಲಿರುವ ಮಯೂರನಾಥಸ್ವಾಮಿ ದೇವಾಲಯ ತುಂಬ ಪ್ರಸಿದ್ಧವಾದುದು. ಮಹಾರಾಷ್ಟ್ರದಲ್ಲಿ 'ಮೋರಗಾಂವ್' ಎಂಬ ಒಂದು ಹಳ್ಳಿಯಿದೆ. ಇಲ್ಲಿ ಕೂಡ ನವಿಲಿನ ಆರಾಧನೆ ಕಂಡುಬರುತ್ತದೆ. ಕರ್ನಾಟಕದಲ್ಲಿ ನವಿಲೂರು, ನವಿಲುಕಲ್ಲು, ನವಿಲುತೀರ್ಥ ಎಂಬ ಹೆಸರಿರುವ ಅನೇಕ ಊರುಗಳು ಇವೆ.

ಶಿಲ್ಪ, ನಾಟ್ಯ, ವಾಸ್ತುಕಲೆ, ಚಿತ್ರಕಲೆ, ಸಂಗೀತ ಮೊದಲಾದ ಕಲೆಗಳಲ್ಲಿಯೂ ನವಿಲಿನ ಬಳಕೆ ಕಂಡುಬರುತ್ತದೆ. ಇಸ್ಲಾಮಿಕ್ ಹಾಗೂ ಭಾರತೀಯ ವಾಸ್ತುಶಿಲ್ಪಗಳಲ್ಲಿ ನವಿಲಿಗೆ ವಿಶೇಷ ಆದ್ಯತೆ ದೊರಕಿದೆ. ದೇವಾಲಯಗಳಲ್ಲಿ, ಅರಮನೆಗಳಲ್ಲಿ, ವಾಸ್ತುಶಿಲ್ಪಕೇಂದ್ರಗಳನ್ನು ನವಿಲಿನ ವಿವಿಧ ಭಾವಭಂಗಿಯ ಚಿತ್ರಗಳನ್ನು ಬಿಡಿಸಿರುವುದನ್ನು ನಾವು ಕಾಣಬಹುದು. ನಾಣ್ಯಗಳನ್ನು ಟಂಕಿಸುವಾಗ ನವಿಲು ಮುದ್ರೆಯನ್ನು ಬಳಸುವ ಪದ್ಧತಿ ಗುಪ್ತರ ಕಾಲದಲ್ಲಿತ್ತು. ಇದೇ ಕಾಲದಲ್ಲಿ ಚಿನ್ನದ ನಾಣ್ಯಗಳ ಬಳಕೆಯೂ ವಿಪುಲವಾಗಿದ್ದು ಕುಮಾರಗುಪ್ತ ಎಂಬ ಅರಸು ನವಿಲು ಮುದ್ರೆಯುಳ್ಳ ಇಂಥ ನಾಣ್ಯಗಳನ್ನು ಅಪಾರ ಸಂಖ್ಯೆಯಲ್ಲಿ ಟಂಕಿಸಿದನೆಂದು ತಿಳಿದುಬರುತ್ತದೆ.

ಸಾಹಿತ್ಯದಲ್ಲಿ ನವಿಲು

ಶಿಷ್ಟ ಹಾಗೂ ಜನಪದ ಸಾಹಿತ್ಯದಲ್ಲಿ ನವಿಲನ್ನು ಕುರಿತ ವರ್ಣನೆ, ಪ್ರಶಂಸೆಯ ಮಾತುಗಳು ವಿಪುಲವಾಗಿ ಕಂಡುಬರುತ್ತದೆ. ಸಂಸ್ಕೃತ ಕವಿಗಳು,

ಕನ್ನಡ ಕವಿಗಳು ನವಿಲಿನ ನರ್ತನವನ್ನು, ಅದರ ವೈ ಸೊಬಗನ್ನು, ಅದರ ಭಾವಭಂಗಿಯನ್ನು ಎದೆದುಂಬ ಮನವುಬ್ಬುವಂತೆ ವರ್ಣಿಸಿದ್ದಾರೆ. ಸಂಸ್ಕೃತದಲ್ಲಿ 'ಸಂದೇಶ ಕಾವ್ಯ'ಗಳೆಂದು ಕರೆಯಲಾಗುವ ಕಾವ್ಯ ಪ್ರಕಾರದಲ್ಲಿ ನವಿಲಿಗೂ ಸ್ಥಾನದೊರಕಿರುವುದು ಕಂಡುಬರುತ್ತದೆ. ಮಯೂರ ಸಂದೇಶ, ಮಯೂರ ದೂತ ಎಂಬ ಕಾವ್ಯಗಳು ಕೂಡ ರಚಿತವಾಗಿವೆ. ನವಿಲಿನ ಅಂದ ಚಂದವನ್ನು ಸಹಜವಾಗಿ, ಸುಂದರವಾಗಿ ವರ್ಣಿಸಿರುವವರು ಜನಪದ ಕವಿಗಳು. ಅಲ್ಲಿನ ಗೀತೆಗಳಲ್ಲಿ, ತ್ರಿಪದಿಗಳಲ್ಲಿ ಶಿಷ್ಟ ಸಾಹಿತ್ಯದಲ್ಲಿ ದೊರೆಯುವುದಕ್ಕಿಂತ ಉತ್ಕೃಷ್ಟವಾದ ವರ್ಣನೆಗಳು ಕಂಡುಬರುತ್ತವೆ. 'ನವ್ವಾಲೆ' ಎಂಬ ಜನಪದ ಗೀತೆಯೊಂದು ನವಿಲಿನ ಸೊಬಗನ್ನು ಈ ರೀತಿ ಹಿಡಿದಿಟ್ಟಿದೆ.

ನವ್ವಾಲೆ ಬಂತಪ್ಪ ನವ್ವಾಲೇ
ಸೋಗೆಯ ಬಣ್ಣದ ನವ್ವಾಲೇ ॥ಪಲ್ಲವಿ॥

ಬತ್ತವ ಮೇಯೋದು ನವ್ವಾಲೇ—ಬತ್ತದ
ಹೊಟ್ಟೊಂದ ಮೇಯೋದು ನವ್ವಾಲೇ
ಬತ್ತವ ಕಾಯೋರು ಓಡೀಸ ಬಂದಾಗ
ಅತ್ತಿತ್ತ ಓಡೀತು ನವ್ವಾಲೆ ॥ ಪ ॥

ರಾಗೀಯ ಮೇಯೋದು ನವ್ವಾಲೇ—ರಾಗೀ
ಹೊಟ್ಟೊಂದ ಮೇಯೋದು ನವ್ವಾಲೇ
ರಾಗಿಯ ಕಾಯೋರು ಓಡೀಸ ಬಂದಾರೆ
ರಾಗವ ಹಾಡಿತು ನವ್ವಾಲೇ ॥ ಪ ॥

ಸರಸತಿ ಏರೋದು ನವ್ವಾಲೇ—ಅದು
ಸಾಸೀರ ಕಣ್ಣೀನ ನವ್ವಾಲೇ
ಸರಸತಿ ಏರಿಕೊಂಡು ನಲಿದಾಡಿ ಬರುವಾಗ
ಜಾಗರವಾಡಿತು ನವ್ವಾಲೇ ॥ ಪ ॥

ಆಧುನಿಕ ಕನ್ನಡ ಕವಿಗಳು ಕೂಡ ನವಿಲನ್ನು ಕುರಿತು ಚಂದದ ಪದ್ಯಗಳನ್ನು ರಚಿಸಿದ್ದಾರೆ. ಜಿ. ಪಿ. ರಾಜರತ್ನಂ ಮಕ್ಕಳಿಗಾಗಿ ರಚಿಸಿರುವ 'ನವಿಲು' ಅಂಥ ಪದ್ಯಗಳಲ್ಲೊಂದು.

ಮಯೂರ ಸಿಂಹಾಸನ

ಜಗತ್ತಿನ ಕಲಾ ಪ್ರಪಂಚದ ಅದ್ಭುತಗಳಲ್ಲಿ ಒಂದೆಂದು ಪ್ರಖ್ಯಾತವಾಗಿರುವ ಮಯೂರ ಸಿಂಹಾಸನದ ಕಥೆ ಕೂಡ ಅಷ್ಟೇ ರೋಚಕವಾದುದು. ಸೌಂದರ್ಯ,

ಕಲೆ, ಬೆಲೆ—ಈ ಎಲ್ಲದರಲ್ಲೂ ಇದನ್ನು ಸರಿಗಟ್ಟುವ ಇಂಥ ಇನ್ನೊಂದು ಕಲಾಕೃತಿಯೇ ಸೃಷ್ಟಿಯಾಗಿಲ್ಲ ಎಂಬಂತಹ ಖ್ಯಾತಿ ಮಯೂರ ಸಿಂಹಾಸನದ್ದು. ಷಾಜಹಾನ್ ಈ ಮಯೂರ ಸಿಂಹಾಸನದ ನಿರ್ಮಾತೃ. ಈತ ತನ್ನ ಬಳಿಯಿದ್ದ ಅಮೂಲ್ಯ ಸಂಪತ್ತಿನ ರಾಶಿಯನ್ನು ಸುರಿದು ಮಯೂರ ಸಿಂಹಾಸನವನ್ನು ಮಾಡಿಸಿದನಂತೆ. ಮೂಲಸಿಂಹಾಸನ ಮೂರೂವರೆ ಅಡಿ ಉದ್ದ, ಎರಡೂವರೆ ಅಡಿ ಅಗಲ, ಐದು ಅಡಿ ಎತ್ತರವಿತ್ತಂತೆ. ಈ ಸಿಂಹಾಸನದ ರಚನೆಗೆ ಬಳಸಲಾದ ಚಿನ್ನದ ಮೊತ್ತ ೧ ಲಕ್ಷ ತೊಲಗಳು; ವಜ್ರ, ವೈಢೂರ್ಯ, ಪಚ್ಚೆ, ಹವಳ ಮುಂತಾದ ಅಮೂಲ್ಯ ಹರಳುಗಳ ಮೊತ್ತ ೫೦೦ ಪೌಂಡುಗಳು. ಸಿಂಹಾಸನದ ರಚನೆಗೆ ತೆಗೆದುಕೊಂಡ ಕಾಲಾವಧಿ ಏಳು ವರ್ಷಗಳು. ಕ್ರಿ. ಶ. ೧೬೩೪ರಲ್ಲಿ ಈ ಸಿಂಹಾಸನದ ರಚನೆ ಮುಗಿಯಿತು. ಸಿಂಹಾಸನ ನಿರ್ಮಾಣವಾದ ಸ್ಥಳ ಆಗ್ರಾ. ಈ ಸಿಂಹಾಸನ ೧೭೩೯ರವರೆಗೆ ಭಾರತದಲ್ಲಿತ್ತು. ಅನಂತರ ನಾದಿರ್ ಷಾ ಎಂಬ ದೊರೆ ಇದನ್ನು ವಶಪಡಿಸಿಕೊಂಡು ಪರ್ಷಿಯಾಕ್ಕೆ ತೆಗೆದುಕೊಂಡು ಹೋದ. ಈಗ ಟೆಹರಾನಿನಲ್ಲಿ ಮಯೂರ ಸಿಂಹಾಸನ ಇದೇ ಎಂಬ ಅಭಿಪ್ರಾಯವಿದೆ. ಆದರೆ ಈ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇನ್ನೊಂದು ವಾದದ ಪ್ರಕಾರ ನಾದಿರ್ ಷಾ ತೆಗೆದುಕೊಂಡು ಹೋದ ಮಯೂರ ಸಿಂಹಾಸನ ಮಾರ್ಗ ಮಧ್ಯದಲ್ಲಿ ದರೋಡೆಗೊಳಗಾಗಿ ನಾಶವಾಯಿತು. ಅದರ ತುಣುಕೊಂದು ಆಗಾಮೊಹಮದ್ ಷಾ ಎಂಬುವವನ ಬಳಿಯಲ್ಲಿ ಉಳಿಯಿತು. ಅದರ ಆಧಾರದ ಮೇಲೆ ಆಗಾಮೊಹಮದ್ ಷಾ ಈಗಿರುವ ಮಯೂರ ಸಿಂಹಾಸನವನ್ನು ನಿರ್ಮಿಸಿದ. ಇದರ ಜೊತೆಗೆ ಇನ್ನೊಂದು ವಾದವೂ ಇದೆ. ಅದರ ಪ್ರಕಾರ ಮೂಲ ಮಯೂರ ಸಿಂಹಾಸನ ತನ್ನ ಕೆಲವು ಅಮೂಲ್ಯ ಹರಳುಗಳನ್ನು ಕಳೆದುಕೊಂಡು ಬ್ರಿಟಿಷರ ವಶವಾಯಿತು. ಬ್ರಿಟಿಷ್ ಸರ್ಕಾರ ಅದನ್ನು ಇಂಗ್ಲೆಂಡಿಗೆ ಸಾಗಿಸುವ ವ್ಯವಸ್ಥೆ ಮಾಡಿತು. ಮುಂಬಯಿ ಬಂದರಿನಿಂದ 'ಗ್ರೋಸೆವನೋರ್' ಎಂಬ ಹೆಸರಿನ ಹಡಗಿನಲ್ಲಿ ೧೮೭೨ರ ಜೂನ್ ತಿಂಗಳಿನ ಮೊದಲ ವಾರದಲ್ಲಿ ಮಯೂರ ಸಿಂಹಾಸನದ ಯಾನ ಪ್ರಾರಂಭವಾಯಿತು. ಮಾರ್ಗ ಮಧ್ಯದಲ್ಲಿ ಪೂರ್ವ ಆಫ್ರಿಕದ ಕರಾವಳಿಯಲ್ಲಿ ಈ ಹಡಗು ಅಪಘಾತಕ್ಕೀಡಾಯಿತು. ಆಗ ಮಯೂರ ಸಿಂಹಾಸನ ಸಮುದ್ರದ ಪಾಲಾಯಿತು. ಇದೇ ಮೂಲ ಮಯೂರ ಸಿಂಹಾಸನ. ಈ ಸಿಂಹಾಸನವನ್ನು ಹುಡುಕುವ, ಪತ್ತೆಹಚ್ಚುವ ಪ್ರಯತ್ನಗಳೂ ನಡೆದಿದ್ದು ಯಾವುದೇ ಯಶಸ್ಸು ಕಂಡಿಲ್ಲವೆಂದೂ ತಿಳಿದುಬರುತ್ತದೆ. ಒಟ್ಟಿನಲ್ಲಿ ಮಯೂರ ಸಿಂಹಾಸನದ ಸುತ್ತ ದಂತಕಥೆಯ

ಪರಿವೇಷ ಸುತ್ತಿಕೊಂಡು ಇತಿಹಾಸ ಮಬ್ಬಾಗಿದೆ. ಇಂದಿಗೂ ಚರಿತ್ರೆಯಲ್ಲಿ ಮಯೂರ ಸಿಂಹಾಸನದ ಕಥೆ ಬಿಡಿಸಲಾಗದ ಒಗಟಾಗಿಯೇ ಉಳಿದಿದೆ.

ಭಾರತದ ರಾಷ್ಟ್ರಪಕ್ಷಿ

ಭಾರತ ಸರ್ಕಾರ ೧೯೬೩ರ ಜನವರಿ ೩೧ರಂದು ನವಿಲನ್ನು 'ರಾಷ್ಟ್ರಪಕ್ಷಿ' ಎಂದು ಘೋಷಿಸಿತು. ಅದರ ಪ್ರಕಾರ ನವಿಲು ಹತ್ಯೆ ಶಿಕ್ಷಾರ್ಹ ಅಪರಾಧ. ನವಿಲು ಸಂಕುಲಕ್ಕೆ ಹಿಂಸೆಯುಂಟುಮಾಡುವ, ಅದರ ಪ್ರಾಣಹಾನಿಗೆ ಕಾರಣ ರಾಗುವ ಯಾರೇ ವ್ಯಕ್ತಿಗಳಾಗಲಿ ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಯಾಗು ತ್ತಾರೆ. ಪರಿಸರದ ಸಮತೋಲನ ತಪ್ಪಿಹೋಗುತ್ತಿರುವ ಇಂದಿನ ಸ್ಥಿತಿಯಲ್ಲಿ ವನ್ಯ ಸಂಕುಲವನ್ನು ಸಂರಕ್ಷಿಸುವುದು ಮಾನವನ ಬಹುದೊಡ್ಡ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ಭಾರತ ಸರ್ಕಾರ ಕೈಗೊಂಡಿರುವ ಕ್ರಮ ಸ್ತುತ್ಯಾರ್ಹವಾದುದು. ೧೯೬೯ರ ಮೇ ೨೮ರಂದು ಉತ್ತರ ಭಾರತದ ಝಾನ್ಸಿ ಎಂಬಲ್ಲಿ ಹತ್ತು ವರುಷ ವಯಸ್ಸಿನ ಬಾಲಕನೊಬ್ಬ ನವಿಲೊಂದನ್ನು ಕೊಂದ. ಆತ ಅಪ್ರಾಪ್ತ ವಯಸ್ಕ ನಾದರೂ ಅವನು ಮಾಡಿದ ಅಪರಾಧಕ್ಕಾಗಿ ನ್ಯಾಯಾಲಯ ಆ ಹುಡುಗನಿಗೆ ೫೦೦ ರೂಪಾಯಿಗಳ ದಂಡ ವಿಧಿಸಿತು. ೧೯೭೬ರ ಜನವರಿ ೪ರಂದು ದೆಹಲಿ ಮೃಗಾಲಯದ ಪಾಲಕ ಮತ್ತು ಸಹಪಾಲಕರಿಬ್ಬರೂ ಸೇರಿ ಮಾಂಸದ ಆಸೆ ಗಾಗಿ ಮೂರು ನವಿಲುಗಳನ್ನು ಕೊಂದರು. ಈ ವಿಷಯ ಸಂಬಂಧಪಟ್ಟವರಿಗೆ ತಿಳಿಯಿತು. ನ್ಯಾಯಾಲಯದಲ್ಲಿ ವಿಷಯ ಸಾಬೀತಾಗಿ ಅವರಿಗೆ ಶಿಕ್ಷೆ ವಿಧಿಸ ಲಾಯಿತು.

ನಾಗರಿಕತೆಯ ನಾಗಾಲೋಟಕ್ಕೆ ಸಿಕ್ಕಿ ಅರಣ್ಯನಾಶ ದಿನೇದಿನೇ ಹೆಚ್ಚಾಗು ತ್ತಿದೆ. ಅರಣ್ಯ ನಾಶದೊಡನೆ ನಮ್ಮ ಅಮೂಲ್ಯ ವನ್ಯಸಂಪತ್ತು ಕೂಡ ಕ್ಷಯಿಸು ತ್ತಿದೆ. ಎಷ್ಟೋ ವನ್ಯಪ್ರಾಣಿ ಸಂತತಿ ಸೂಕ್ತ ಪರಿಸರದ ಅಭಾವದಿಂದಾಗಿ ವಿನಾಶದ ಅಂಚಿನಲ್ಲಿದೆ. ಇಂಥ ವಿನಾಶದ ಅಂಚಿನಲ್ಲಿರುವ ವನ್ಯಪ್ರಾಣಿಗಳನ್ನು ಸಂರಕ್ಷಿಸಿಕೊಂಡು ಬರುವ ಸಲುವಾಗಿ ಅಭಯಾರಣ್ಯಗಳನ್ನು ನಿರ್ಮಿಸಲಾಗು ತ್ತಿದೆ. ಹಾಗೆಯೆ ನವಿಲು ಸಂತತಿಯನ್ನು ಸಂರಕ್ಷಿಸಿಕೊಂಡು ಬರಲು ಭಾರತ ದಾದ್ಯಂತ ಅನೇಕ ಕಡೆಗಳಲ್ಲಿ 'ನವಿಲುಧಾಮ'ಗಳನ್ನೂ 'ಮಯೂರ ವನ' ಗಳನ್ನೂ ನಿರ್ಮಿಸಲಾಗುತ್ತಿದೆ. ದೆಹಲಿ ಬಳಿಯ ಮಿತ್ರೋನ್ ಎಂಬ ಸ್ಥಳದಲ್ಲಿ ೨೦ ಎಕರೆ ವಿಸ್ತೀರ್ಣದಲ್ಲಿ ನವಿಲು ಧಾಮವೊಂದನ್ನು ನಿರ್ಮಿಸಲಾಗಿದೆ. ಕರ್ನಾಟಕದಲ್ಲಿ ನಾಗರಹೊಳೆ, ಬಂಡಿಪುರ ಅಭಯಾರಣ್ಯಗಳಲ್ಲಿ ನವಿಲು ಹಿಂಡು

ಗಳನ್ನು ಕಾಣಬಹುದಾಗಿದೆ. ಅಲ್ಲಿ ಅವುಗಳ ಸಂತಾನಾಭಿವೃದ್ಧಿಗೆ ಸೂಕ್ತ ರಕ್ಷಣೆ ದೊರೆತಿದೆ. ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಕ್ಷೇತ್ರದಲ್ಲಿ ಅಪಾರ ಸಂಖ್ಯೆಯಲ್ಲಿ ನವಿಲುಗಳಿದ್ದು ಕರ್ನಾಟಕ ಸರ್ಕಾರ ಈ ಸ್ಥಳವನ್ನು 'ನವಿಲು ಧಾಮ'ವನ್ನಾಗಿ ಅಭಿವೃದ್ಧಿಪಡಿಸಬೇಕೆಂಬ ತೀರ್ಮಾನವನ್ನು ಕೈಗೊಂಡಿದೆ.

ನವಿಲನ್ನು ಕುರಿತ ಕಥೆಗಳು

ನವಿಲಿನ ಬಗ್ಗೆ, ನವಿಲಿನ ಗರಿಗಳಲ್ಲಿರುವ 'ಕಣ್ಣಿನ' ಬಗ್ಗೆ, ಪುರಾಣಗಳಲ್ಲಿ, ಕಾವ್ಯಗಳಲ್ಲಿ. ಜನಪದ ಸಾಹಿತ್ಯದಲ್ಲಿ ಅನೇಕ ಕಥೆಗಳಿವೆ. ಕೆಲವನ್ನು ಇಲ್ಲಿ ನೋಡಬಹುದು.

೧) **ರಾಮಾಯಣದ ಒಂದು ಕಥೆ:** ಮರುತ್ತನೆಂಬ ರಾಜ ಒಂದು ಯಜ್ಞ ಮಾಡಲು ತೊಡಗಿದ. ಈ ಯಜ್ಞದಲ್ಲಿ ದೇವತೆಗಳೆಲ್ಲ ಭಾಗವಹಿಸಿದ್ದರು. ಬೃಹಸ್ಪತಿಯ ಸಹೋದರನಾದ ಬ್ರಹ್ಮರ್ಷಿ ಸಂವರ್ತ ಈ ಯಜ್ಞದ ಮುಖ್ಯ ನೇತಾರನಾಗಿದ್ದ. ಪುಷ್ಪಕ ವಿಮಾನದಲ್ಲಿ ಆಕಾಶಯಾನ ಮಾಡುತ್ತಿದ್ದ ರಾವಣ ಇದ್ದಕ್ಕಿದ್ದಂತೆ ಯಜ್ಞ ನಡೆಯುತ್ತಿದ್ದ ಸ್ಥಳದಲ್ಲಿ ಕಾಣಿಸಿಕೊಂಡ. ಅವನನ್ನು ಕಂಡಕೂಡಲೇ ದೇವತೆಗಳೆಲ್ಲ ಬೆಚ್ಚಿಬಿದ್ದರು. ಅವರಿಗೆ ರಾವಣನ ಪರಾಕ್ರಮದ ಅರಿವಿದ್ದುದರಿಂದ ಅವರೆಲ್ಲ ಹೆದರಿ ಆ ಕೂಡಲೇ ಪ್ರಾಣಿಪಕ್ಷಿಗಳ ರೂಪ ತಾಳಿದರು. ಯಮ ಕಾಗೆಯಾದ, ಕುಬೇರ ಹಲ್ಲಿಯಾದ, ವರುಣ ಹಂಸವಾದ, ಇಂದ್ರ ನವಿಲಾದ. ರಾವಣ ಆಕಾಶ ಮಾರ್ಗದಲ್ಲಿ ಮರೆಯಾದ. ಅನಂತರ ದೇವತೆಗಳೆಲ್ಲ ಮತ್ತೆ ತಮ್ಮತಮ್ಮ ಮೂಲ ರೂಪವನ್ನು ಧರಿಸಿದರು. ತಾವು ಮರೆಹೊಕ್ಕಿದ್ದ ಪ್ರಾಣಿಪಕ್ಷಿಗಳಿಗೆ ಅವರು ಕೆಲವು ವರಗಳನ್ನು ಕರುಣಿಸಿದರು. ನೀಲಿ ಗರಿಗಳನ್ನು ಮಾತ್ರ ಪಡೆದಿದ್ದ ನವಿಲಿಗೆ "ನಿನಗೆ ಸಹಸ್ರ ಸುಂದರ ಕಣ್ಣುಗಳು ಮೂಡಲಿ" ಎಂದು ಇಂದ್ರ ವರಕೊಟ್ಟ. ಮಳೆಯ ಅಧಿದೇವತೆಯೂ ಆದ ಆತ "ನೀನು ಮಳೆಗಾಲದಲ್ಲಿ ಕುಣಿದು ಸಂತಸಪಡು; ಹಾವುಗಳಿಂದ ನಿನಗೆ ಎಂದೂ ಬಾಧೆಯಾಗದಿರಲಿ" ಎಂದು ನವಿಲನ್ನು ಹರಸಿದ. ಅಂದಿನಿಂದ ನವಿಲು ತನ್ನ ಗರಿಗಳಲ್ಲಿ ಸುಂದರವಾದ 'ಕಣ್ಣು'ಗಳನ್ನು ಪಡೆಯಿತು.

೨) **ಗ್ರೀಕ್ ಪುರಾಣದ ಒಂದು ಕಥೆ:** ಅಗೆನರ್ ಮತ್ತು ಇನಾಖಸ್ ದೇವತೆಗಳ ಮಗ ಆರ್ಗಸ್. ಈತ ಸಹಸ್ರಾಕ್ಷ. ಇಯೋ ಎಂಬ ಅಪ್ಸರ ಸ್ತ್ರೀಯಲ್ಲಿ ದೇವಲೋಕದ ದೇವೇಂದ್ರ ಸ್ಯೂಸ್ ಮೋಹಗೊಂಡ. ಸ್ಯೂಸನ ಮಡದಿ ಹೀರಾ

ಇದನ್ನು ಕಂಡು ಕುಪಿತಗೊಂಡಳು. ಇಯೋಳ ಬಗ್ಗೆ ಆಕೆಗೆ ಅಸೂಯೆ ಉಂಟಾಯಿತು. ಹೇಗೋ ಇಯೋಳನ್ನು ಹೀರಾ ಕೊಲ್ಲಬಹುದೆಂಬ ಅನುಮಾನ ಮತ್ತು ಭಯ ಸ್ಯೂಸನಿಗೆ ಉಂಟಾದುದರಿಂದ ಆತ ಇಯೋಳನ್ನು ಒಂದು ಮಣಕವಾಗಿ ರೂಪಾಂತರಿಸಿದ. ಈ ಸಂಗತಿ ಹೀರಾಳಿಗೆ ತಿಳಿಯಿತು. ತನ್ನ ಗಂಡ ಪುನಃ ಇಯೋಳನ್ನು ರೂಪಾಂತರಗೊಳಿಸಬಹುದೆಂಬ ಅನುಮಾನವುಂಟಾಯಿತು. ಆಗ ಆಕೆ ಆರ್ಗಸ್‌ನನ್ನು ಕರೆದು ಇಯೋಳನ್ನು ಪುನಃ ರೂಪಾಂತರಿಸದಂತೆ ನೋಡಿಕೊಳ್ಳಲು ನೇಮಿಸಿದಳು. ಸ್ಯೂಸ್ ಈ ವಿಷಯ ತಿಳಿದು ದೇವದೂತ ಹರ್ಮಿಸ್‌ನನ್ನು ಕರೆದು ಆರ್ಗಸ್‌ನನ್ನು ಕೊಂದುಬರುವಂತೆ ಆಜ್ಞಾಪಿಸಿದ. ಹರ್ಮಿಸ್ ತನ್ನ ತಂತಿವಾದ್ಯ ನುಡಿಸಿ ಆರ್ಗಸ್‌ಗೆ ಮಂಪರುಕವಿಯುವಂತೆ ಮಾಡಿ ಅನಂತರ ಆತನನ್ನು ಕೊಂದ. ಆಗ ಹೀರಾ ಆರ್ಗಸ್‌ನ ಸಹಸ್ರ ಕಣ್ಣುಗಳನ್ನು ತೆಗೆದುಕೊಂಡು ಬಂದು ತನ್ನ ಪೂಜ್ಯ ಹಾಗೂ ಪ್ರೀತಿಪಾತ್ರ ಪಕ್ಷಿಯಾದ ನವಿಲಿನ ಬಾಲಕ್ಕೆ ಅಂಟಿಸಿದಳು. ನವಿಲಿಗೆ ಸಾವಿರ ಕಣ್ಣುಗಳು ಮೂಡಿದವು.

೩) **ಗದಬ ಆದಿವಾಸಿಗಳ (ಒರಿಸ್ಸ ರಾಜ್ಯ) ಜನಪದ ಕಥೆ:** ಒಂದು ದಿನ ಒಬ್ಬ ಮಾಂತ್ರಿಕನು ಜಾಕರ್ ಎಂಬ ದೇವತೆಗೆ ಮೇಕೆಯೊಂದನ್ನು ಬಲಿ ಕೊಟ್ಟ. ಅನಂತರ ಅದರ ಮಾಂಸದ ತುಂಡುಗಳನ್ನು ಮನೆಯ ಸೂರಿನ ಮೇಲೆ ಒಣ ಹಾಕಿದ್ದ. ಮಾರನೆಯ ದಿನ ಬೆಳಿಗ್ಗೆ ಆ ಮಾಂತ್ರಿಕನ ಹೆಂಡತಿ ಅಂಗಳವನ್ನು ಗುಡಿಸುತ್ತಿರುವ ಹೊತ್ತಿನಲ್ಲಿ ಪಕ್ಷಿಯೊಂದು 'ಕಿರೋ ಕಿರೋ' ಎಂದು ಕೂಗುತ್ತ ಬಂದು ಸೂರಿನ ಮೇಲೆ ಒಣಹಾಕಿದ್ದ ಮಾಂಸದ ತುಂಡೊಂದನ್ನು ಕಚ್ಚಿಕೊಂಡು ಹಾರಿತು. ಇದನ್ನು ಕಂಡು ಮಾಂತ್ರಿಕನ ಹೆಂಡತಿಗೆ ಸಿಟ್ಟುಬಂತು. ಆಕೆ ಗುಡಿಸುತ್ತಿದ್ದ ಪೊರಕೆಯನ್ನು ಕೋಪದಿಂದ ಆ ಪಕ್ಷಿಯತ್ತ ಬೀಸಿ ಎಸೆದಳು. ಆ ಪೊರಕೆ ಆ ಪಕ್ಷಿಗೆ ತಗುಲಿದ ಕೂಡಲೇ ಅದು ನವಿಲಾಗಿ ರೂಪಾಂತರಗೊಂಡಿತು. ಪೊರಕೆಯನ್ನು ಹೂ ಬಿಡುವ ಒಂದು ಬಗೆಯ ಹುಲ್ಲಿನಿಂದ ತಯಾರಿಸಲಾಗಿತ್ತು. ಹಾಗಾಗಿ ನವಿಲಿನ ಬಾಲ ಕೂಡ ಹೂವಿನಂತೆ ಸುಂದರವಾಯಿತು!

೪) **ಸೋರಸ್ ಆದಿವಾಸಿಗಳ (ಒರಿಸ್ಸ ರಾಜ್ಯ) ಜನಪದ ಕಥೆ:** ಸೋರಸ್ ಜನಾಂಗದವರ ಅಧಿದೇವತೆ ಕಿತ್ತುಂಗ್ ಒಂದು ದಿನ ತನ್ನ ಹೆಂಡತಿಯೊಡನೆ ಜಗಳವಾಡಿದ. ಈ ಜಗಳದಿಂದ ಬೇಸರಗೊಂಡ ಆಕೆ ಬೇರೊಬ್ಬನನ್ನು ಕಟ್ಟಿಕೊಂಡು ಓಡಿಹೋದಳು. ಕಿತ್ತುಂಗ್ ಹೆಂಡತಿಗಾಗಿ ಏಳು ರಾತ್ರಿ ಏಳು ಹಗಲು ಎಲ್ಲ ಕಡೆ ಹುಡುಕಿದ. ಆದರೆ ಆಕೆ ಕಾಣಲಿಲ್ಲ. ನಿರಾಶನಾಗಿ ತನ್ನ

ಮನೆಯ ಕಡೆ ಹೊರಟ. ಮಧ್ಯಾಹ್ನದ ವೇಳೆಗೆ ಆತ ಒಂದು ಬೆಟ್ಟದ ಹತ್ತಿರಕ್ಕೆ ಬಂದ. ಆ ಬೆಟ್ಟದ ಬುಡದಲ್ಲಿ ಒಂದು ಗಂಡು ಒಂದು ಹೆಣ್ಣು ನವಿಲುಗಳೆರಡೂ ಕುಳಿತಿದ್ದವು. ಎರಡು ನವಿಲುಗಳನ್ನು ಮಾತನಾಡಿಸಿದ. ಆದರೆ ಅವು ತುಟಿಪಿಟಿಕ್ ಅನ್ನಲಿಲ್ಲ. ಕಿತ್ತುಂಗನಿಗೆ ಬಹಳ ಸಿಟ್ಟು ಬಂತು. ತಕ್ಷಣ ಆತ ಗಂಡು ನವಿಲನ್ನು ಹಿಡಿದುಕೊಂಡು "ನನ್ನ ಹೆಂಡತೀನ ನೋಡಿದೆಯಾ" ಎಂದು ಕೇಳಿದ. ನವಿಲು 'ಇಲ್ಲ' ಎಂದು ಉತ್ತರ ಕೊಟ್ಟಿದ್ದನ್ನು ಕೇಳಿ ಅವನ ಸಿಟ್ಟು ನೆತ್ತಿಗೇರಿತು. ಅವನು ಆ ಕೂಡಲೇ ತನ್ನ ಮರ್ಮಾಂಗದ ಕೂದಲುಗಳನ್ನು ಕಿತ್ತು ನವಿಲಿನ ತಲೆಗೆ ಅಂಟಿಸಿದ; ಮರದ ರೆಂಬೆಗಳನ್ನು ಮುರಿದು ಅದರ ಅಂಡಿಗೆಹಿಡಿದು ಹೊರಟುಹೋದ.

ಕಿತ್ತುಂಗ್ ಆ ಕಡೆ ಹೋದ ಅನಂತರ ಅವನ ಹೆಂಡತಿ ಅದೇ ಮಾರ್ಗವಾಗಿ ಬಂದಳು. ಮರದ ಬುಡದಲ್ಲಿ ಗಂಡು ನವಿಲು ಕಣ್ಣೀರು ಸುರಿಸುತ್ತ ಕುಳಿತಿತ್ತು. ಅಳುವುದಕ್ಕೆ ಕಾರಣವೇನೆಂದು ಆಕೆ ಕೇಳಿದಾಗ ನವಿಲು ನಡೆದುದನ್ನೆಲ್ಲ ಸವಿಸ್ತಾರವಾಗಿ ತಿಳಿಸಿತು. ನವಿಲಿನ ದುಃಸ್ಥಿತಿಗೆ ಮರುಗಿದ ಕಿತ್ತುಂಗ್‌ನ ಹೆಂಡತಿ "ನೀನು ದುಃಖಿಸಬೇಡ; ಇದೇ ನಿನಗೆ ಸುಂದರವಾದ ಉಡುಪಾಗಲಿ" ಎಂದು ಹರಿಸಿದಳು. ಅವಳ ಹರಕೆಯಂತೆ ನವಿಲು ಈಗಿರುವ ಸುಂದರ ರೂಪವನ್ನು ಪಡೆಯಿತು!

೫) ಇಂಗ್ಲಿಷ್ ಜನಪದ ಕಥೆ: ಒಂದಾನೊಂದು ಕಾಲದಲ್ಲಿ ಒಂದು ದೇಶದಲ್ಲಿ ಒಬ್ಬ ರಾಜನಿದ್ದ. ಆ ರಾಜನಿಗೊಬ್ಬ ಮಗನಿದ್ದ. ಅವನು ಮೂಗ. ತನ್ನ ಮಗ ಮೂಗನಾದದ್ದು ರಾಜನಿಗೆ ಬಹಳ ವ್ಯಥೆಯುಂಟುಮಾಡಿತು. ಆತ "ನನ್ನ ಮಗನಿಗೆ ಯಾರಾದರೂ ಮಾತು ಬರಿಸಿದರೆ ಅವರಿಗೆ ಒಂದು ಮನೆ ತುಂಬ ಅಕ್ಕಿ, ಒಂದು ಮನೆ ತುಂಬ ಚಿನ್ನ, ಒಂದು ಮನೆ ತುಂಬ ಬಟ್ಟೆ ಬಹುಮಾನ ಕೊಡುತ್ತೇನೆ" ಎಂದು ರಾಜ್ಯದಲ್ಲೆಲ್ಲ ಡಂಗೂರ ಸಾರಿಸಿದ. ಪಾಂಗೋ ಎಂಬ ಪುಂಡು ಹುಡುಗನೊಬ್ಬ ಈ ಡಂಗೂರವನ್ನು ಕೇಳಿ ಅರಮನೆ ಯತ್ತ ಹೊರಟ. ನಡುದಾರಿಯಲ್ಲಿ ಒಬ್ಬ ಮುದುಕ ಭೇಟಿಯಾದ. ಆ ಮುದುಕ ನಿಗೆ ವಿಷಯವನ್ನೆಲ್ಲ ತಿಳಿಸಿ ತನಗೆ ಏನಾದರೂ ಉಪಾಯ ಹೇಳಿಕೊಡಬೇಕೆಂದು ಬೇಡಿಕೊಂಡ. ಮುದುಕ ಹೀಗೆ ಒಂದು ಉಪಾಯ ಹೇಳಿದ. "ಹೇ ಹುಡುಗ! ರಾಜನ ಮಗನಿಗೆ ಮಾತು ಬರಿಸುವುದು ಬಹಳ ಸುಲಭ. ಆದರೆ ಅದಕ್ಕೆ ನೀನು ಒಂದು ಕೆಲಸ ಮಾಡಬೇಕು. ನೀನು ಬಹು ಮಧುರವಾದ ಸ್ವರವೊಂದನ್ನು ಕಂಡುಹಿಡಿಯಬೇಕು. ಆ ಸುಮಧುರ ಸ್ವರವನ್ನು ಎಲ್ಲರೂ ಕೇಳುವಂತಿರಬೇಕು

—ರಾಜನ ಮಗ ಕೂಡ. ಮಧುರ ಸ್ವರವನ್ನು ಕೇಳಿದವರೆಲ್ಲ ಅದನ್ನು ಅನುಕರಿಸಲು ಪ್ರಯತ್ನಿಸುತ್ತಾರೆ. ರಾಜನ ಮಗ ಕೂಡ ಅದನ್ನು ಅನುಕರಿಸಲು ಪ್ರಯತ್ನಿಸುವನು; ಆಗ ಮಾತು ಬರುವುದು".

ಮುದುಕನ ಮಾತಿನಂತೆ ಪಾಂಗೋ ಅರಮನೆಗೆ ಬಂದ ರಾಜನ ಮಗನ ಮುಂದೆ ನಾಯಿಯಂತೆ ಬೊಗಳಿದ, ಕತ್ತೆಯಂತೆ ಕಿರುಚಿದ, ಕುದುರೆಯಂತೆ ಕೆನೆದ, ಕೋಳಿಯಂತೆ ಕೂಗಿದ, ಆಡಿನಂತೆ ಅರುಚಿದ. ಆದರೆ ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ರಾಜಕುಮಾರ್ ತುಟಿಪಿಟಿಕ್ ಅನ್ನಲಿಲ್ಲ. ಪ್ರತಿ ದಿನ ಒಂದಲ್ಲ ಒಂದು ಪ್ರಾಣಿಯ ಧ್ವನಿಯನ್ನು ಅನುಕರಿಸಿ ರಾಜಕುಮಾರನ ಮುಂದೆ ಪಾಂಗೋ ಕೂಗುತ್ತಿದ್ದ. ಹೀಗೆ ಅನೇಕ ದಿನಗಳು ಕಳೆದವು. ಒಂದು ದಿನ ಆತ ಅರಮನೆಗೆ ಬರುವಾಗ ದಾರಿಯಲ್ಲಿ ಒಂದು ನವಿಲು ಪಾಂಗೋನನ್ನು ಭೇಟಿಯಾಯಿತು. "ನಾನು ಹಾಡಿದರೆ ಎಂಥವರೂ ಮನಸೋಲುತ್ತಾರೆ" ಎಂದು ಅದು ಪಾಂಗೋಗೆ ಹೇಳಿತು; ಮಧುರವಾಗಿ ಹಾಡಿತು. ಪಾಂಗೋ ನವಿಲನ್ನು ಅರಮನೆಗೆ ಕರೆದುಕೊಂಡು ಬಂದ. ಆ ದೇಶದ ಸಮಸ್ತ ಜನರೂ ದರ್ಬಾರಿನಲ್ಲಿ ಸೇರಿದರು. ನವಿಲು ಮಧುರವಾಗಿ ಹಾಡಿತು. ಅದರ ಹಾಡನ್ನು ಕೇಳಿ ಎಲ್ಲರೂ ತಲೆದೂಗಿದರು. ರಾಜಕುಮಾರನೂ ನವಿಲಿನ ಹಾಡು ಕೇಳಿ ಆನಂದಗೊಂಡ ನವಿಲಿನ ಹಾಡನ್ನು ಹಾಗೇ ಅನುಕರಿಸಿದ. ರಾಜಕುಮಾರನ ಬಾಯಿಂದ ಸುಮಧುರ ನಾದ ಹೊರಹೊಮ್ಮಿತು. ಈ ಅಚ್ಚರಿಯನ್ನು ಕಂಡು ಜನರೆಲ್ಲ ಬೆರಗಾದರು. ರಾಜನಿಗೆ ಪರಮಾನಂದವಾಯಿತು. ಆದರೆ ನವಿಲು ತನ್ನ ಸುಮಧುರ ಕಂಠವನ್ನು ಕಳೆದುಕೊಂಡಿತ್ತು. ಅದು ಇನ್ನೊಮ್ಮೆ ಹಾಡಲು ಬಾಯ್ದೆರೆದಾಗ ಅದರ ಬಾಯಿಂದ ಕರ್ಕಶವಾದ ಸದ್ದು ಹೊರಹೊಮ್ಮಿತು. "ನೀನು ನನ್ನನ್ನು ಮೋಸಗೊಳಿಸಿದೆ" ಎಂದು ಪಾಂಗೋನನ್ನು ನವಿಲು ದೂರ ತೊಡಗಿತು. ನವಿಲು ತನ್ನ ಸುಮಧುರ ಕಂಠವನ್ನು ಕಳೆದುಕೊಂಡಿದ್ದನ್ನು ತಿಳಿದು ರಾಜನಿಗೆ ಬಹಳ ವ್ಯಥೆಯಾಯಿತು. ಹುಡುಗನ ಮೋಸದ ಬುದ್ಧಿ ಗೊತ್ತಾಗಿ ಸಿಟ್ಟುಬಂತು. ನವಿಲಿಗೆ ಮೋಸ ಮಾಡಿದಕ್ಕಾಗಿ ರಾಜ ಪಾಂಗೋ ನನ್ನು ಜೈದ; ಅವನಿಗೆ ಕೊಡಬೇಕಾಗಿದ್ದ ಒಂದು ಮನೆ ತುಂಬ ಅಕ್ಕಿ, ಒಂದು ಮನೆತುಂಬ ಚಿನ್ನ, ಒಂದು ಮನೆತುಂಬ ಬಟ್ಟೆಯಲ್ಲಿ ಅಕ್ಕಿ ಚಿನ್ನವನ್ನು ಮಾತ್ರ ಹುಡುಗನಿಗೆ ಕೊಟ್ಟ. ನವಿಲಿಗಾದ ಅನ್ಯಾಯವನ್ನು ಸರಿದೂಗಿಸಲು ಅದಕ್ಕೆ ಒಂದು ಮನೆ ತುಂಬ ಬಟ್ಟೆಯನ್ನು ಕೊಟ್ಟ. ವರ್ಣರಂಜಿತ ಬಟ್ಟೆ ಗಳನ್ನು ಉಟ್ಟು ನವಿಲು ಸಂಭ್ರಮದಿಂದ ನರ್ತಿಸಿತು. ಹೀಗೆ ನವಿಲು ತನ್ನ

ಸುಮಧುರ ಕೊರಳನ್ನು ಕಳೆದುಕೊಂಡು ಸುಂದರ ಉಡುಪನ್ನು ಪಡೆದುಕೊಂಡಿತು.

೬) ಒಂದು ಮುಸ್ಲಿಂ ಕಥೆ: ಮುಸ್ಲಿಮರ ದೇವರಾದ 'ಅಲ್ಲಾ' ಮೊದಲಿಗೆ ನೂರು ರೆಂಬೆಯುಳ್ಳ ಮರವನ್ನು ಸೃಷ್ಟಿಸಿದ. ಆ ಮರದ ಮೇಲೆ ನವಿಲಿನ ರೂಪದಲ್ಲಿ ಪೈಗಂಬರನನ್ನು ಕೂರಿಸಿದ. ಅವನ ಮುಂದೆ ಒಂದು ಪಕ್ಷಿಯನ್ನು ಕೂರಿಸಿ, ಅದರ ಕಣ್ಣಿನಲ್ಲಿ ಪೈಗಂಬರನ ಪ್ರತಿಬಿಂಬ ಕಾಣುವಂತೆ ಮಾಡಿದ. ನವಿಲು ರೂಪದಲ್ಲಿದ್ದ ಪೈಗಂಬರ್ ತನ್ನ ರೂಪಸಿರಿಯನ್ನು ಕಂಡು ಸಂತೋಷದಿಂದ ಕಣ್ಣೀರು ಸುರಿಸಿದ. ಆ ಕಣ್ಣೀರಿನಿಂದ 'ಅಲ್ಲಾ' ಪ್ರಪಂಚವನ್ನು ಸೃಷ್ಟಿಸಿದ.

ಹಾ.ತಿ. ಕೃಷ್ಣೇಗೌಡ



ಕೆಟ್ಟದ್ದನ್ನು ಮಾಡದಿರಬೇಕಾದರೆ ಕೆಟ್ಟದ್ದರಿಂದ ಪೂರ್ಣವಾಗಿ ದೂರವಿರಬೇಕು.

—ಗಾಂಧೀಜಿ

ಕರ್ತವ್ಯ ನಿಷ್ಠೆಯಿಂದ ಹೊಮ್ಮುವ ಧೈರ್ಯವು ಅಖಂಡವಾಗಿ ಕಾರ್ಯತತ್ಪರವಾಗಿರುತ್ತದೆ.

—ಆ್ಯಡಿಸನ್

ನಾಯಕನಾದವನು ಸುಖದಲ್ಲಿ ಹೇಗೋ, ಹಾಗೇ ಕಷ್ಟದಲ್ಲೂ ತನ್ನವರ ಕಷ್ಟವನ್ನು ಧೈರ್ಯದಿಂದ ಅನುಭವಿಸುತ್ತಾನೆ.

—ಜಾನ್‌ಮಿಲ್ಟನ್

ಜ್ಯೋತಿಷ್ಯ

ಶರಣರು ಫಲ ಜ್ಯೋತಿಷ್ಯವನ್ನು ಒಪ್ಪುವುದಿಲ್ಲ.

"ಚಂದ್ರಬಲ, ತಾರಾಬಲ ಎಂಬಿರಿ, ಎಲೆ ಅಣ್ಣಗಳಿರಾ !
ಚಂದ್ರಂಗೆ ಯಾರಬಲ? ಇಂದ್ರಂಗೆ ಯಾರ ಬಲ?"

ಎಂದು ಕೇಳುತ್ತಾರೆ. ಅವರು ಜ್ಯೋತಿಷ್ಯವನ್ನು ನಂಬಿ ಚಂದ್ರಬಲ, ತಾರಾಬಲ ಮುಂತಾಗಿ ಹಂಬಲಿಸುವವರರನ್ನು ಭಾವಭ್ರಮಿತರೆಂದು ಹೀಯಾಳಿಸುತ್ತಾರೆ.

ಜ್ಯೋತಿಷ್ಯ ಎರಡು ಬಗೆ, ಒಂದು ಗಣಿತ ಜ್ಯೋತಿಷ್ಯ (Astronomy). ಮತ್ತೊಂದು ಫಲಜ್ಯೋತಿಷ್ಯ (Astrology)ಗಣಿತ ಜ್ಯೋತಿಷ್ಯ "ವೇದಾಂಗ." ಫಲಜ್ಯೋತಿಷ್ಯ ಇತ್ತೀಚಿನದು. ಅದನ್ನು ಆರಂಭಿಸಿದವನು ವರಾಹಮಿಹಿರ (ಕ್ರಿ.ಶ. ಸುಮಾರು ೫೦೦).

ವೇದ ಕಾಲದಲ್ಲಿ ಕೆಲಕೆಲವು ಋತುಗಳಲ್ಲಿ ಕೆಲಕೆಲವು ಯಾಗಗಳನ್ನು ಮಾಡಬೇಕು. ಕೆಲವು ಯಜ್ಞಗಳಿಗೆ ಹಗಲು ಪ್ರಶಸ್ತ. ಕೆಲವಕ್ಕೆ ರಾತ್ರಿ ಒಳ್ಳೆಯದು ಎಂದು ಭಾವಿಸಿ ಆಯಾ ದೇಶ-ಕಾಲ-ವರ್ತಮಾನಗಳನ್ನು ಗಮನಿಸಿ ನಿರ್ಧರಿಸಲು ಈ ಫಲಜ್ಯೋತಿಷ್ಯವು ಆರಂಭವಾಯಿತು. ಆದರೆ ಅದು ವರಾಹಮಿಹಿರನ ಕಾಲಕ್ಕೆ, ಬೃಹಜ್ಜಾತಕ, ಜಾತಕ ಫಲ ಚಿಂತಾಮಣಿ ಮುಂತಾಗಿ ಸಾಹಿತ್ಯ ಬೆಳೆದು ಇಂದು ಅದೊಂದು ಹೆಗ್ಗಾಡಾಗಿದೆ.

ವಾಸ್ತವವಾಗಿ ಸೂರ್ಯ-ಚಂದ್ರ ಮುಂತಾದ ಗ್ರಹಗಳು ಸ್ವತಃ ಜಡ. ಅವು ಖಗೋಳದಲ್ಲಿ ಒಂದು ಆಕರ್ಷಣ ಶಕ್ತಿಗೆ ಒಳಪಟ್ಟಿವೆ. ವೈದಿಕ ಋಷಿಗಳು ತಮ್ಮ ಸುದೀರ್ಘ ಕಾಲದ ಅನುಭವದಿಂದ ಆಯಾ ಗ್ರಹಗಳ ಚಲನ-ವಲನಗಳನ್ನು ಗಣಿತದಿಂದ ಗುಣಿಸಿ ಗ್ರಹಗತಿಗಳನ್ನು ಗುರ್ತಿಸಿದ್ದಾರೆ. ಗಣಿತ ಶಾಸ್ತ್ರದ ಸಹಾಯದಿಂದ ಮುಂದೆ ಸಂಘಟಿಸುವ ಹುಣ್ಣಿಮೆ, ಅಮಾವಾಸ್ಯೆ, ಸೂರ್ಯ ಮತ್ತು ಚಂದ್ರರಗ್ರಹಣಾದಿಗಳನ್ನು ಸಹ ಕರಾರುವಾಕ್ಕಾಗಿ ಹೇಳುವಲ್ಲಿ ಸಫಲರಾಗಿದ್ದಾರೆ. ಆದ್ದರಿಂದಲೇ "ಜ್ಯೋತಿಷ್ಯವು ಪ್ರತ್ಯಕ್ಷ ಶಾಸ್ತ್ರವೆಂಬುದಕ್ಕೆ ಸೂರ್ಯ-ಚಂದ್ರರಗತಿಗಳೇ ಸಾಕ್ಷಿ!" ಎಂದು ಹೆಮ್ಮೆ ಪಡುವಂತಾಗಿದೆ! ಈ ಪ್ರಶಸ್ತಿ ಸಲ್ಲಬೇಕಾದದ್ದು ಗಣಿತ ಜ್ಯೋತಿಷ್ಯಕ್ಕೆ! ಆದರೆ ಕೆಲವರು ಫಲಜ್ಯೋತಿಷಿಗಳು ಇದನ್ನು ತಮಗೆ ಹೊಂದಿಸಿಕೊಂಡು ಜನರನ್ನು ವಂಚಿಸುತ್ತಾರೆ. ಏಕೆಂದರೆ ವಸ್ತುತಃ ಜಡವಾದ ಈ ಗ್ರಹಗಳಲ್ಲಿ ಚೈತನ್ಯವನ್ನು ಆರೋಪಿಸಿ, ಅವುಗಳಲ್ಲಿ ಪರಸ್ಪರ ಶತ್ರು-ಮಿತ್ರತ್ವ, ಸ್ತ್ರೀ-ಪುರುಷ-ನಪುಂಸಕತ್ವ ಮುಂತಾದುವನ್ನು

ಕಲ್ಪಿಸಿದ್ದಾರೆ. ಅಷ್ಟೇ ಅಲ್ಲದೆ ಗಗನದಲ್ಲಿ ಸಂಚರಿಸುವ ಈ ಗ್ರಹಗಳು ತಮ್ಮ ಪ್ರಭಾವವನ್ನು ಭೂಮಿಯಲ್ಲಿರುವ ಕೇವಲ ಮಾನವರ ಮೇಲೆ ಬೀರುತ್ತಾರೆ ಎಂದು ನಿಜದ ಮೇಲೆ ಹೊಡೆದಂತೆ ವಾದಿಸಿ ನಂಬಿಸುತ್ತಾರೆ. ಗಗನದಲ್ಲಿ ಸಂಚರಿಸುವ ಗ್ರಹಗಳ ಪ್ರಭಾವವು ಭೂಮಿಯ ಮೇಲಿನ ಜಡ ಮತ್ತು ಚೇತನಗಳ ಮೇಲೆ ಬೀಳುವುದು ನಿಜವೆಂದು ಭಾವಿಸಿದರೂ ಅದು ಒಬ್ಬೊಬ್ಬರ ಮೇಲೆ ಒಂದೊಂದು ವಿಧವಾಗಿ ಆಗುವುದು ಹೇಗೆ? ಅದೂ ಉಳಿದ ಪ್ರಾಣಿಗಳನ್ನು ಬಿಟ್ಟು ಕೇವಲ ಮಾನವರ ಮೇಲೆ ಮಾತ್ರ ಆಗುವುದಕ್ಕೆ ಯಾವುದು ಪ್ರಮಾಣ? ಒಂದೇ ಗಳಿಗೆಯಲ್ಲಿ ಹುಟ್ಟುವ ಹತ್ತು ಮಕ್ಕಳಿಗೆ ಒಂದೇ ಬಗೆಯ ಫಲವಾಗುವುದೆಂಬುದಕ್ಕೆ ಏನು ನಿದರ್ಶನ? ಜನನ ಕಾಲದಲ್ಲಿನ ಗ್ರಹಗತಿಗಳೇ ಆಯಾ ವ್ಯಕ್ತಿಯ ಭವಿಷ್ಯವನ್ನು ನಿರ್ಧರಿಸುವಲ್ಲಿ ಸಮರ್ಥವಾಗುವುದಾದರೆ ಕರ್ಮಸಿದ್ಧಾಂತದ ಗತಿ ಏನು?

ಈ ಜ್ಯೋತಿಷ್ಯಗಳು ಹೇಳುವ ಫಲಗಳಲ್ಲಿ ಹೆಚ್ಚಾಗಿ ಊಹೆ, ಕಲ್ಪನೆಗಳಿಗೇ ಪ್ರಾಧಾನ್ಯ! ಬೇರೆ ಜಾತಕಗಳಲ್ಲಿ ಪರಸ್ಪರ ವಿರೋಧ! ಹೇಳುವ ಹತ್ತು ಫಲಗಳಲ್ಲಿ "ಪಂಚಭವತಿ, ಪಂಚನಭವತಿ" ಎನ್ನುತ್ತಾರೆ. ಉಳಿದ ಐದು ಏಕೆ ಆಗುವುದಿಲ್ಲ ಎಂದರೆ ಅದಕ್ಕೆ ಪಾರ್ವತಿಯ ಶಾಪವುಂಟು"! ಎಂದು ಜಾರಿಕೊಳ್ಳುತ್ತಾರೆ. ಹುಟ್ಟುವ ಮಗು ಗಂಡೋ, ಹೆಣ್ಣೋ? ಎಂದರೆ ಅವರು ಜಾತಕದ ಕಡೆಗೆ 'ಪುತ್ರೋ ನ ಪುತ್ರೀ' ಎಂದು ಬರೆದಿರುತ್ತಾರೆ! ಹೇಗೆ ಬೇಕಾದರೂ ನುಣುಚಿಕೊಳ್ಳಬಹುದು! ಇದರಂತೆ ಹಸ್ತಸಾಮುದ್ರಿಕೆ, ರಮಲ, ತಾಜಿಕ, ಶಕುನಾದಿಗಳಿಗೆಲ್ಲ ಮೂಢನಂಬಿಕೆಯೇ ಆಧಾರ! ಇದನ್ನು ಕಂಡೇ ವಾಂತಸ್ಯಮುನಿ "ಮನೋನಿಷ್ಠಯಂತು ಸ್ವಾಂತಸ್ಯಂ" ಎಂದು ಮನಸ್ಸಿನ ನಿರ್ಧಾರವನ್ನೂ ಸೂಚಿಸಿದ! ಸತ್ಪುರುಷರಿಗೆ ಆತ್ಮ ಪ್ರಮಾಣ (ಅಂತಃಕರಣ ಪ್ರವೃತ್ತಿ) ಮುಖ್ಯ ಎಂದು ಕಾಳಿದಾಸ ಹೇಳಿದ್ದಾನೆ. ಗೌತಮ ಬುದ್ಧ, ದಯಾನಂದ ಸರಸ್ವತಿ ಮುಂತಾದವರು ಫಲ ಜ್ಯೋತಿಷ್ಯವನ್ನು ಒಪ್ಪುವುದಿಲ್ಲ. ಆದಕ್ಕಾಗಿಯೇ ಶರಣರು "ಎಮ್ಮವರು ಎಮ್ಮ ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ!" ಎಂಬ ತೀರ್ಮಾನಕ್ಕೆ ಬಂದಿದ್ದು.

ಎಂ. ಜಿ. ನಂಜುಂಡಾರಾಧ್ಯ

ಮಾತೃಪೂಜೆ ವಿಶ್ವೇತಿಹಾಸದ ಬೆಳಕಿನಲ್ಲಿ

ವಿಶ್ವವ್ಯಾಪಕವಾದ ಮಾತೃಪೂಜೆಯ ಪರಂಪರೆಯ ಅಧ್ಯಯನದಿಂದ ನಮಗೆ ಮಾತೃತ್ವ-ಚೇತನದ ವಿಕಾಸದ ಅಧ್ಯಯನದಲ್ಲಿ ಬಹಳ ಸಹಾಯ ದೊರೆಯುತ್ತದೆ. ಆ ಮಾತೃತ್ವ ಚೇತನದ ಜ್ಞಾನ ಎಲ್ಲ ರೀತಿಯ ಮಂಗಲಗಳೊಂದಿಗೆ ನಮ್ಮನ್ನು ರಕ್ಷಿಸಬಲ್ಲುದಾಗಿದೆ.

ಮಾತೃಪೂಜೆಯ ಪರಂಪರೆ ಅತ್ಯಂತ ಪ್ರಾಚೀನ ಮತ್ತು ಮಧ್ಯಕಾಲಗಳಲ್ಲಿ ಭಾರತವೇ ಅಲ್ಲದೆ, ಈಜಿಪ್ಟ್, ಮೆಸಪೊಟಾಮಿಯ, ಚೀನ, ಜಪಾನ್, ಮಲಯ ದ್ವೀಪಗಳು, ಗ್ರೀಸ್, ಸಿರಿಯಾ, ಬ್ಯಾಬಿಲೋನ್, ಪೆರು ಮುಂತಾದ ದೇಶಗಳಲ್ಲಿ ಆರಂಭವಾಯಿತು. ಮಾತೃಪೂಜೆಯು ಅತ್ಯಂತ ಉನ್ನತ ರೀತಿಯಲ್ಲಿ ವಿಕಾಸಗೊಂಡಿದ್ದ ಈ ಎಲ್ಲ ದೇಶಗಳಲ್ಲಿ ಅದರ ರೂಪ ಮತ್ತು ಹೆಸರುಗಳಲ್ಲಿ ಭಿನ್ನತೆ ಇದ್ದರೂ ಆ ಎಲ್ಲ ರಾಷ್ಟ್ರಗಳೂ ಒಂದೇ ಮೂಲದಿಂದ ವಿಚಾರಗಳು ಮತ್ತು ರೀತಿ ಪದ್ಧತಿಗಳನ್ನು ಗ್ರಹಿಸಿದ್ದಂತೆ ಕಂಡುಬರುತ್ತದೆ.

ಸೃಷ್ಟಿ ಯೋಜನೆಯಲ್ಲಿ ನಾರಿಯ ಸ್ಥಾನ ಅತ್ಯಂತ ಪ್ರಮುಖವಾದುದರಿಂದ ಬಹಳ ಪ್ರಾಚೀನ ಕಾಲದಿಂದಲೂ ಅವಳ ಪೂಜೆ ನಡೆಯುತ್ತ ಬಂದಿದೆ. ಜನನಿಯಾದ ಕಾರಣ ನಾರಿಯ ಶಕ್ತಿಯನ್ನು ಮಾತೃ ಶಕ್ತಿಯೆಂದು ಒಪ್ಪಿ ತಾಯಿಯ ರೂಪದಲ್ಲಿ ಅವಳ ಪೂಜೆ ಮಾಡಲಾಯಿತು.

ಭಾರತದಲ್ಲಿ ಮಾತೃ ಪೂಜೆಯ ಮೂಲವನ್ನು ಹುಡುಕಲು ವೈದಿಕ-ಯುಗಕ್ಕಿಂತ ಹಿಂದಕ್ಕೆ, ದ್ರಾವಿಡ-ಸಂಸ್ಕೃತಿಯ ಯುಗಕ್ಕೆ ಹೋಗಬೇಕು. ದ್ರಾವಿಡ ಸಂಸ್ಕೃತಿಯ ಕಾಲದಲ್ಲಿ ನಮಗೆ ಮಾತೃಪೂಜೆ ಅಥವಾ ಶಕ್ತಿಪೂಜೆಯ ಚಿಹ್ನೆಗಳು ವಿಪುಲವಾಗಿ ಸಿಗುತ್ತವೆ. ಈ ಚಿಹ್ನೆಗಳಲ್ಲಿ ಪ್ರತೀಕ ಮುದ್ರೆಗಳಲ್ಲಿ ಶಿವನೂ ಕಾಣಿಸುತ್ತಾನೆ. ಅವನನ್ನು ಶಕ್ತಿಯ ಪುರುಷ ರೂಪವೆಂದು ಭಾವಿಸಲಾಗುತ್ತದೆ. ಸತಿ ಮತ್ತು ಶಿವ ಇವರ ಪ್ರೇಮ ಭಾರತದ ಸಾಂಸ್ಕೃತಿಕ ಚರಿತ್ರೆಯ ಗೌರವಗಾದೆಯಾಗಿದೆ. ಸತಿಯ ದೇಹತ್ಯಾಗದ ಕಥೆ ದ್ರಾವಿಡ ಸಂಸ್ಕೃತಿಯ ಕಾಲದ್ದೇ ಎಂದು ತೋರುತ್ತದೆ.

ಆರ್ಯ ಸಂಸ್ಕೃತಿಯ ಕಾಲ ದ್ರಾವಿಡ ಸಂಸ್ಕೃತಿಯ ಕಾಲದ ನಂತರದ್ದು. ಈ

[ಏಪ್ರಿಲ್ ೮೮ರ ನವನೀತ್‌ನಲ್ಲಿ ಪ್ರಕಟವಾದ ಹಂಸಕುಮಾರ್ ಅವರ 'ಮಾತೃ-ಪೂಜಾ : ವಿಶ್ವ ಇತಿಹಾಸ್ ಕೇ ಆಲೋಕ್ ಮೇ' ಎಂಬ ಲೇಖನದ ಅನುವಾದ]

ಎರಡೂ ಸಂಸ್ಕೃತಿಗಳ ಧರ್ಮ ಹಾಗೂ ಸಾಧನೆಯ ಪ್ರಕಾರಗಳು ಭಿನ್ನವಾದವು. ಆರ್ಯ ಸಂಸ್ಕೃತಿಯು ಪುರುಷ ಪ್ರಧಾನವಾದಾಗ್ಯೂ ಅದರಲ್ಲಿ ನಾರಿಯನ್ನು ಶಕ್ತಿಯೆಂದೂ ಭಾವಿಸಲಾಗಿದೆ. ಅದು ಸಮಸ್ತ ವಿಶ್ವವನ್ನು ಪೋಷಿಸುವ ವಿಶುದ್ಧ ಚೇತನ ಹಾಗೂ ಜ್ಯೋತಿಯೂ ಆಗಿದೆ. ಅದು ವೇದಗಳ ಅದಿತಿ, ಅನಂತ, ಅಖಂಡ ಶಕ್ತಿ ಹಾಗೂ ಎಲ್ಲ ದೇವತೆಗಳ ಜನನಿ

ಋಗ್ವೇದದಲ್ಲಿ ಇಲಾ, ಮಹೀ ಮತ್ತು ಸರಸ್ವತಿ ಈ ಮೂವರು ದೇವಿಯರ ಉಲ್ಲೇಖವಿದೆ. ಇಲಾ (ದಿವ್ಯಸ್ರೋತದಿಂದ ಎಲ್ಲ ವಸ್ತುಗಳನ್ನು ತರುವ ವಿಶಾಲ ವಾಣಿ) ಮಹೀಗೆ ಸಕ್ರಿಯ ಮಾರ್ಗದರ್ಶನವನ್ನು ನೀಡುವ ಸತ್ಯದ ಆದಿವಾಣಿ. ಸರಸ್ವತಿ ಈ ಸತ್ಯದ ಹರಿಯುವ ಧಾರೆ, ಅವರ ಅಂತಃಪ್ರೇರಣೆಯ ವಾಣಿ. ಸರಸ್ವತಿ ವೈದಿಕ ಕಾಲದ ಮುಖ್ಯ ನದಿಯೂ ಆಗಿತ್ತು, ಇದರ ದಡದಲ್ಲಿಯೇ ಆರ್ಯ ಸಂಸ್ಕೃತಿಯು ಉನ್ನತ ವಿಕಾಸವಾಯಿತು ಮತ್ತು ಈ ಕಾರಣಕ್ಕಾಗಿ ಆರ್ಯರು ಈ ದೇವಿಯನ್ನು ಜ್ಞಾನದ ಪ್ರತೀಕವೆಂದು ಭಾವಿಸಿದರು. ವೇದಗಳಲ್ಲಿ ಶಕ್ತಿ-ಸೂಕ್ತ ಮತ್ತು ಶಕ್ತಿ ಸಾಧನೆಯ ಮೂಲ ಸೂತ್ರವೂ ದೊರೆಯುತ್ತದೆ.

ದ್ರಾವಿಡ ಮತ್ತು ಆರ್ಯ ಸಂಸ್ಕೃತಿಗಳ ಸಮನ್ವಯದಿಂದ ಪೌರಾಣಿಕಯುಗ ನಿರ್ಮಾಣವಾಯಿತು. ಅದರಲ್ಲಿ ದೇವಾಲಯಗಳು, ಮೂರ್ತಿಗಳು ಮತ್ತು ಅವುಗಳ ಪೂಜೆ ಪ್ರಧಾನವಾಯಿತು. ಪ್ರತಿಯೊಂದು ದೇವತೆಗೂ ಬೇರೆ ಬೇರೆ ಮೂರ್ತಿ, ದೇವಾಲಯ, ಸಂಪ್ರದಾಯ ಮತ್ತು ಪುರಾಣಗಳು ನಿರ್ಮಾಣವಾದವು. ಈ ಪುರಾಣಗಳಲ್ಲಿ ದೇವತೆಗಳು, ಅವತಾರಗಳು ಮುಂತಾದ ಜೀವನ ಕಥೆಗಳು ಹಾಗೂ ಸೀತಾ–ರಾಮ, ಉಮಾ-ಮಹೇಶ, ರಾಧಾ–ಕೃಷ್ಣ ಮುಂತಾದವರ ಲೀಲೆಗಳು ವರ್ಣಿತವಾಗಿವೆ. ಮಾರ್ಕಂಡೇಯ ಪುರಾಣ ಹಾಗೂ ದೇವೀ ಭಾಗವತಗಳಲ್ಲಿ ಮುಖ್ಯವಾಗಿ ಶಕ್ತಿ ತತ್ವದ ನಿರೂಪಣೆ ಇದೆ. ಇವುಗಳಲ್ಲಿ ಸಮಸ್ತ ದೇವತೆಗಳ ದೇಹದಿಂದ ಹೊರಟ ತೇಜಸ್ಸೇ ಶಕ್ತಿ ಎಂದು ಹೇಳಲಾಗಿದೆ. ಆ ತೇಜಸ್ಸು ಏಕಸ್ಥವಾಗಿ ಎಲ್ಲೆಲ್ಲೂ ವ್ಯಾಪಿಸುತ್ತದೆ ಮತ್ತು ತೇಜೋಮಯ ನಾರಿಯ ತೇಜೋಮಯ ರೂಪವನ್ನು ಧರಿಸುತ್ತದೆ. ಇದೇ ನಾರೀ ಭಗವತೀ ದುರ್ಗ ಎನಿಸಿಕೊಂಡಿದೆ. ಅದರ ಬಗ್ಗೆ ಮಾತೃ ಭಾವನೆಯನ್ನು ವ್ಯಕ್ತಪಡಿಸಲು, ಅದರ ಪೂಜೆಯನ್ನು ತಾಯಿಯ ರೂಪದಲ್ಲಿ ಮಾಡಲಾಗುತ್ತದೆ. ಮೂರ್ತಿ ಪೂಜೆಯ ಕ್ಷೇತ್ರದಲ್ಲಿ ಮಾತೆಯ ಮೂರ್ತಿಯೇ ಪ್ರಪ್ರಥಮವಾಗಿ ನಿರ್ಮಾಣವಾಯಿತು, ಅದನ್ನು ವಿಶ್ವದ ಆದಿ ಸೃಷ್ಟಿಕರ್ತೆ ಎಂದು ಸ್ವೀಕರಿಸಲಾಗಿದೆ

ಶಕ್ತಿಯೇ ಆದಿ ಸೃಷ್ಟಿಕರ್ತೆ: ಶಕ್ತಿಯೇ ಆದಿ ಸೃಷ್ಟಿಕರ್ತೆ ಎಂದು

ಭಾರತದ ಹೊರಗೂ ಸ್ವೀಕರಿಸಲಾಗಿದೆ. ಮಾತೃಪೂಜೆಯ ಪರಂಪರೆ ಭಾರತದಲ್ಲಿ ಆರಂಭವಾಗಿದರೂ ಭಾರತಕ್ಕೆ ಮಾತ್ರ ಸೀಮಿತವಾಗಲಿಲ್ಲ. ಅತ್ಯಂತ ಪ್ರಾಚೀನ ಕಾಲದಲ್ಲಿ ಪಶ್ಚಿಮ ಏಷ್ಯಾದಲ್ಲಿ ಮಾತೃ ಪೂಜೆಯನ್ನು ಅನೇಕ ರೂಪಗಳಲ್ಲಿ ಮಾಡಲಾಗುತ್ತಿತ್ತು. ಈಜಿಪ್ಟಿನಲ್ಲಿ ಈಸಿಸ್ ರೂಪದಲ್ಲಿ, ಅಸ್ಸೀರಿಯಾದಲ್ಲಿ ಈಶ್ವರ ರೂಪದಲ್ಲಿ ಮಾತೃಪೂಜಾ ಪರಂಪರೆ ಅಕ್ಷುಣ್ಣವಾಗಿತ್ತು. ಈಸಿಸ್ ತಲೆಯ ಮೇಲೆ ಹಸುವಿನ ಎರಡು ಕೊಂಬುಗಳು ಕಾಣಿಸುತ್ತವೆ ಮತ್ತು ಈಶ್ವರ ಸ್ವಯಂ ಪ್ರಧಾನವಾದ ಮಾತೃದೇವತೆ, ಯಾವುದೇ ದೇವತೆಯ ಪತ್ನಿ ಅಥವಾ ಛಾಯೆ ಅಲ್ಲ. ಈಶ್ವರ ರೂಪ ಸುಮೇರಿ ಮಾತೃದೇವಿ ನಿನ್ನಿ (ನಿನ್ನಾ, ನನ್ನರ್, ಇನನ್ನಾ ಅಥವಾ ಇನಿನ್ನಿ)ಯನ್ನು ಹೋಲುತ್ತದೆ.

ತಿಯಾಮತ್ ಬಾಬುಲಿ ಅಸುದೀ ಮಾತೃದೇವಿ. ಆಕೆ ಅತ್ಯಂತ ಶಕ್ತಿಶಾಲಿಯಾದ ಮಾತೃದೇವಿ ಮತ್ತು ಆಕೆಯನ್ನು ಗ್ರಾಮದೇವತೆಯೆಂದೂ ಭಾವಿಸಲಾಗಿದೆ. ಆಕೆಯ ಪೂಜೆ ಇರಾಕಿನಲ್ಲಿಯೂ ನಡೆಯುತ್ತದೆ. ಆಕೆಯನ್ನು ಕ್ರೂರ ಮಾತೃದೇವತೆಯೆಂದು ಭಾವಿಸಲಾಗುತ್ತದೆ.

ಮಧ್ಯ ಏಷ್ಯಾದಲ್ಲಿ ಗ್ರೀಸ್‌ವರೆಗಿನ ಅಗೆತಗಳಲ್ಲಿ ಮಾತೃದೇವಿಯರ ಅಸಂಖ್ಯ ಮಣ್ಣಿನ ಮೂರ್ತಿಗಳು ದೊರೆತಿವೆ. ಇದರಿಂದ ಪುರುಷನು, ಭೂಮಿಯ ಯಾವುದೇ ಭಾಗಕ್ಕೆ ಸೇರಿದ್ದರೂ, ತನ್ನ ರಕ್ಷಾಮೂರ್ತಿ ಮಾತೃತ್ವದ ಬಗ್ಗೆ ಸದಾ-ಸರ್ವದಾ, ಕೃತಜ್ಞತಾಪೂರ್ವಕವಾದ ಶ್ರದ್ಧೆಯನ್ನು ತೋರಿಸುತ್ತ ಬಂದಿದ್ದಾನೆ ಎಂಬುದು ತಿಳಿಯುತ್ತದೆ.

ಪ್ರಾಗೈತಿಹಾಸಿಕ ಕಾಲದಿಂದಲೂ ಮಾತೃಪೂಜೆಯ ವಿಭಿನ್ನ ಸಂಕೇತಗಳು, ಭಗ್ನಮೂರ್ತಿಗಳು, ಕಲ್ಲಿನ ಚೂರುಗಳು ಹಾಗೂ ಬಂಡೆಗಳ ಮೇಲೆ ಬರೆದಿರುವ ಚಿತ್ರಗಳು ರೂಪದಲ್ಲಿ ದೊರೆಯುತ್ತವೆ. ಈ ಚಿತ್ರಗಳು ಮತ್ತು ಮೂರ್ತಿಗಳು ಪೃಥ್ವಿಯೊಂದಿಗೆ ಸೇರಿಕೊಂಡಿವೆ ಎಂದು ತೋರಿಸಲಾಗಿದೆ. ಈ ವಿಷಯ, ನಮ್ಮ ಪೂರ್ವಜರು, ಮಾತೃ ಶಕ್ತಿಯು ಪೃಥ್ವಿಯೊಂದಿಗೆ ಸಂಬಂಧವಾಗಿದೆಯೆಂದು ಭಾವಿಸಿದ್ದರು ಎಂಬುದರ ಸಂಕೇತವಾಗಿದೆ.

ಅನೇಕ ಮಾತೃ-ಮೂರ್ತಿಗಳು ಭಯಾವಹವಾಗಿಯೂ ಇವೆ. ಮಧ್ಯಕಾಲದಿಂದ ಹಿಡಿದು ಇಂದಿನವರೆಗೂ ಈ ಭಯಕಾರೀ ಮಾತೃ-ಮೂರ್ತಿಗಳ ಪೂಜೆ ನಡೆಯುತ್ತ ಬಂದಿದೆ. ಎಲ್ಲಕ್ಕಿಂತ ಭಯಂಕರವಾದ ಮೂರ್ತಿಗಳೆಂದರೆ ಕಾಳಿ, ಹೈಥೋರ್, ಇಸಿಸ್ ಮತ್ತು ನಾ-ಉತ್ ಮೂರ್ತಿಗಳು. ಪುರುಷನ ಮನಸ್ಸಿನಲ್ಲಿ ಮಾತೃಶಕ್ತಿಯ ಭಯ ಅತ್ಯಂತ ಆಳವಾಗಿ ಊರಿತ್ತು ಎಂಬುದನ್ನು ಇದು

ಸೂಚಿಸುತ್ತದೆ ಎಂಬುದು ಮನೋವಿಜ್ಞಾನಿಗಳ ಅಭಿಪ್ರಾಯ

ಮಾತೃಶಕ್ತಿಯ ನಾಲ್ಕು ಮಹಾರೂಪಗಳು : 'ಮಾತೆಯು ಈ ವಿಶ್ವ ಬ್ರಹ್ಮಾಂಡದ ಸಂಚಾಲನೆಯನ್ನು ಮಾಡುತ್ತಾಳೆ ಮತ್ತು ಜಗನ್ನಾಟ್ಯ ಸಂಬಂಧವಾದ ಕಾರ್ಯವನ್ನು ಮಾಡುತ್ತಾಳೆ, ಅದರಲ್ಲಿ ಅವಳ ನಾಲ್ಕು ಮಹಾರೂಪಗಳು ವಿಶೇಷವಾಗಿ ನಮ್ಮ ಮುಂದೆ ಪ್ರಕಟವಾಗಿವೆ. ಮಾತೆಯ ಈ ಮಹಾರೂಪ-ಚತುಷ್ಟಯವನ್ನು ನಾವು ಈ ನಾಲ್ಕು ಹೆಸರುಗಳಿಂದ ಕರೆಯುತ್ತೇವೆ-ಮಾಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ ಹಾಗೂ ಮಹಾಸರಸ್ವತಿ' ಎಂದು ಮಾತೃಶಕ್ತಿ ಮತ್ತು ಅದರ ವಿವಿಧ ಸ್ವರೂಪಗಳ ಚರ್ಚೆ ಮಾಡುತ್ತ, ಶ್ರೀ ಅರಬಿಂದು ಅವರು ಹೇಳುತ್ತಾರೆ.

ಮಾಹೇಶ್ವರಿ: ಶಾಂತಿಮಯಿ, ಐಶ್ವರ್ಯಮಯಿ, ಜ್ಞಾನಮಯಿ ಮತ್ತು ಕರುಣಾಮಯಿಯಾಗಿದ್ದಾಳೆ. ಸಮಸ್ತ ಜ್ಞಾನ ಅವಳಲ್ಲಿ ಅಡಗಿದೆ, ಅವಳಿಂದ ಹೊರತಾಗಿ ಏನೂ ಇಲ್ಲ. ಎಲ್ಲ ಪದಾರ್ಥ, ಎಲ್ಲ ಜೀವ, ಸೃಷ್ಟಿವಿಧಾನ, ಅದರ ಕಾಲವಿಭಾಗ, ಭೂತ, ವರ್ತಮಾನ ಮತ್ತು ಭವಿಷ್ಯ ಎಲ್ಲವೂ ಅವರ ಅಂತರಂಗದಲ್ಲಿವೆ. ಜ್ಞಾನ ಅವಳ ಶಕ್ತಿಯ ಕೇಂದ್ರ, ಆದರೆ ಅದು ಅವಳ ಕರುಣೆಯಿಂದಾಗಿ ಕುರುಡಲ್ಲ.

ಮಹಾಕಾಳಿ: ಶಕ್ತಿವಂತೆ ಮತ್ತು ಬಲಶಾಲಿನಿ, ಇವು ಇವಳ ವಿಶಿಷ್ಟ ಶಕ್ತಿಗಳು, ಜ್ಞಾನವಂತೆ ಅಲ್ಲ. ಈಕೆ ಇಲ್ಲವೆ ಕೊಲ್ಲುತ್ತಾಳೆ, ಇಲ್ಲವೆ ಉದ್ಧರಿಸುತ್ತಾಳೆ. ತಾಯಿಯ ರೂಪದಲ್ಲಿ ಅವಳ ಸ್ನೇಹ ಅವಳ ಆಕ್ರೋಶದಷ್ಟೇ ತೀವ್ರವಾಗಿದೆ. ವಾಸ್ತವವಾಗಿ ಅವಳ ತೀವ್ರತೆ ಅತ್ಯಂತ ತುಮುಲ, ಪ್ರಚಂಡ ಮತ್ತು ಆವೇಶಪೂರ್ಣವಾದುದು.

ಮಹಾಲಕ್ಷ್ಮಿ: ಯ ಶಕ್ತಿಯ ಸ್ವರೂಪ ಅತ್ಯಂತ ಆಕರ್ಷಕ ಕೋಮಲ ಹಾಗೂ ಅಲೌಕಿಕ. ಅವಳ ಆಕರ್ಷಣೆಯ ಪರಿಣಾಮವಾಗಿ ಸ್ವಯಂ ಜ್ಞಾನ ಮತ್ತು ಶಕ್ತಿಗಳು ಕೂಡಿ ಭಕ್ತನ ಮನಸ್ಸು ಪ್ರಾಣ ಮತ್ತು ಶರೀರವನ್ನು ಪವಿತ್ರಗೊಳಿಸುತ್ತವೆ, ಶುದ್ಧಿಗೊಳಿಸುತ್ತವೆ. ಮಹಾಲಕ್ಷ್ಮಿ ಪ್ರೇಮ ಮತ್ತು ಅಲೌಕಿಕ ಸೌಂದರ್ಯದ ಮೂಲಕ ಭಕ್ತರನ್ನು ಭಗವತ್ ಪಾಶದಲ್ಲಿ ಬಂಧಿಸುತ್ತಾಳೆ. ಹೇಗೆ ಬಂಧಿಸುತ್ತಾಳೆ ಎಂಬುದನ್ನು ಅರವಿಂದರು ಈ ರೀತಿ ಹೇಳಿದ್ದಾರೆ. 'ಅವಳ ಪರಮಸೃಷ್ಟಿವರ್ಗದಲ್ಲಿ ಜೀವನವು ಸ್ವರ್ಗೀಯ ಕಲೆಯ ಒಂದು ಸರ್ವಾಂಗ ಸುಂದರ ಚಾರು ಶಿಲ್ಪವಾಗುತ್ತದೆ ಮತ್ತು ಇಡೀ ಜಗತ್ತು ಒಂದು ದಿವ್ಯ ಆನಂದದ ಕಾವ್ಯವಾಗಿ ಬಿಡುತ್ತದೆ; ಜಗತ್ತಿನ ಸಮಸ್ತ ಸಂಪತ್ತು ಒಂದು

ಸ್ಥಳಕ್ಕೆ ಬಂದು, ಒಂದು ಮಹತ್ತ್ವದ ವ್ಯವಸ್ಥಾಕ್ರಮದಲ್ಲಿ ಒಂದಾಗಿ ಬಿಡುತ್ತದೆ.'

ಮಹಾಸರಸ್ವತಿ: ಮಾತೆಯ ಪ್ರಾಣಶಕ್ತಿ. ಈ ಬಲದಿಂದಲೇ ಆಕೆ ಕರ್ಮ ಸಂಪಾದನೆಯಲ್ಲಿ ತನ್ನ ನೈಪುಣ್ಯ ಮತ್ತು ವ್ಯವಸ್ಥೆಯ ಪರಿಚಯ ಮಾಡಿಕೊಡುತ್ತಾಳೆ. ಸಮಸ್ತ ಕಲೆಗಳು ಹಾಗೂ ವಿದ್ಯೆಗಳು ಅವಳ ಅಧೀನದಲ್ಲಿವೆ ಮತ್ತು ಆಕೆ ಅವುಗಳ ಸಮರ್ಥ, ಸಾವಧಾನ, ಸುನಿಪುಣತೆ, ನಿರ್ಮಾಣ ಕರ್ತ್ರಿ, ವ್ಯವಸ್ಥಾಪಿಕೆ, ಕಲಾವತಿ ಹಾಗೂ ಪ್ರಯೋಗ-ಜ್ಞಾನವತಿ ಆಗಿದ್ದಾಳೆ. ಮಾತೆಯ ಶಕ್ತಿ ವಿಗ್ರಹಗಳಲ್ಲಿ ಈಕೆ ಮನುಷ್ಯರ ದೋಷಗಳನ್ನು ಎಲ್ಲರಿಗಿಂತ ಹೆಚ್ಚಾಗಿ ಅಧಿಕ ಧೈರ್ಯದಿಂದ ಸಹಿಸುತ್ತಾಳೆ ಹಾಗೂ ಕರುಣಾಶಾಲಿ, ಸುಸ್ಮಿತೆ ಸುಹೃದೆ ಹಾಗೂ ಸದಾ ಸಹಾಯಕಳು ಆಗಿದ್ದಾಳೆ.

ಅನಂತ ಸತ್ತೆ (ಅಸ್ತಿತ್ವ)ಯ ಶುದ್ಧ ಚೇತನ: ಅನಂತ ಮಾತೆ:-

ವೇದಗಳ ಋಷಿಗಳು ಅರಿತ ಮಾತೃಶಕ್ತಿಗಳಲ್ಲಿ ಅದಿತಿ ಮತ್ತು ಉಷಾ ಪ್ರಮುಖರು. ಅವರು ಅದಿತಿಯ ರೂಪದಲ್ಲಿ ಅನಂತ, ಅಖಂಡ ಶಕ್ತಿಯ ಕಲ್ಪನೆ ಮಾಡಿದರು. ಆಕೆಯನ್ನು ಅನಂತಮಾತೆ ಹಾಗೂ ಎಲ್ಲ ದೇವಿ-ದೇವತೆಗಳ ಆದ್ಯ ಮಾತಾ ಎಂದು ಭಾವಿಸಿದರು. ಮೂಲ ರೂಪದಲ್ಲಿ ಅದಿತಿ ಏಕಮೇವ ಮತ್ತು ಸ್ವಯಂ-ಪ್ರಕಾಶಿತ ಅನಂತ ಸತ್ತೆಯ ಶುದ್ಧ ಚೇತನ; ಏಕೆಂದರೆ ವ್ಯಾಪಕ ಮತ್ತು ಬಂಧನ ಹೀನವಾಗುವುದು ಎಂದು ಅದರ ಅರ್ಥ. ಶ್ರೀ ಅರವಿಂದರ ಪ್ರಕಾರ, 'ಉಷಾ ಅದಿತಿಯ ಶಕ್ತಿ ಮತ್ತು ಮುಖ ಮತ್ತು ದೇವ ಮಾತೆ ಕೂಡ.' ಋಗ್ವೇದದ ಒಂದು ಪ್ರಾರ್ಥನೆಯಲ್ಲಿ 'ಓ ಉಷಾ ನಿನ್ನ ಸಂಪೂರ್ಣ ಸ್ವರ್ಗೀಯ ವೈಭವದೊಂದಿಗೆ ಬಾ ಮತ್ತು ನಮ್ಮನ್ನು ಪರಮಾನಂದದ ಕಡೆಗೆ ಜಾಗೃತರನ್ನಾಗಿ ಮಾಡು' ಎಂದು ಋಷಿಗಳು ಹೇಳುತ್ತಾರೆ.

ವೈದಿಕ ಋಷಿಗಳ ಮಾತೃಸಾಧನೆಯಲ್ಲಿ ಇಲಾ, ಸರಸ್ವತಿ ಹಾಗೂ ಮಹಿ ಇವರಲ್ಲದೆ, ಇವರ ನದಿಗಳಿಗೂ ಸ್ಥಾನವಿದೆ. ಋಗ್ವೇದದ ೭-೪೭ರಲ್ಲಿ 'ಸೂರ್ಯನು ತನ್ನ ಕಿರಣಗಳಿಂದ ರಚಿಸಿರುವ ಆ ನದಿಗಳು ನಮಗೆ ಉನ್ನತವಾದ ಹಿತ (ವರಿವಃ)ವನ್ನು ಉಂಟುಮಾಡಲಿ,' ಎಂದು ಹೇಳಲಾಗಿದೆ.

ನಾವು ಆಕೆಯನ್ನು ಯಾವ ಹೆಸರಿನಿಂದ ಕರೆದರೂ, ಎಲ್ಲ ಶಕ್ತಿಗಳೂ ಜಗನ್ಮಾತೆಯಲ್ಲಿಯೇ ಅಡಗಿವೆ ಎಂಬುದನ್ನು ನೋಡಿದೆವು. ನಾವು ಯಾವ ದೇವತೆಗಳನ್ನು ಪೂಜನೀಯವೆಂದು ಭಾವಿಸಿದ್ದೇವೆಯೋ ಆ ದೇವತೆಗಳು ಸ್ವಯಂ ಜಗನ್ಮಾತೆ-ಅನಂತ ಮಾತೆ-ಯ ಆರಾಧನೆ ಮತ್ತು ಉಪಾಸನೆಯನ್ನು

ಮಾಡಿಯೇ ಶಕ್ತಿಲಾಭವನ್ನು ಪಡೆಯುತ್ತಾರೆ. ಅಂತೆಯೇ ನಾವು ಕೂಡ ಜಗನ್ಮಾತೆ ಅನಂತ ಮಾತೆಯ ಆರಾಧನೆ ಮತ್ತು ಉಪಾಸನೆಯನ್ನು ಮಾಡಿ ಸಕಲಶಕ್ತಿಗಳನ್ನು ಪಡೆಯಬಲ್ಲೆವು.

ಒಂದು ವೇಳೆ ನಾವು ಮಾತೃಶಕ್ತಿಯ ಚರಣಗಳಲ್ಲಿ ನಿಕ್ಷೇಪ ಭಾವದಿಂದ ಫಲ ಲಾಭವನ್ನು ಪಡೆಯಬೇಕೆಂದಿದ್ದರೆ, ನಾವು ಆಕೆಯ ದಿವ್ಯ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು. ತಾಯಿಯಿಂದ ಕೊಡಲ್ಪಟ್ಟ ಗುಣಗಳು ಹಾಗೂ ಶಕ್ತಿಗಳನ್ನು ವಿಕಾಸಗೊಳಿಸಿಕೊಳ್ಳುವುದಕ್ಕೆ ನಮ್ಮ ಅಂತರಂಗದಲ್ಲಿ ಸತತವಾದ ಅಭೀಪ್ಸೆಯನ್ನು ಜಾಗ್ರತಗೊಳಿಸಿಕೊಂಡಿರಬೇಕು, ಮಾತೃಶಕ್ತಿಯ ಹೊಸ ಆಯಾಮಗಳನ್ನು ಗ್ರಹಿಸಿಕೊಳ್ಳಬೇಕು ಹಾಗೂ ಅವುಗಳನ್ನು ನಮ್ಮ ಜೀವನದಲ್ಲಿ ಅಭಿವ್ಯಕ್ತಗೊಳಿಸಬೇಕು. ಅನಂತ ಮಾತಾ ಒಂದು ಕೂಟಸ್ಥ ಶಕ್ತಿ ಮಾತ್ರವಲ್ಲ, ನಮ್ಮ ಅನಂತ-ಸಂಭವ ವಿಕಾಸ-ಪ್ರಗತಿಯ ಸಂಚಾಲಿಕೆಯೂ ಹೌದು ಎಂಬುದನ್ನು ಸದಾ ನೆನಪಿನಲ್ಲಿಟ್ಟಿರಬೇಕು.

ಇದೇ ನಿಜವಾದ ಮಾತೃಪೂಜೆ. ಇದೇ ಮಾತೃಶಕ್ತಿಯ ನಿಜವಾದ ಉಪಾಸನೆ.

ವಿಶ್ವವ್ಯಾಪಕ ಮಾತೃಪೂಜೆಯ ಪರಂಪರೆಯ ಅಧ್ಯಯನದಿಂದ ನಮಗೆ ಮಾತೃತ್ವ ಚೇತನದ ವಿಕಾಸದ ಅಧ್ಯಯನಕ್ಕೆ ಬಹಳ ಸಹಾಯ ದೊರಕುತ್ತದೆ. ಇಂದು ಪೃಥ್ವಿಯ ಮೇಲೆ, ಎಲ್ಲೆಲ್ಲೂ ಯಾವ ಕಲಹ, ಅಶಾಂತಿ ಮತ್ತು ವರ್ಗ ಸಂಘರ್ಷವಿದೆ. ಅವಕ್ಕೆಲ್ಲ ಮುಖ್ಯ ಕಾರಣವೇನೆಂದರೆ ನಾವು ಪುರುಷ ಚೇತನದ ವಿಕಾಸದಲ್ಲಿಯೇ ನಮ್ಮ ಸಮಸ್ತ ಶಕ್ತಿಯನ್ನೂ ಕೇಂದ್ರೀಕರಿಸಿಕೊಂಡಿರುವುದು. ನಾರೀಚೇತನ ಮತ್ತು ಮಾತೃತ್ವ ಚೇತನದ ವಿಕಾಸದ ಅಧ್ಯಯನದಿಂದ ನಾವು ಋಗ್ವೇದದ ಈ ಋಕ್ಕಿನ ಭಾವಾರ್ಥವನ್ನು ತಿಳಿಯಬಲ್ಲೆವು: 'ತಾಯಿ ಅದಿತಿಯೇ ಮಾತೆ, ಪಿತ ಹಾಗೂ ಪುತ್ರ ಎಲ್ಲವೂ ಆಗಿದ್ದಾಳೆ. ಯಾರು ಹುಟ್ಟಿದ್ದಾರೆ, ಯಾರು ಹುಟ್ಟಲಿದ್ದಾರೆ ಅವರೆಲ್ಲರೂ ಅದಿತಿಯೇ. ಆ ತಾಯಿ ಅದಿತಿ ಎಲ್ಲ ಅಮಂಗಳಗಳಿಂದ ನಮ್ಮನ್ನು ರಕ್ಷಿಸಲಿ.'

ಡಾ|| ಬಿ. ನಂ. ಚಂದ್ರಯ್ಯ

ಸಾಹಿತ್ಯದಲ್ಲಿ, ಜ್ಞಾನ ಸಾಹಿತ್ಯ, ಶಕ್ತಿ ಸಾಹಿತ್ಯ ಎಂದು ಎರಡು ವಿಧ; ಮೊದಲನೆಯದು ಕಲಿಸುತ್ತದೆ. ಎರಡನೆಯದು ನಡೆಸುತ್ತದೆ.

—ಡೆಕ್ವಿನ್ಸಿ

ಲಾಲಿಯ ಪದಗಳು

ತಾಯಿಯರು ಮಕ್ಕಳನ್ನು ಕುರಿತು ಕಲ್ಪಿಸಿದ ಪದಗಳೇ ಲಾಲಿಯ ಪದಗಳು. ಈ ಲಾಲಿಯ ಪದಗಳು ಮಕ್ಕಳನ್ನು ಸಂತೋಷಗೊಳಿಸುವುದಕ್ಕಾಗಿ ಅವರ ಅಳುವನ್ನು ನಿಲ್ಲಿಸುವುದಕ್ಕಾಗಿ, ಸಮಾಧಾನಗೊಳಿಸುವುದಕ್ಕಾಗಿ, ಅವರು ನಿದ್ರೆ ಹೋಗುವಂತೆ ಮಾಡುವುದಕ್ಕಾಗಿ ಮೂಡಿಬಂದಂಥವು.

ಜನಪದ ಸಾಹಿತ್ಯ ಸಹಜ ಸ್ಫೂರ್ತಿಯಿಂದ ಬಾಳಿನ ನೇರ ಅನುಭವಗಳನ್ನು ಹೊತ್ತು ನಿರಾಯಾಸವಾಗಿ ಚಿಮ್ಮಿಬಂದದ್ದು. ಜಾನಪದ ಸಾಹಿತ್ಯ ಸೃಷ್ಟಿಸ ಬೇಕೆಂಬ ಹಂಬಲವಿರಲಿಲ್ಲ. ಅವರ ಪಾಲಿಗೆ ಅದೊಂದು ಸಹಜ ಕ್ರಿಯೆ—ತಮ್ಮ ಬಾಳಿನಲ್ಲಿ ಕಂಡುಂಡ ಕಹಿಸಿಹಿಗಳಿಗೆ ನೋವು ನಲಿವುಗಳಿಗೆ ಎತ್ತರ-ಬಿತ್ತರಗಳಿಗೆ ಅವರು ಕೊಟ್ಟ ಅಭಿವ್ಯಕ್ತಿಯೇ ಸಾಹಿತ್ಯನೆನಿಸಿಕೊಂಡಿತು. ಜನಪದ ಸಾಹಿತ್ಯ ನೋಡಿ ಕಲಿಯುವಂಥವಲ್ಲ; ಕೇಳಿಯೇ ಕಲಿಯುವಂಥದು. ಜನಪದ ಕವಿಗಳು ಬಾಲಲೀಲೆಯ ವಿವಿಧ ವಿನ್ಯಾಸಗಳನ್ನು ಹೃದಯಂಗಮವಾಗಿ ಬಣ್ಣಿಸಿದ್ದಾರೆ. ಮಕ್ಕಳಿಗಾಗಿ ತಾಯಂದಿರು ಹಾಡಿದ ಹಾಡುಗಳಿಗೆ ಕೊರತೆ ಇಲ್ಲ. ಲಾಲನೆ ಪಾಲನೆ ಪೋಷಣೆಗಳನ್ನೆಲ್ಲ ಲಾಲಿಪದಗಳಲ್ಲಿಯೇ ಕಾಣುತ್ತೇವೆ. “ಆಡಿಬಾ ನನ ಕಂದಾ ಅಂಗಾಲ ತೊಳೆದೇನು ತೆಂಗಿನಕಾಯಿ ತಿಳಿನೀರ ತೆಕ್ಕೊಂಡು ಬಂಗಾರ ಮೋರೆ ತೊಳೆದೇನು” ಎಂದು ತಾಯಿ ಹಾಡುತ್ತಾಳೆ. ಅವಳಿಗೆ ತನ್ನ ಕಂದ ನೆಂದರೆ ಬಂಗಾರವಿದ್ದಂತೆ.

ಅಳುವ ಕಂದನ ತುಟಿಯು ಹವಳದ ಕುಡಿಯಂಗೆ
ಕುಡಿಹುಬ್ಬು ಬೇವಿನೆಸಳಂಗೆ! ಕಣ್ ನೋಟ
ಶಿವನ ಕೈ ಅಲಗು ಹೊಳೆದಂಗೆ!!

ಅಳುವ ಮಗುವಿನ ಇಂಥ ಚಿತ್ರ ಅಪೂರ್ವವಾದುದು. ಅಳುವ ಮಗುವಿನ ಚೆಲುವನ್ನು ಕಾಣಲು ಬೇಕಾಗಿರುವುದು ತಾಯಿಯ ಕಣ್ಣು. ತಾಯಿ ತನ್ನ ಕಂದನನ್ನು ವರ್ಣಿಸುವ ಈ ಸೊಬಗಿಗೆ ಮಾರುಹೋಗುತ್ತಾರೆ ರಸಿಕರು.

ತನ್ನ ಕಂದನು ಹಾಲುಬೇಡಿ ಅಳುವನು. ಕೋಲು ಬೇಡಿ ಕುಣಿವನು. ಮೊಸರುಬೇಡಿ ಕೆಸರು ತುಳಿವ ಕಂದನ, ಕುಸಲದ ಗೆಜ್ಜೆ ಕೆಸರಾದರೂ, ತಾಯಿ ಆಡಿ ಬಂದ ಮಗುವಿನ ಅಂಗಾಲು ತೊಳೆಯಲಿಕ್ಕೂ ಸಿದ್ಧಳು. ಒಮ್ಮೊಮ್ಮೆ ಬಿಂದಿಗೆ ಹಾಲು ಸುರಿಯೆಂದೂ, ಸಂಜೆಯ ಚಂದ್ರನನ್ನು ತಂದು ನಿಲ್ಲಿಸೆಂದೂ ಕಿರಿಕಿರಿ ಮಾಡುವ ಕಂದನಿಗೆ ದೃಷ್ಟಿ ತೆಗೆಯುವುದಕ್ಕೆ ಮುತ್ತೇ ಬೇಕು. ಮೋರೆ

ತೊಳೆಯಲಿಕ್ಕೆ ಹಾಲೇಬೇಕು. ನಗುವ ಮಕ್ಕಳನ್ನು ಕಂಡು ನಲಿಯುವುದು ಸುಲಭ. ಆದರೆ ಅಳುವ ಮಗುವಿನಲ್ಲಿಯೂ ಆ ಪಾವಿತ್ರ್ಯತೆಯನ್ನು ಕಾಣುವುದಕ್ಕೆ ತಾಯಿ ಹೃದಯವೇ ಬೇಕು. ಅಳುವ ಕಂದನ ತುಟಿಯು ಹವಳದಂತೆ ಕಾಣಿಸುವುದು. ಕಂದನ ಅಳುವಿನಿಂದಲೂ ಲೋಕ ಪ್ರಯೋಜನವುಂಟೆಂದು ಗರತಿಯು ನಂಬಿದ್ದಾಳೆ.

ಹಾಲಿನ ಹಂಬಲಕ್ಕಿಂತ ಲಾಲಿಯ ಬೆಂಬಲದಿಂದಲೇ ಮಕ್ಕಳು ತಣಿಯುವುವು.

ಲಾಲಿಯ ಹಾಡಿದರೆ ಲಾಲಿಸಿ ಕೇಳ್ಯಾನು
ತಾಯ ಹಂಬಲ ಮರತಾನು ಕಂದಯ್ಯ
ತೋಳ ಬೇಡ್ಯಾನು ತಲೆಗಿಂಬ

ಹಾಲು ಹಸಿವೆಯನ್ನು ಮಾತ್ರ ಹಿಂಗಿಸಬಲ್ಲದು. ಆದರೆ ಲಾಲಿ ಬೇಸರ ಕಸಿವಿಸಿಗಳನ್ನೂ ಹೋಗಲಾಡಿಸಬಲ್ಲದು. ಲಾಲಿ ಇದ್ದರೆ ಕಂದಯ್ಯನು ತಾಯ ಹಂಬಲವನ್ನು ಮರೆಯುವನು. ಲಾಲಿ ತಾಯಿಯ ಎದೆಯೊಳಗಿನ ಹಿಗ್ಗಿನ ಬುಗ್ಗೆ. ಕಂದನ ಅಳು ಸಹ ಹಾಡಿನ ಹಿಗ್ಗಿನಲ್ಲಿ ಕೊಚ್ಚಿಹೋಗಿ ನಿದ್ರೆಹೋಗಿ, ಮಲಗುವನು.

ಗರತಿಗೆ ಮನೆಯಲ್ಲಿ ಸಕಲೈಶ್ವರ್ಯ ಇದ್ದರೂ ತನ್ನ ಮಗನಿಲ್ಲದಿದ್ದರೆ ಬೇಸರ. ತನಗೆ ಬೇಸರವಾದಾಗ ಮನಃಪೂರ್ವಕವಾಗಿ ಹಾಡಿದ ಲಾಲಿಯ ಪದವೆಂದರೆ,

ಅಸರಕೆ ಬ್ಯಾಸರಕೆ ಯಾರಿಂದ ಕಳೆಯಲಿ
ಕೂಸು ಕಂದಯ್ಯ ತೊಡೆಮೇಲೆ ಆಡಿದರೆ
ಬಂದ ಬ್ಯಾಸರಕೆ ಬಯಲಾದೊ

ಎಂಬುದು. ಮನೆಗೆಲಸ ಎಷ್ಟೇ ಇರಲಿ ಮಕ್ಕಳ ಬಳಗ ತುಂಬಿರಲೆಂದು ಅವಳ ಹಾರೈಕೆ. ಮಗುವನ್ನು ಕಂಡು ಪತಿಯನ್ನು ಮರೆಯಬಲ್ಲಳು ಗರತಿ.

ತಾಯಿಗೆ ಮಗುವಿನಿಂದಲೇ ಸ್ವರ್ಗ ಸೌಖ್ಯ. ಕೂಸು ನಕ್ಕರೆ ಸಂತೋಷದಿಂದ ಹೃದಯ ತುಂಬಿಬರುವುದು. ಅತ್ತರೆ ಮನದಲ್ಲಿ ಕಸವಿಸಿ ಪಡುವಳು.

ನನ ಕಂದ ಮುದ್ದು ಹೊನ್ನ ತಾವರೆ ಮುದ್ದು
ಹಣ್ಣಳ್ಳ ಗಿಡಕೆ ಗಿಣಿ ಮುದ್ದು, ಕಂದವ್ವ
ನೀ ಮುದ್ದು ನನ್ನ ಬಳಗಕ್ಕೆ

ತಾವರೆಯ ಸೊಬಗು ಶ್ರೇಷ್ಠವಾದುದು. ಅದರಲ್ಲೂ ಚಿನ್ನದ ತಾವರೆ ಮುದ್ದಾ

ಗಿಯೇ ಇರಬೇಕಲ್ಲವೆ ? ಗರತಿಗೆ, ಗರತಿಯ ಬಳಗಕ್ಕೆ ಆ ಮಗುವೂ ತಾವರೆ ಯಷ್ಟು ಮುದ್ದಾಗಿ ಕಂಡಿರಬೇಕು. ಅವಳ ವಾತ್ಸಲ್ಯವೇ ಅದಕ್ಕೆ ಕಾರಣ. ಆಳುತ್ತಿರುವ ಹಕ್ಕಿಯೂ ಕೂಡ ಮಗುವಿನ ಸೌಂದರ್ಯಕ್ಕೆ ತಲೆಬಾಗಿ ನಗುತ್ತಿ ತ್ತಂತೆ. ಮಗುವಿನ ಬಗೆಗೆ ಅವಳಿಗಿರುವ ಮಮತೆಯೇ ಆ ರೀತಿ ಅವಳಿಂದ ಮಾತನಾಡಿಸುತ್ತದೆ. ತನ್ನ ಮಗು ಅತ್ತರೆ ಮುತ್ತು ಉದುರುವುದೆಂದೂ, ಭಾವ ಎತ್ತಿಕೊಳ್ಳಿರೆಂದೂ ಹೇಳುತ್ತಾಳೆ. ಎಲ್ಲರ ಕೈಯಲ್ಲಿ ಅರಗಿಳಿಯಂತೆ ಆಡುತ್ತ ಬೆಳೆಯುತ್ತಿರುವ ಮಗು ಕುಳಿತುಕೊಳ್ಳುವುದನ್ನು ಕಂಡಾಗ ತಾಯಿಗೆ ಹೆಚ್ಚಿನ ಆಸೆ ಮೂಡುತ್ತದೆ.

ಜನಪದರು ಬಾಲಲೀಲೆಯ ವಿವಿಧ ವಿನ್ಯಾಸಗಳನ್ನು ಹೃದಯಂಗಮವಾಗಿ ಹಿಡಿದಿಟ್ಟಿದ್ದಾರೆ. ಒಬ್ಬಳು ತಾಯಿ ತನ್ನ ಮಗನನ್ನು ಕುರಿತು ಈ ರೀತಿ ಹೇಳಿದ್ದಾಳೆ.

ಬಾಲ ಹನುಮನ ಮುಂದೆ ಬಾಗಿ ಚೆಂಡಾಡ್ಯಾನು
ಬಾವೊಲಿ ಕಿವಿಯ ನನ ಬಾಲ ಕಂಡರೆ
ಬಾಲೇರು ಬಸರು ಬಯಸ್ಯಾರು

ಅವನ ಚೆಲುವನ್ನು ಕಂಡರೆ ಇಂತಹ ಮಗು ಬೇಕು ಎಂದು ಯಾವ ಹೆಣ್ಣು ಮಗಳಿಗಾದರೂ ಆಸೆ ಆದೀತು ! ಕೂಸೆಂದರೆ ಆಕೆಗೆ ತೊಟ್ಟಿಲೊಳಗಿನ ತೊಳೆದ ಮುತ್ತು. ಆ ಮಗುವಿನ ಆಟ ನವಿಲಿಗಿಂತ ಮಿಗಿಲು. ಅಂಥಹ ಬಾಲಕನನ್ನು ಕಂಡರೆ ಬಾಲೆಯರು ಬಸಿರು ಬಯಸುವರು. "ಬಾಲ್ಯಾರು ಬಸಿರು ಬಯಸ್ಯಾರು" ಎಂಬ ಒಂದು ಮಾತಿನಲ್ಲಿ ಆ ಮಗುವಿನ ಅಂದಚೆಂದ ಆಕರ್ಷಣೆಗಳೆಲ್ಲಾ ಧ್ವನಿತವಾಗುತ್ತದೆ.

ಹಾಲ ಬೇಡತ್ತಾನು ಕೋಲು ಬೇಡಿಕುಣಿದಾನು
ಮೊಸರ ಬೇಡಿ ಕೆಸರು ತುಳಿದಾನು ಕಂದಯ್ಯನ
ಕುಸಲದ ಗೆಜ್ಜೆ ಕೆಸರಾಯ್ತೋ

ಮಗುವಿಗೆ ಇಂಥದು ಬೇಕು, ಇಂಥದು ಬೇಡ ಎಂಬ ವಿವೇಚನೆ ಇರುವುದಿಲ್ಲ. ಹಾಲು ಕೋಲು ಎಲ್ಲ ಅವನಿಗೆ ಬೇಕು. ಮೊಸರ ಬೇಡಿ ಕೆಸರ ತುಳಿದಾನು ಎಂಬುದಂತೂ ತುಂಬಾ ಸುಂದರವಾದ ಉಕ್ತಿ. ಮಗು ಹಟದಿಂದ ಅತ್ತು ಅತ್ತು ಕಂಬನಿಯಿಂದ ನಿಂತನೆಲ ಕೆಸರಾಗಿಹೋಗಿದೆ ಎಂಬ ಧ್ವನಿಯಿಂದ ಅವನ ಚಲ ಚಂಡಿತನಗಳ ಆಧಿಕ್ಯವನ್ನು ಮನಗಾಣುತ್ತೇವೆ.

ಜನಪದ ಗರತಿಯು ತನ್ನ ಮಗನನ್ನು ಕುರಿತು ಲಾಲಿಯ ಪದಗಳಲ್ಲಿ ಎಷ್ಟು ವರ್ಣಿಸಿದರೂ ಅವಳಿಗೆ ತೃಪ್ತಿಯಾಗದು ಪ್ರತಿಯೊಂದು ತ್ರಿಪದಿಯಲ್ಲೂ ಗರತಿಯು ಕೊಡುವ ಉಪಮೆ, ಸೌಮ್ಯಗಳನ್ನು ಗಮನಿಸಿದಾಗ ತನ್ನ ಕಂದನನ್ನು ವರ್ಣಿಸಲು ಅವಳಿಗೆ ಅಸಾಧ್ಯವೆನಿಸುತ್ತದೆ. ತನ್ನ ಕಂದನ ಹಟ ಮಾರಿತನಕ್ಕೆ ವೀರಭದ್ರನ ಅವತಾರವೆನ್ನುವಳು. ನಾರಾಯಣನ ಮುಂದೆ ಮಗ ಬಂದರೆ "ಗಾಳಿದೇವರ ಕೂಡ ಗೂಳಿ ದೇವರ ಬಂದಂತೆ" ಕಾಣುವಳು. ಸಾರಿಸಿಟ್ಟ ಮನೆಯಲ್ಲಿ ಮಕ್ಕಳು ನೀರು ಚೆಲ್ಲಾಡಿದರೆ ಗಿಳಿ ಪಾರಿವಾಳಗಳು ಆಡಿದಂತೆ ಹಿಗ್ಗು. ಒಣ್ಯಾಗ ಅವತಾರಿ, ಮನೆಯಾಗ ರಪಿಗೇಡಿ, ಅಡುಹೋದಲ್ಲಿ ಕಿಡಿಗೇಡಿ—ಇಂಥವನನ್ನು ಅಳವಿನಲ್ಲಿ ಇರಿಸಿಕೊಳ್ಳುವುದೇ ಚೆರ. ಇಂಥ ಮಗು ಪಿದ್ದರೂ ಹಡೆದವಳಿಗೆ ಸುಖಕೊಡದೆ ಇರುವುದಿಲ್ಲ. ಚಿತ್ರನ ಸುಳಿದಾಟ ತಂಗಾಳಿಯ ತೀಟ.

ಕೂಸು ಇದ್ದ ಮನಿಗೆ ಬೀಸಣಿಗೆ ಯಾತಕೆ
ಕೂಸು ಕಂದಮ್ಮ ಒಳಹೊರಗೆ ಆಡಿದರೆ
ಬೀಸಣಿಗೆ ಗಾಳಿ ಸುಳಿದಾವು

ಬಯಕೆ ಬಸಿರುಗಳನ್ನು ತಾಳಿಕೊಂಡು, ಪ್ರಸವ ವೇದನೆಯನ್ನು ಸಹಿಸಿ ಮಗುವಿನ ಅಳು-ನಗುಗಳೆರಡರಲ್ಲಿಯೂ ಸುಖವನ್ನು ಕಾಣುತ್ತ ಅವ್ಯಕ್ತ ಲೋಕದೊಳಗಿನ ಒಂದು ಜೀವಕ್ಕೆ ಮೈಕೊಟ್ಟವಳು ತಾಯಿ. ಕೈಯೆತ್ತಿ ಕೊಟ್ಟ ವ್ಯಕ್ತಿ ದಾನವಲ್ಲವೇ ಅದು ? ಅದೆಷ್ಟು ಸುಲಭವೋ ದುರ್ಲಭವೋ ? ಸಹಜವೋ ಅಸಹಜವೋ ನಿರ್ಣಯಿಸುವುದು ಕಠಿಣ. ಆದರೆ ಕೃತಜ್ಞತೆಯೇ ಮಾನವನಿಗೆ ಅಳತೆಗೋಲಾಗಿರುವುದರಿಂದ ಆ ದೃಷ್ಟಿಯಿಂದ ತಾಯಿಯಾದ ಗರತಿಯ ಈ ದಾನವು ದಿವ್ಯದಾನವೇ ಅಹುದು. ಗರತಿಗೆ ಪ್ರಸವ ವೇದನೆ ಕ್ಷಣಿಕ ವೇದನೆ-ಆಗ ಹೇಳುವ ಮಾತೆಂದರೆ—

ತೊಟ್ಟಿಲೊಳಗೊಂದು ಹೊಳೆವ ಮುತ್ತನು ಕಂಡೆ
ಹೊಟ್ಟೆ ಮೇಲಾಗಿ ಮಲಗವನೆ ಕಂದಯ್ಯಗೆ
ಮುತ್ತಿನ ದೃಷ್ಟಿ ಇಳಿಸೇನು

ತನ್ನ ವಾಸ್ತವ ಅನುಭವವನ್ನು ಜನಪದ ಭಾಷೆಯಲ್ಲಿ ಹೇಳಿದ್ದಾಳೆ. ಅದನ್ನೇ ನೇರವಾಗಿ ಶಿಷ್ಟ ಭಾಷೆಯಲ್ಲಿ ಹೇಳಲಾಗುವುದಿಲ್ಲ. ಅದೇ ತಾನೇ ಎಣ್ಣೆ ಹಚ್ಚಿ ಅಭ್ಯಂಗ ಸ್ನಾನ ಮಾಡಿಸಿದ ಮಗು ಮುತ್ತಿನಂತೆ ಹೊಳೆಯುತ್ತದೆ. ಆ ಮಗು

ತಾಯಿಗೆ ತೋಳಿದ ಮುತ್ತಾಗಿ ತೋರುತ್ತದೆ. ಇಂತಹ ಲಾಲಿಯ ಪದಗಳನ್ನು ಕೇಳುತ್ತ ಇದ್ದರೆ ಕಾಲ ಹೋದದ್ದೇ ತಿಳಿಯುವುದಿಲ್ಲ

ಲಾಲಿಯ ಪದಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದು ಅಂಶವೆಂದರೆ ಲಾಲಿಯ ಪದಗಳ ಗುಂಪಿನಲ್ಲಿ ಮಕ್ಕಳಿಗೆ ಮೀಸಲಾದ ಹಾಡುಗಳನ್ನು ಮಾತ್ರ ಸೇರಿಸಿಕೊಂಡು ಮಕ್ಕಳನ್ನು ತೂಗುವಾಗ ದೊಡ್ಡವರು ಹಾಡುವ ಪದಗಳನ್ನು ಮಾತ್ರ ಪ್ರತ್ಯಕ್ಷವಾಗಿ ಪರಿಗಣಿಸಬೇಕಾಗುತ್ತದೆ.

ಮಕ್ಕಳು ಅಳುತ್ತಿರುವಾಗ ತಾಯಿಯು ಸಮಾಧಾನ ಮಾಡುತ್ತಾಳೆ. ತನ್ನ ಎದೆ ಹಾಲನ್ನು ನೀಡುತ್ತಾ "ಅಳ್ಳುಳ್ಳಾಯಿ" ಎಂದು ಬೆನ್ನುತಟ್ಟುತ್ತಾಳೆ. ಆದರೂ ಅಳು ನಿಲ್ಲಿಸದಿದ್ದಾಗ

ದೂರಿ ದೂರಿ ದೂರಿ ಆಡಪ್ಪ
ದೂರಿ ದೂರಿ ದೂರಿ ಕೇಳಪ್ಪ
ದೂರಿ ದೂರಿ ದೂರಿ ನಿನ್ನ ಕಣ್ಣು ಕಾಮಣ್ಣ
ದೂರಿ ದೂರಿ ನಿನ್ನ ಮೂಗು ಮಲ್ಲಹೂ
ದೂರಿ ದೂರಿ ನಿನ್ನ ತುಟಿ ತೊಂಡೆ ಹಣ್ಣು
ದೂರಿ ದೂರಿ ನಿನ್ನ ಹಲ್ಲು ಪಲ್ಲಕ್ಕಿ
ದೂರಿ ದೂರಿ ನಿನ್ನ ಹಲ್ಲು ನಾರಾಯಣ
ದೂರಿ ದೂರಿ ನಿನ್ನ ಅಂಗಲು ತಿಂಗಳಮಾವ
ದೂರಿ ದೂರಿ ನಿನ್ನ ತೋಳು ಬಾಳೆಕಂಬ
ದೂರಿ ದೂರಿ ನಿನ್ನ ಬೆನ್ನು ಭೀಮಣ್ಣ
ದೂರಿ ದೂರಿ ನಿನ್ನ ಹೊಟ್ಟೆ ಪುಟ್ಟಣ್ಣ


ಮುಂತಾಗಿ ಹಾಡುವ ಈ ತಾಯಿ ಮಗುವಿನ ರೂಪು ಲಾವಣ್ಯ ಅಂಗಸೌಷ್ಠವ ಗಳನ್ನು ವರ್ಣಿಸುವಲ್ಲಿ ಯಾವ ಕವಿಗೂ ಹಿಂದೆ ಬಿದ್ದಿಲ್ಲ.

ಹೆಣ್ಣುಮಕ್ಕಳಿಗೆ ಮಕ್ಕಳೆಂದರೆ ಸಾಕು ಬಲುಮುದ್ದು. ನಮ್ಮ ಮಕ್ಕಳು, ನಿಮ್ಮ ಮಕ್ಕಳು ಎಂಬ ಭೇದಭಾವನೆಯೇ ಅವರಿಗೆ ಉಂಟಾಗುವುದಿಲ್ಲ. ಗರತಿಗೆ ಮಕ್ಕಳ ಆಟಪಾಟ, ಮಾತುಕಥೆ, ನಡೆನುಡಿ ಎಂದರೆ ಬಲು ಹಿಗ್ಗು. ಮಕ್ಕಳಿಗಾಗಿ ಹಾಡುವಾಗ ಮಕ್ಕಳಿಗೆ ಆ ಹಾಡಿನ ಮಾತು ತಿಳಿಯಲಿ ಬಿಡಲಿ, ತನ್ನ ದುಃಖವನ್ನು ನುಂಗಿಕೊಂಡು ತನ್ನ ಸುಖವನ್ನೇ ನೆನೆದು ಹಾಡುವಳು. ಸಹಜ ಶೈಲಿ ಸರಳತೆ ಮುಗ್ಧತೆಯು ಲಾಲಿಯ ಪದಗಳಲ್ಲಿ ಎದ್ದು ಕಾಣುತ್ತವೆ. ಆದರೆ ಲಾಲಿಯ ಪದಗಳಲ್ಲಿ ಒಂದೇ ದನಿಯ ಲಾಲಿತ್ಯ ಅದರ ವೈಶಿಷ್ಟ್ಯ. ಉಳಿದ ಭಾಗಗಳಲ್ಲೆಲ್ಲ ಒಂದು ರೀತಿಯಲ್ಲಿ ಸಾಮೂಹಿಕ ಗೀತೆಗಳು. ಹಿಮ್ಮೇಳ, ಮುಮ್ಮೇಳ

ಗಳು ಅಲ್ಲಿ ಅಗತ್ಯ, ಇಲ್ಲಿ ಅನಗತ್ಯ. ಲಾಲಿಯ ಪದದಲ್ಲಿ ಹೆಣ್ಣಿನ ಅಂತರಂಗದ ರಾಗಭಾವನೆಗಳೆಲ್ಲ ಹಾಡಿನ ರೂಪದಲ್ಲಿ ಅಭಿವ್ಯಕ್ತಿಯನ್ನು ಪಡೆದು ಆಕೆಯ ಜೀವನ ದೃಷ್ಟಿಗೆ ಹಿಡಿದ ಕನ್ನಡಿಯಾಗಿವೆ.

ಗರತಿಯು ತನ್ನ ಜೀವನದ ಅದ್ಭುತ ರಸಾಯನದಲ್ಲಿ ಸಿದ್ಧಿ ಪಡೆದು, ಅನುಭವ ಸಿದ್ಧವಾದ ವಾಣಿಯಲ್ಲಿ ನುಡಿದು, ತನ್ನ ಹೃದಯದ ಹಾಡುಗಳನ್ನು ಹಿಗ್ಗಿನಿಂದ ಹಾಡಿ ಜಗತ್ತಿಗೆ ಲಾಲಿಯ ಪದಗಳನ್ನು ಚಿತ್ರಿಸಿದ್ದಾಳೆ.

ನಗುವನಹಳ್ಳಿ ಟಿ. ರತ್ನ



ನೈತಿಕ ದೃಷ್ಟಿಯಿಂದ ತಪ್ಪಾಗುವಂಥ ಯಾವುದೇ ಆಗಲಿ, ರಾಜಕೀಯ ದೃಷ್ಟಿಯಿಂದ ಒಳ್ಳ ಆಗಲರಿಯದು.

—ಡೇನಿಯಲ್ ಓ, ಕಾನೆಲ್

ಭಾರತದಲ್ಲಿ ಬಡತನ ಮತ್ತು ಸಂಕಷ್ಟಗಳು ಜನತೆಯ ಒಡನಾಡಿಗಳಾಗಿವೆ. ಆದರೂ ನಮ್ಮ ಜನ ಆಶಾವಾದಿಗಳಾಗಿ ಸಂತೋಷದಿಂದಿದ್ದಾರೆ.

—ಜವಹರಲಾಲ ನೆಹರು

ಮನುಷ್ಯನ ಅನೇಕ ಆಸೆಗಳಲ್ಲಿ ಅಧಿಕಾರಾಕಾಂಕ್ಷೆ, ಯಶೋಭಿಲಾಷೆ ಮುಖ್ಯವಾದವು.

—ಬರ್ಟ್ರಾಂಡ್ ರಸೆಲ್

ಯೋಗ್ಯತಾವಂತ ಸ್ನೇಹಿತನಿಗೆ ಸಹಾಯ ಮಾಡಲು ಅವಕಾಶ ದೊರೆಯುವುದು ಒಂದು ಸುಖದ ಪ್ರಸಂಗ

—ಚಾರನ್

ಊನ

೧

ಮನೆ ಬಿಟ್ಟು ಹೋಗಿ ಮೂವತ್ತು ವರ್ಷಗಳು ಎಲ್ಲೆಲ್ಲೋ ಅಲೆದು ಸುತ್ತಿ ಹಿಂತಿರುಗಿದ ಶಂಕರನ್ ಅವರನ್ನು ಮಾಂಗುಡಿಯಲ್ಲಿ ಅವರ ಮನೆಯಲ್ಲಿ ಸ್ವಾಗತಿಸಿದ್ದು ಕಾಲಿಲ್ಲದ ಶೋಕವೇ ಮೂರ್ತಿವೆತ್ತಂತಿದ್ದ ಒಂದು ವ್ಯಕ್ತಿ. ಜೀವನದಲ್ಲಿ ಎಷ್ಟೋ ಕಷ್ಟಗಳನ್ನು ಧೈರ್ಯದಿಂದ ಎದುರುಗೊಂಡಿದ್ದ ಅವರಿಗೆ ಈ ದೃಶ್ಯದಿಂದ ದಿಗ್ಭ್ರಮೆಯುಂಟಾಯಿತು.

"ಯಾರು ಈ ಹುಡುಗ?"

ಅವರು ಆ ಹುಡುಗನನ್ನು ಗಮನಿಸಿ ನೋಡಿದರು. ವಯಸ್ಸು ಹತ್ತು ಹನ್ನೆರಡು ಇರಬಹುದು. ಲೋಹವನ್ನು ಕಾಸಿ ತಟ್ಟಿ ನೀಳವಾಗಿ ಮಾಡಿಟ್ಟಂತಿದ್ದ ತಲೆ. ಪ್ರಪಂಚವನ್ನು ಪರಿಪೂರ್ಣವಾಗಿ ನೋಡಬೇಕೆಂಬ ಆಸೆಯಿಂದ ಮುಖಕ್ಕಿಂತ ಹೊರಗೆ ಬಂದಿದ್ದ ಗುಂಡಾದ ದೊಡ್ಡ ಕಣ್ಣುಗಳು ಅವಕ್ಕೆ ಈಡು ಕೊಡುವಂತೆ ಮುಖದೊಳಗೆ ಅಡಗಿದ್ದ ಚಿಕ್ಕ ಮೂಗು. ಪ್ರಕೃತಿ ಮಾಡಿದ್ದ ಈ ಅನ್ಯಾಯವನ್ನು ನಿತ್ಯವೂ ಕಿವಿಯ ಬಳಿ ಹೇಳಿ ಅಳಬೇಕೆಂದು ಕಿವಿಯವರೆಗೂ ನೀಡಿದ್ದ ದೊಡ್ಡ ಬಾಯಿ ನಾಲ್ಕು ಅಡಿ ಎತ್ತರ ಬೆನ್ನು ಗೂನಾಗಿ, ದಿಗಂತವನ್ನು ನೋಡುತ್ತಾ ಕುಳಿತಿದ್ದ ಆ ಹುಡುಗನ ನೋಟ!....

ನಡುರಾತ್ರಿಯಲ್ಲಿ ನಿಶ್ಯಬ್ದವಾದ ವೇಳೆಯಲ್ಲಿ, ಪ್ರಪಂಚವೆಲ್ಲಾ ನಿದ್ರಿಸುತ್ತಿರುವಾಗ, ಒಂದು ಮಗು ಎಡಬಿಡದೆ ಒಂದೇ ವಿಧವಾದ ಧ್ವನಿಯಲ್ಲಿ ಅಳುತ್ತಿರುವಂತೆ ಒಂದು ಭ್ರಮೆ ಅವರ ಮನಸ್ಸಿನಲ್ಲಿ ಯಾವಾಗಲೂ ಉದಯಿಸುತ್ತಿತ್ತು. ಆ ಮಗುವೇ ಈಗ ಪ್ರತ್ಯಕ್ಷವಾಗಿ ಎದುರಿಗೆ ನೋಡುತ್ತಿದ್ದರೋ!........

"ಯಾರು ನೀನು?" ನಿಧಾನವಾಗಿ, ಆದರೆ ದೃಢವಾಗಿ ಆ ಹುಡುಗನ ಬಾಯಿಂದ ಹೊರಬಂತು ಮಾತುಗಳು.

ಶಂಕರರಿಗೆ ಹೇಗೆ ತಮ್ಮ ಪರಿಚಯವನ್ನು ಈ ಹುಡುಗನಿಗೆ ಮಾಡಿಕೊಡುವುದೆಂದು ಗೊತ್ತಾಗಲಿಲ್ಲ. ತಮ್ಮ ತಮ್ಮನ ಕುಟುಂಬ ಇನ್ನೂ ಈ ಮನೆಯಲ್ಲಿ ವಾಸವಾಗಿದೆಯೆಂದು ನಂಬುವುದು ಹೇಗೆ? ಈ ಹುಡುಗನನ್ನು ನೋಡಿದ ಮೇಲೆ, ಹಾಗೆ ಇರಬಾರದೆಂದು ತಮ್ಮ ಮನಸ್ಸಿನಲ್ಲಿ ತೋರಿದ ಆಸೆಯೊ?.... ಹಾಗೆ ವಾಸವಾಗಿದ್ದರೆ ಈ ಹುಡುಗ....? ಅವರ ಮನಸ್ಸಿನಲ್ಲಿ ಅವ್ಯಕ್ತವಾದ

ತಮಿಳು ಮೂಲ : ಇಂದಿರಾ ಪಾರ್ಥಸಾರಥಿ
ಅನುವಾದ : ಮಂದಾಕಿನಿರಾವ್

ನಿರಾಶೆಯೊಂದು ಕತ್ತಲಾಗಿ ಹರಡಿತು. ಏನು ಹೇಳಲೂ ತೋಚದವರಂತೆ ಶಿಲೆಯಾಗಿ ನಿಂತರು.

"ಮೀನಾ, ಇಲ್ಲಿ ಯಾರೊ ಬಂದಿದ್ದಾರೆ ನೋಡು ; ಯಾರೆಂದು ಕೇಳಿಯೂ ಉತ್ತರ ಬಾರದಿದ್ದುದರಿಂದ ಅದಕ್ಕಿಂತಲೂ ಹೆಚ್ಚಾಗಿ ಅವರ ಜವಾಬ್ದಾರಿಯನ್ನು ಹೊರಲು ತಯಾರಿಲ್ಲನೆಂದು ತೋರುತ್ತದೆ ?

ಹಾಗೆಯೇ ಹಿಂತಿರುಗಿಬಿಡೋಣವೆಂದು ಅವರ ಮನಸ್ಸಿನಲ್ಲಿ ತೋರಿತು. ಅವರು ಅಗಲಿದ ಮೂವತ್ತು ವರ್ಷಗಳಲ್ಲಿ ನಡೆದಿರಬಹುದಾದ ಅನೇಕ ಘಟನೆಗಳು ಅನೇಕ ರೂಪದಲ್ಲಿ ಅವರಿಗಾಗಿ ಕಾದಿವೆ ಎನ್ನುವ ಭಾವನೆ ಅವರಿಗೆ ಕಸಿವಿಸಿಯನ್ನುಂಟುಮಾಡಿತು.

"ಯಾರು ಬೇಕೆಂದು ಕೇಳುತ್ತಿದ್ದೇನೆ, ಮಾತಾಡದೆ ನಿಂತಿದ್ದೀರಲ್ಲ ? ನೀನು ಯಾರು ?"

ಇಹವನ್ನು ಮರೆತು ತಮ್ಮ ಮನ ಹೋದ ದಿಕ್ಕಿನಲ್ಲಿ ಮುಳುಗಿದ್ದ ಶಂಕರನನ್ನು ಆ ಧ್ವನಿಯಲ್ಲಿದ್ದ ಅಧಿಕಾರ ಈ ಪ್ರಪಂಚಕ್ಕೆ ಎಳೆದು ತಂದಿತು. ಎಂಟು ವರ್ಷದ ಹುಡುಗಿಯೊಂದು ಸೊಂಟದಲ್ಲಿ ಕೈಯಿರಿಸಿಕೊಂಡು ನಿಂತಿದ್ದಳು.

"ಅಪ್ಪ ಇದ್ದಾರಾ ?"

"ಪೂಜೆ ಮಾಡುತ್ತಿದ್ದಾರೆ... ನೀನು ಯಾರು ?"

ಅಧಿಕಾರದಿಂದ ಒಳಗೆ ನುಗ್ಗಿಬಿಡಲಾ ? ಆದರೆ ಇದು ತಮ್ಮನ ಮನೆ ಆಗಿಲ್ಲದಿದ್ದರೆ ?

"ಗಣೇಶನ ಮನೆ ಇದೇ ತಾನೆ ?"

"ಹೌದು...." ಅವಳಿಗೆ ಬೇಜಾರಾಯಿತೆಂದು ಕಾಣುತ್ತದೆ. ಅವಳ ಧ್ವನಿಯಲ್ಲಿ ಅಸಹನೆ ತುಂಬಿತ್ತು.

ತನ್ನನ್ನು ದೊಡ್ಡಪ್ಪ ಎಂದು ಪರಿಚಯ ಮಾಡಿಕೊಳ್ಳಲಾ ? ಆದರೆ ಗಣೇಶನು ತನ್ನ ವಿಚಾರವಾಗಿ ಏನೂ ಹೇಳಿರದಿದ್ದರೆ ?.... ಅವರ ಮನಸ್ಸು ತಳಮಳಿಸಿತು.

"ಯಾರು ಮಾವ ನೀನು....? ಏನೂ ಹೇಳದೇನೆ ನಿಂತಿದ್ದೀರಲ್ಲ ?"

"ನೀನೇ ಮೀನಾನಾ ?.... ನಾನೇ ನಿನ್ನ ದೊಡ್ಡಪ್ಪ !...."

ದೊಡ್ಡಪ್ಪ ಎಂದು ಅವರು ಹೇಳಿದ ಮೇಲೆ ಮೀನಾ ಆಶ್ಚರ್ಯದಿಂದ ಬಾಯಿ ತೆರೆದು ಕೈಗಳಿಂದ ಒತ್ತಿಕೊಂಡಳು. ಆಕಾಶದಲ್ಲಿ ಬೇರೆಯವರಿಗೆ ಅರ್ಥವಾಗದ ರಹಸ್ಯವನ್ನೆಲ್ಲಾ ಕಂಡು ಅದರಲ್ಲೇ ಲೀನವಾಗುವವನಂತೆ ನೋಡುತ್ತಿದ್ದ ಅ

ಹುಡುಗನೂ ಒಂದು ಕ್ಷಣ ಅವನ ನೋಟವನ್ನು ಅದರ ಮೇಲೆ ತಿರುಗಿಸಿದ.

ಮೀನ ಅವರನ್ನು ಓರೆಗಣ್ಣಿನಿಂದ ನೋಡುತ್ತಾ, ಮಂದಹಾಸ ಬೀರಿ, ಬಗ್ಗಿ ಅವನ ಕಿವಿಯಲ್ಲಿ ಹೇಳಿದಳು. "ಬಾಬು, ದೊಡ್ಡಪ್ಪ ಕಣೊ ದೊಡ್ಡಪ್ಪ!?...." ಹೀಗೆ ಹೇಳಿ ಅವಳು ಒಳಗೆ ಓಡಿಬಿಟ್ಟಳು.

ಈ ಹುಡುಗ ಹೊರಗಡೆ ಇರುವಾಗ, ಒಳಗೆ ಹೇಗೆ ಹೋಗುವುದೆಂದು ಶಂಕರನಿಗೆ ಪ್ರಶ್ನೆಯಾಗಿತ್ತು. ಅವರು ಅವನ ಪಕ್ಕದಲ್ಲಿ ಕುಳಿತುಕೊಂಡರು. ಗಣೇಶನಿಗೆ ಹೀಗೆ ಒಬ್ಬ ಮಗ ಹುಟ್ಟಬೇಕಿತ್ತಾ?.... ಆದರೆ ಹುಟ್ಟಾಯಿತು. ಇದೊಂದು ಪ್ರತ್ಯೇಕ ಜೀವ. ತಮ್ಮನ ಮೇಲೆ ಅನುತಾಪಪಡುವುದು ವಿವೇಕವಲ್ಲ.

"ನೀವು ಚಿಕ್ಕವಯಸ್ಸಿನಲ್ಲಿ ಓಡಿಹೋಗಿಬಿಟ್ಟಿರಾ?" ಮಾತುಗಳನ್ನು ತಡವರಿಸದೆ ನೇರವಾಗಿ ಕೇಳಿಬಿಟ್ಟ ಬಾಬು.

"ಹೌದು....ಆಗ ಓಡಿಹೋದವನು, ಮೂವತ್ತು ವರ್ಷಗಳವರೆಗೂ ಓಡುತ್ತಲೇ ಇದ್ದೆ...." ಎಂದು ನಗುತ್ತಾ ಉತ್ತರಿಸಿದರು ಅವರು.

"ಕಾಲು ನೋವಾಗಲಿಲ್ಲ?"

"ನೋವಾಯಿತು ...ಆದ್ದರಿಂದಲೇ ತಿರುಗಿ ಬಂದುಬಿಟ್ಟೆ"

"ನೀವು ಯಾಕೆ ಓಡಿಹೋದಿರಿ?"

ಇದಕ್ಕೆ ಹೇಗೆ ಉತ್ತರಿಸುವುದೆಂದು ಅವರಿಗೆ ಹೊಳೆಯಲಿಲ್ಲ. ಅಷ್ಟರಲ್ಲಿ ಮೀನಾ ತನ್ನ ತಾಯಿಯನ್ನು ಕರೆದುಕೊಂಡು ಬಂದಳು.

"ಬನ್ನಿ, ಬನ್ನಿ, ಏನು ಇಲ್ಲೇ ಬಾಗಿಲಲ್ಲೇ ಕುಳಿತುಬಿಟ್ಟಿರಲ್ಲಾ?....ಒಳಗೆ ಬನ್ನಿ. ಅವರು ಪೂಜೆಯಲ್ಲಿದ್ದಾರೆ...."

ಅವರು ತಮ್ಮ ತಮ್ಮನ ಹೆಂಡತಿಯನ್ನು ನೋಡಿದರು ಬಿಳುಪಾಗಿ, ಒಳ್ಳೇ ಲಕ್ಷಣವಾದ ಮುಖ. ಅದಕ್ಕೆ ದುಂಡುಕುಂಕುಮದಿಂದ ಇನ್ನೂ ಶೋಭೆ ತುಂಬಿತ್ತು. ತಮ್ಮನೂ ರೂಪದಲ್ಲಿ ಕಮ್ಮಿಯಿರಲಿಲ್ಲ ತನಗಿಂತಲೂ ಬಿಳಿ. ಕೆತ್ತಿಟ್ಟಂತಿದ್ದ ಮೂಗು. ರೂಪದಲ್ಲಿ ಅಮ್ಮನನ್ನು ಹೋಲುತ್ತಾನೆಂದು ಆ ಕಾಲದಲ್ಲಿ ಹೇಳುತ್ತಿದ್ದರು. ಮನುಷ್ಯ ಜನ್ಮದ ಅಂಕುಡೊಂಕಾಗಿ ವಿಚಿತ್ರವಾಗಿ ಹುಟ್ಟಿರುವ ಬಾಬು. ಈ ರೂಪ ಸಂಗೀತಕ್ಕೆ ಮಾಡಿದ ಶೋಕಭಾವ ಅನಂತ.

ತಾಯಿ ಸೌಂದರ್ಯದಲ್ಲಿ ಪಾಲುಪಡೆದು ಅವಳ ಸೆರಗನ್ನು ಹಿಡಿದುಕೊಂಡು ನಿಂತಳು ಮೀನಾ.

"ಬಾಬು, ಒಳಗೆ ಬರ್ತೀಯಾ?" ಎಂದು ಕೇಳಿದರು ಶಂಕರನ್.

ಅವನು ಹೇಗೆ ಒಳಗೆ ಬರುತ್ತಾನೆ, ಅವನನ್ನು ಎತ್ತಿಕೊಂಡು ಹೋಗಬೇಕಾ, ಅಥವಾ ನಡೆಸಿಕೊಂಡು ಹೋಗಬೇಕಾ ಎಂದು ಅವರಿಗೆ ಗೊತ್ತಾಗಲಿಲ್ಲ.

"ಅವನು ಇಲ್ಲೇ ಹೊರಗಡೆ ನೋಡ್ತಾ ಇರ್ತಾನೆ" ಎಂದು ಉತ್ತರಿಸಿದರು ಅವನ ತಾಯಿ.

ಬಾಬು ತನ್ನ ತಾಯಿಯನ್ನು ನೋಡಿದ ತುಂಬ ದಿನಗಳ ನಂತರ ಬಂದಿದ್ದ ತನ್ನ ದೊಡ್ಡಪ್ಪನ ಜೊತೆ ಎಲ್ಲರೂ ಸಂತೋಷದಲ್ಲಿ ಭಾಗಿಯಾಗುವಾಗ, ತಾನು ಮಾತ್ರ ಯಾಕೆ ಹೊರಗಡೆ ಇರಬೇಕು ?

"ನಾನೂ ಒಳಗೆ ಬರ್ತೀನಿ "

ತಾಯಿ ಅವನನ್ನು ಜಗುಲಿಯಿಂದ ಇಳಿಸಿದಳು. ಅವನು ಅಂಬೆಗಾಲಿಡುತ್ತಾ ಒಳಗೆ ಹೋದ. ಇದನ್ನು ನೋಡಿದ ಶಂಕರರ ಕಣ್ಣುಗಳಲ್ಲಿ ನೀರು ತುಂಬಿತು.

ಮೂವತ್ತು ವರ್ಷಗಳ ಮುಂಚೆ ಮನೆ ಹೇಗೆ ಇತ್ತೋ ಈಗಲೂ ಅದೇ ಸ್ಥಿತಿಯಲ್ಲೇ ಇತ್ತು. ದೊಡ್ಡ ವರಾಂಡ, ನಡುಮನೆಯಲ್ಲಿ ಉಯ್ಯಾಲೆ, ಅವರ ತಂದೆ ರಾಮಚಂದ್ರ ದೀಕ್ಷಿತರು ಊಟ ಮಾಡಿದ ಮೇಲೆ ಈ ಉಯ್ಯಾಲೆಯಲ್ಲೇ ಕುಳಿತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದುದು ರೂಢಿ. ಈಗ ಅವರ ಚಿತ್ರ ಮಾತ್ರ ಗೋಡೆಯಲ್ಲಿತ್ತು.

ತಾವು ಹೊರಹೋಗುವುದಕ್ಕೆ ಕಾರಣವಾಗಿದ್ದ ಆ ಸಂಭವ, ಅವರ ಮನಃ ಪಟಲದಲ್ಲಿ ಮಿಂಚಿತು.

ಅವರ ತಂದೆ ಸಂಧ್ಯಾವಂದನೆಗೆಂದು ಕೈಯಲ್ಲಿ ಚೆಳ್ಳಿಲೋಟ ಹಿಡಿದು ನಿಂತಿದ್ದಾರೆ : ಅವರ ಕಣ್ಣುಗಳಲ್ಲಿ ಕೋಪದ ಕಿಡಿ ಹಾರುತ್ತಿದೆ.

"ಹಾಗಾದರೆ ನೀನು ಮದುವೆ ಮಾಡಿಕೊಳ್ಳಲ್ಲ ಅಂದರೆ ಬೇರೆ ಏನು ಮಾಡುತ್ತೀ ? ಸೂಳೆಯನ್ನು ಇಟ್ಟುಕೊಳ್ಳುತ್ತೀಯಾ ?...."

ತಂದೆಯ ಕ್ರೂರವಾದ ಅನಾಗರಿಕವಾದ ಈ ಪ್ರಶ್ನೆಗೆ ತಾವು ಉತ್ತರಿಸಿದ್ದು ಅವರ ನೆನಪಿಗೆ ಬಂದಿದೆ.

"ಅದು ಆಗಾಗ್ಗೆ ನನಗೆ ತೋರುವ ಅವಶ್ಯಕತೆಯನ್ನು ಅವಲಂಬಿಸಿದೆ. ಹೆಣ್ಣೇ ಬೇಡ ಎಂದು ನನಗನ್ನಿಸಿದರೆ ಹಾಗೆ ಇರಲೂ ನನ್ನಿಂದ ಸಾಧ್ಯ."

"ಥೂ ಬಾಯಿಮುಚ್ಚು. ಇಂಗ್ಲೀಷಿನಲ್ಲಿ ನಾಲ್ಕು ಪುಸ್ತಕ ಓದಿ ಬೊಗಳುತ್ತಾ ಇದ್ದೀಯಾ. ನಾನು ಹೇಳಿದ ಹಾಗೆ ಕೇಳ್ತೀಯೋ, ಇಲ್ಲವೊ ?

"ನೀವು ಏನು ಬೇಕಾದರೂ ತಿಳಿದುಕೊಳ್ಳಬಹುದು. ನನ್ನ ಮನಸ್ಸಿಗೆ ವಿರುದ್ಧ ವಾಗಿ ನಾನು ಯಾವ ಕೆಲಸವನ್ನೂ ಮಾಡುವುದಿಲ್ಲ."

"ಹಾಗಾದರೆ ನೀನು ಈ ಮನೆಯಲ್ಲಿ ಇರಕೂಡದು. ಹೊರಗೆ ಹೋಗು...."

ಗಣೇಶನಿಗೆ ಆಗ ಹದಿನೈದೊ–ಹದಿನಾರೊ ವರ್ಷ. ಬಾಗಿಲಿಗೆ ಓಡಿಬಂದು ತಮ್ಮ ಕಾಲುಗಳನ್ನು ತಬ್ಬಿಕೊಂಡಿದ್ದಾನೆ.

"ಅಣ್ಣಾ, ಹೊರಟುಹೋಗ್ತೀಯಾ? ಹೋಗಬೇಡ, ಅಣ್ಣಾ ಹೋಗ್ಬೇಡ...."

ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡ ಆ ದುಃಖದಲ್ಲೂ, ಕಾಠಿಣ್ಯಕ್ಕೂ ಮುಂಗೋಪಕ್ಕೂ ಹೆಸರಾದ ತನ್ನ ತಂದೆ ನಿರ್ಮಿಸಿದ್ದ ಆ ಕಠಿಣ ಪರಿಸ್ಥಿತಿ, ಇಬ್ಬರ ನಡುವೆ ಸೋದರ ಪ್ರೇಮಕ್ಕೂ ಮಿಗಿಲಾದ ಒಂದು ಬಾಂಧವ್ಯವನ್ನು ಬೆಸೆದಿದೆ.

"ಗಣೇಶಾ....ಒಳಗೆ ಬಂದು ಸಂಧ್ಯಾವಂದನೆ ಮಾಡುತ್ತೀಯೋ, ಇಲ್ಲವೊ?"

ಪರಿತಾಪವಾಗಿ ತನ್ನನ್ನೇ ನೋಡುತ್ತಾ ತಮ್ಮ ಒಳಗೆ ಹೋಗಿದ್ದು, ಇನ್ನೂ ಅವರ ಮನಸ್ಸಿನಿಂದ ಮರೆಯಾಗಿರಲಿಲ್ಲ.

ಶಂಕರರ ಮನಸ್ಸಿಗೆ ಚುಚ್ಚಿದಂತಾಯಿತು. ತಮ್ಮ ಸ್ನೇಹವನ್ನೂ, ಪ್ರೀತಿಯನ್ನೂ ಎದುರು ನೋಡಿ ಬಾಳಬೇಕಿದ್ದ ತಮ್ಮ ತಮ್ಮನನ್ನು ಬಿಟ್ಟುಹೋಗಿದ್ದು ನ್ಯಾಯವೇ? 'ಮನೋಧರ್ಮ' ಎಂದು ಹೇಳಿಕೊಂಡು ಮೂವತ್ತು ವರ್ಷ ಪ್ರಪಂಚವನ್ನೆಲ್ಲಾ ಸುತ್ತಿಕೊಂಡಿದ್ದು ಸ್ವಾರ್ಥದ ಮುಸುಕಿನಲ್ಲೇ ತಂದೆ ನಿಧನರಾದ ಸುದ್ದಿ ಅವರು ಹೋಗಿ ಎರಡು ವರ್ಷಗಳ ಬಳಿಕ ಕಲ್ಕತ್ತಾದಲ್ಲಿ ಯಾರ ಮುಖಾಂತರವೊ ಅರಿತಾಗ, ಮಾಂಗುಡಿಗೆ ಹೋಗಿ ತಮ್ಮನನ್ನು ನೋಡಬೇಕೆಂದು ಅವರು ಎಣಿಸಿದ್ದು ನಿಜ ಆದರೆ ಅನಿರೀಕ್ಷಿತವಾದ ಹಲಕೆಲವು ಕಾರಣಗಳಿಂದ ಅದು ನೆರವೇರಲಿಲ್ಲ. ಈಗ ತಮ್ಮನನ್ನು ಎದುರಿಸಿ ನೋಡಲು ತಮಗೆ ಧೈರ್ಯವಿಲ್ಲವಲ್ಲ ಎಂದು ನೆನೆದಂತೆ ಅವರ ಮನಸ್ಸು ಸಂಕೋಚಪಟ್ಟಿತು.

"ಬಾ ಅಣ್ಣಾ, ಬಾ....ಇಲ್ಲಿ ಉಯ್ಯಾಲೆಯಲ್ಲಿ ಕೂತುಕೊ...."

ಶಂಕರರು ತಲೆಯೆತ್ತಿ ನೋಡಿದರು. ದೇಹ ಪೂರ ಅಲಂಕರಿಸಿದ್ದ ವಿಭೂತಿ, ಪಂಚಾಂಗವನ್ನು ನೋಡಿ ಮಾಡಿಕೊಳ್ಳುವುದರಿಂದ ಬೆಳೆದ ನಾಲ್ಕು ದಿನದ ಗಡ್ಡ, ಪಿಳ್ಳಂಜುಟ್ಟು, ಗಣೇಶನ್ ನಿಂತಿದ್ದ ನಿಲುವು, ತಾನು ಆ ಮನೆಗೆ ಅನ್ಯನೆಂಬ ಭಾವನೆಯನ್ನು ಇನ್ನೂ ಹೆಚ್ಚಿಸಿತು.

ಉಯ್ಯಾಲೆಯ ಪಕ್ಕದಲ್ಲೇ—ಗೋಡೆಯಲ್ಲಿದ್ದ ನಿಲುವುಗನ್ನಡಿಯಲ್ಲಿ ತಮ್ಮ ಪ್ರತಿಬಿಂಬವನ್ನು ನೋಡಿಕೊಂಡರು. ಕ್ರಾಪ್ ಮಾಡಿದ ನರೆತ ಕೂದಲು, ಮುಂಭಾಗ ಉದುರಲು ಪ್ರಾರಂಭವಾಗಿತ್ತು. ಎಡಬಿಡದೆ ಸಿಗರೇಟ್ ಸೇದಿದ್ದರ ಫಲವಾಗಿ ಕಪ್ಪಾದ ತುಟಿಗಳು. ಕಾಲರಿಲ್ಲದ ಉದ್ದತೋಳಿನ ಅಂಗಿ.

"ಏನು ಅಣ್ಣಾ. ಕೂತುಕೊ."

ಶಂಕರನ್ ಉಯ್ಯಾಲೆಯಲ್ಲಿ ಕುಳಿತರು. ಅಷ್ಟರಲ್ಲಿ ಗಣೇಶನ್ ಮಕ್ಕಳು ಎಲ್ಲಾ ಅಲ್ಲಿ ಸೇರಿದರು.

ಮೂರು ವರ್ಷದ ಹೆಣ್ಣುಮಗುವೊಂದು, ಬಹುಶಃ ಅದೇ ಕಡೆ ಮಗುವಿರ ಬೇಕು ಬೆರಳನ್ನು ಚೀಪುತ್ತಾ ಅವರನ್ನು ನೋಡಿತು.

"ಬಾಮ್ಮ, ಬಾ...ಹತ್ತಿರ ಬಾ. ನಿನ್ನ ಹೆಸರೇನು?"

ಶಂಕರನ್ ಸಹಜವಾಗಿರಲು ಯತ್ನಿಸಿದರು. ಗಣೇಶನೂ ಮೂವತ್ತು ವರ್ಷಗಳ ನಂತರ ನಡೆದಿರುವ ಅತಿಶಯವನ್ನು ಕಂಡು ಆಶ್ಚರ್ಯಪಟ್ಟವರಂತೆ ತೋರಿಸಿಕೊಳ್ಳಲಿಲ್ಲ. ತಮ್ಮನ ಮನೋದಾರ್ಢ್ಯ ಅವನನ್ನು ವಿಸ್ಮಯಗೊಳಿಸಿತು.

"ದೊಡ್ಡಪ್ಪನಿಗೆ ನಿನ್ನ ಹೆಸರು ಹೇಳಮ್ಮಾ...." ಎಂದರು ಗಣೇಶನ್.

"....ಮ್ಮು...."

"ಏನು? 'ಮ್ಮು' ನಾ ಹಾಗಂದರೆ?"

"ಅಮ್ಮು ಅಂತ ಹೇಳ್ತಿದಾಳೆ" ಎಂದು ಅದನ್ನು ವಿವರಿಸಿದಳು ವೀನಾ.

"ಅಮ್ಮುನಾ?... ಅಲಮೇಲು ಅಮ್ಮನ ಹೆಸರು" ಎಂದು ಹೇಳಿ ಜ್ಞಾಪಿಸಿಕೊಂಡವರು ತಮ್ಮನ ಮುಖವನ್ನು ನೋಡಿದರು.

ಗಣೇಶನ್ ಬಾಯಿಬಿಟ್ಟು ಏನೂ ಹೇಳದೆ ಸುಮ್ಮನೆ ತಲೆಯಾಡಿಸಿದರು. ಅವರ ಮುಖದಲ್ಲಿದ್ದ ಶಾಂತಿ ಶಂಕರರ ಮನಸ್ಸಿನಲ್ಲಿ ಸಂಕೋಚವನ್ನುಂಟು ಮಾಡಿತು.

"ಬಾಬುಗೆ ತಾತನ ಹೆಸರು ಇಟ್ಟಿದ್ದಾರೆ. ರಾಮಚಂದ್ರ" ಎಂದು ಹೇಳಿದಳು ವೀನಾ

ಬಾಬು ಎಲ್ಲಿ? ಅವನು ನಡುಮನೆಯಲ್ಲಿ ಕಂಬಕ್ಕೆ ಒರಗಿ ತನ್ನನ್ನೇ ನೋಡುತ್ತಿರುವುದನ್ನು ಶಂಕರನ್ ಗಮನಿಸಿದರು.

ಅವರು ಎದ್ದು ಹೋಗಿ ಅವನ ಪಕ್ಕದಲ್ಲಿ ಕುಳಿತರು.

"ಏನು ಬಾಬು, ಹಾಗೆ ನೋಡುತ್ತಿ? ನಾನೇನು ಕರಡಿಯೋ, ಸಿಂಹವೋ, ಹುಲಿಯೋ...."

"ನನಗೆ ಮಾತ್ರ ನಿಮ್ಮತರ ಕಾಲಿದ್ದಿದ್ದರೆ ನಾನೂ ನಿಮ್ಮ ತರನೇ ಓಡಿ ಹೋಗುತ್ತಿದ್ದೆ...."

ಈ ಮಾತು ಅಲ್ಲಿದ್ದವರನ್ನೆಲ್ಲಾ ಚಕಿತಗೊಳಿಸಿತು.

"ಬಾಬು...." ಎಂದು ಗದರಿಸಿದರು ಗಣೇಶನ್.

ಒಂದು ಕ್ಷಣದ ಚಕಿತದಿಂದ ಶಂಕರನ್ ಸಾವರಿಸಿಕೊಂಡು ಬಾಬುವಿನ ಕೈಗಳನ್ನು ಹಿಡಿದು ನಗುತ್ತಾ ಕೇಳಿದರು.

"ಎಲ್ಲಿಗೆ ಓಡಿಹೋಗುತ್ತಿ ?...."

"ಅಲ್ಲಿಲ್ಲಾ"....ಎಂದು ಗಗನದೆಡೆಗೆ ಕೈತೋರಿಸಿದನು ಬಾಬು.

"ಸರಿ ಅಣ್ಣಾ....ಸ್ನಾನಮಾಡಿಕೊಂಡು ಬಾ. ಊಟ ಮಾಡೋಣ."

ಆಗ ನಡುಮನೆಯ ಪಕ್ಕದಲ್ಲಿದ್ದ ಕೋಣೆಯಿಂದ ಒಬ್ಬಳು ಹುಡುಗಿ ಬಂದಳು. ಹದಿನೆಂಟು ವರ್ಷವಿರಬಹುದು ಜಡೆ ಹೆಣೆಯದ ಕೂದಲು ನೆಲವನ್ನು ಮುಟ್ಟುತ್ತಿತ್ತು. ಅವಳು ಶಂಕರರನ್ನು ನೋಡಿ ನಸುನಕ್ಕಳು. "ಕಡೆಗಾದರೂ ಮನೆಯನ್ನು ಜ್ಞಾಪಿಸಿಕೊಂಡು ಬಂದರಲ್ಲ ದೊಡ್ಡಪ್ಪಾ."

ತಮ್ಮನಿಗೆ ಎಷ್ಟು ಮಕ್ಕಳು ?

"ಇವಳೇ ದೊಡ್ಡವಳು, ಉಮಾ" ಎಂದರು ಗಣೇಶನ್

"ಉಮಾ ತಲೆ ಬಾಚಿಕೊ" ಎಂದು ಅಡುಗೆಮನೆಯಿಂದ ಆಜ್ಞೆ ಬಂದು.

"ಇದೇ ಚೆನ್ನಾಗಿದೆ. ಯಾಕೆ ತಲೆಬಾಚಿಕೋಬೇಕು ? ಫ್ಯಾಷನ್ ಎನ್ನುವುದು ಸಿಟಿಯಲ್ಲಿ ಇರುವವರಿಗೆ ಮಾತ್ರನಾ ?....ನಿನಗೆ ಹೇಗೆ ಇಷ್ಟವೊ ಹಾಗೆ ಇರಮ್ಮಾ...." ಎಂದು ಹೇಳಿ ಎದ್ದು ಉಮಾಳ ತೋಳನ್ನು ತಟ್ಟಿದರು ಶಂಕರನ್.

ಉಮಾ ಕಳವಳದಿಂದ ತಂದೆಯ ಮುಖವನ್ನು ನೋಡಿದಳು. ಅವರು ತಲೆ ತಗ್ಗಿಸಿದ್ದರು. ಶಂಕರನ್ ಮುಂದುವರಿಸಿದರು !" ಇಲ್ಲಿ ನೋಡು, ಹಣೆಗಿಟ್ಟುಕೊ. ಅದು ಇಲ್ಲದಿದ್ದರೆ ಚೆನ್ನಾಗಿರುವುದಿಲ್ಲ ! ಮಿಕ್ಕಿದ್ದೆಲ್ಲಾ ಸರಿ !...."

"ಅಣ್ಣಾ, ಸುಮ್ಮನಿರು....ಒಂದೂ ಗೊತ್ತಿಲ್ಲದೆ ಮಾತಾಡಬೇಡ" ಎಂದು ಹೇಳಿದ ಗಣೇಶನ ಗಂಟಲು ಗದ್ಗದಿತವಾಗಿತ್ತು. ಕಣ್ಣಲ್ಲಿ ನೀರು ತುಳುಕಿತು.

ಶಂಕರರಿಗೆ ಏನೂ ಅರ್ಥವಾಗಲಿಲ್ಲ. ತಮ್ಮ ಅಳಲು ಕಾರಣವೇನು ? ಉಮಾಳನ್ನು ಕೇಳೋಣವೆಂದರೆ ಅವಳು ಅಲ್ಲಿಲ್ಲ. ಒಳಗೆ ಹೋಗಿಬಿಟ್ಟಳು.

"ಏನಾಯಿತು ?....ಗಣೇಶ ಯಾಕೆ ಅಳುತ್ತಿ....?"

"ಉಮಾ ವ್ಯರ್ಥಳಾಗಿ ಎರಡು ವರ್ಷವಾಯಿತು."

ಬಾಬುವನ್ನು ನೋಡಿದ ದಿಗ್ಭ್ರಮೆ ನೀಗುವಷ್ಟರಲ್ಲಿ ಮತ್ತೊಂದು ಏಟು ! ಅವರ ದೇಹ ನಡುಗಿತು ಅವರು ಉಯ್ಯಾಲೆಯ ಸರಪಳಿಯನ್ನು ಹಿಡಿದುಕೊಂಡರು. ದೊಡ್ಡಪ್ಪನನ್ನು ಇದುವರೆಗೂ ನೋಡುತ್ತಿದ್ದ ಬಾಬು ತಿರುಗಿ ಗಗನವನ್ನು ನೋಡಲು ಆರಂಭಿಸಿದ.

ಶ್ರೀಮತಿ ಮಂದಾಕಿನಿರಾವ್

(ಮುಂದುವರಿಯುವುದು)

ಪುಸ್ತಕ ವಿಮರ್ಶೆ

ಯಮಧರ್ಮ—ಮಳಲಿ ವಸಂತಕುಮಾರ್, ಪಂಪ ಪ್ರಕಾಶನ, ೧೭, ವಿಶ್ವವಿದ್ಯಾನಿಲಯದ ವಸತಿಗಳು, ಪಂಪಾಪತಿ ರಸ್ತೆ, ಸರಸ್ವತೀಪುರಂ, ಮೈಸೂರು-೯. ಪುಟ: ೫೮; ಮೊದಲ ಮುದ್ರಣ: ಜೂನ್ ೧೯೮೪; ರೂ. ೫-೦೦.

ಮಳಲಿ ವಸಂತಕುಮಾರರ 'ಯಮಧರ್ಮ' ಒಂದು ಪೌರಾಣಿಕ ನಾಟಕ. ಯಮನ ಧರ್ಮವನ್ನು ಹೊಸ ದೃಷ್ಟಿಯಿಂದ ಪರಿಶೀಲಿಸಲು ಹೊರಟ ಲೇಖಕರು ಈ ಪುಟ್ಟ ನಾಟಕದಲ್ಲಿ ಪುರಾತನ ವಸ್ತುವಿಗೆ ಹೊಸ ರೂಪವನ್ನು ಕೊಟ್ಟಿದ್ದಾರೆ. ಕುವೆಂಪು ಅವರ 'ಯಮನ ಸೋಲು' ಇವರಿಗೆ ಸ್ಫೂರ್ತಿ ನೀಡಿದಂತೆ ಕಾಣುತ್ತದೆ.

"ಜೀವನದ ಕೆಲವಾದರೂ ಮೌಲ್ಯಗಳು ಚಿರಂತನವಾಗಿರುವವರೆಗೆ ಪುರಾಣದ ಹಳೆಯ ವಸ್ತುಗಳು ಸಾಹಿತ್ಯದಲ್ಲಿ ಹೊಸ ರೂಪ ಪಡೆಯುವುದು ಅನಿವಾರ್ಯವಾಗುತ್ತದೆ" (ಅರಿಕೆ) ಎಂಬ ಅಭಿಪ್ರಾಯ ಈ ನಾಟಕದ ರಚನೆಗೆ ಪ್ರೇರಣೆ ಎನಿಸುತ್ತದೆ. ಹಳೆಯ ವಸ್ತುವಿಗೆ ನವೀನ ರೂಪ ಕೊಡುವಲ್ಲಿ ವಸಂತಕುಮಾರರು ಯಶಸ್ವಿಯಾಗಿದ್ದಾರೆ. ಆಕಾಶವಾಣಿ ಕಾರ್ಯಕ್ರಮಕ್ಕಾಗಿ ಬರೆದ ಈ ನಾಟಕ ಶ್ರವ್ಯರೂಪಕವಾಗಿ ಮಾತ್ರ ಉಳಿಯಬಾರದೆಂಬ ಉದ್ದೇಶದಿಂದ ನಾಟಕಕಾರರು ಮೂರು ದೃಶ್ಯಗಳನ್ನು ಸೇರಿಸಿ "ಪೂರ್ಣಪ್ರಮಾಣದ ರಂಗನಾಟಕ"ವನ್ನಾಗಿ ಬದಲಾಯಿಸಿದ್ದಾರೆ.

ಯಮನ ಪಾತ್ರದ ಮೇಲೆ ನಾಟಕವೆಲ್ಲಾ ಕೇಂದ್ರೀಕೃತವಾಗಿದೆ. ಅಚಲ ಮನಸ್ಸಿನ ಯಮ ಕ್ರಮೇಣ ದ್ವಂದ್ವಕ್ಕೆ ಒಳಗಾಗಿ ಕೊನೆಗೆ ಕರುಣಾನ್ವಿತ ವ್ಯಕ್ತಿಯಾಗುತ್ತಾನೆ. ಯಮ ಯಮಧರ್ಮನಾಗಿ ಜೀವನಧರ್ಮದ ಬಗೆಗೂ ಯೋಚಿಸಿ ಸಾವಿತ್ರಿಯ ಗುಣಶೀಲಗಳಿಗೆ ಮೆಚ್ಚಿ ಆಕೆ ಬೇಡದಿದ್ದರೂ ತಾನಾಗಿಯೇ ವರ ನೀಡುತ್ತಾನೆ. ಇದು ಪುರಾಣದ ಕಥೆಗಿಂತ ಬೇರೆಯದೇ ರೀತಿಯ ಮಾರ್ಪಾಡು.

ನಾಟಕದ ನಾಲ್ಕನೆಯ ದೃಶ್ಯ ಪೂರ್ಣವಾಗಿ ಲೇಖಕರದೇ ಸೃಷ್ಟಿ. ಯಮದೂತ ಸತ್ಯವಾನನ ಪ್ರಾಣವನ್ನು ಸೆಳೆಯಲಾರದೆ ಹಿಂದಿರುಗುತ್ತಾನೆ. ಮೂರ್ಛೆಯಿಂದ ಎಚ್ಚರಗೊಂಡ ಸತ್ಯವಾನ ಸಾವಿತ್ರಿಯ ಜೊತೆ ಸಂಭಾಷಣೆಗೆ ತೊಡಗುತ್ತಾನೆ. ಈ ಸಂಭಾಷಣೆ ಮಾನವ ಜೀವನದ ಸುಖದುಃಖಗಳ ಸಮ್ಮಿಶ್ರ ಸ್ಥಿತಿಯನ್ನು ಸುಂದರವಾಗಿ ತಿಳಿಸುತ್ತದೆ.

ಭಾಷೆ, ಶೈಲಿ, ಸಂವಿಧಾನದ ದೃಷ್ಟಿಯಿಂದ 'ಯಮಧರ್ಮ' ಒಂದು ಉತ್ತಮ ಶ್ರವ್ಯನಾಟಕವೆನಿಸುತ್ತದೆ.

ಅಕ್ಕ ಮಹಾದೇವಿ

*   *   *

ಸರ್ಪಸಂಸ್ಕೃತಿ—ಲೇಖಕರು ಮತ್ತು ಪ್ರಕಾಶಕರು: ವೀರಗುರು, ವಿಷವೈದ್ಯ ಶಿರೋಮಣಿ, ನಾಗಮಂತ್ರಯೋಗಿ, ಷ॥ ಸ॥ ಬ್ರ॥ ಡಾ॥ ಶ್ರೀ ಶ್ರೀ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳು, ಹಸ್ತಿಕೇರಿ ಮಠ, ತಲಕಾಡು, ಮೈಸೂರು ಜಿಲ್ಲೆ; ಬೆಲೆ: ರೂ. ೨-೦೦; ಪ್ರಥಮ ಮುದ್ರಣ ೧೯೮೪.

'ಪಂಚಲಿಂಗ ದರ್ಶನ' ಖ್ಯಾತಿ ಹೊಂದಿ, ಗಜಾರಣ್ಯ ಕ್ಷೇತ್ರವೆಂದು ಪ್ರಸಿದ್ಧವಾದ ಕಾವೇರಿ ತೀರದ ತಲಕಾಡಿನ ಹಸ್ತಿಕೇರಿ ಮಠದಲ್ಲಿ, ಸದ್ದುಗದ್ದಲವಿಲ್ಲದೆ, ಆಡಂಬರ ಅಹಂಭಾವಗಳಿಲ್ಲದೆ. ಭೂತದಯೆ, ಸೌಜನ್ಯಾದಿ ಸದ್ಗುಣಗಳೇ ಮೂರ್ತಿವೆತ್ತಂತಿರುವ ಶ್ರೀ ಶ್ರೀ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳು ಕೈಗೊಂಡಿರುವ ಕಾಯಕವೆಂದರೆ ಸರ್ಪದ್ರಷ್ಟರಾಗಿ ಮೃತ್ಯುಶಯ್ಯೆಯಲ್ಲಿರುವವರಿಗೆ ಜೀವದಾನವೆಂದರೆ ನಿಮಗೆ ಆಶ್ಚರ್ಯವಾಗಬಹುದು. ಹಾವುಗಳ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡಿ ಸಂಶೋಧನೆ ನಡೆಸುತ್ತಿರುವ ಶ್ರೀ ಸ್ವಾಮೀಜಿಯವರು ಸರ್ಪವಿಷಚಿಕಿತ್ಸಕರು ಹಾಗೂ ನಾಗಮಂತ್ರ ಯೋಗಿಗಳು, ವಿರಕ್ತರು, ಹಸ್ತಿಕೇರಿ ಮಠಾಧ್ಯಕ್ಷರು. ಅಭಯಪ್ರದಾನವೇ ಸದ್ಗುಣಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿರುವಾಗ ಜೀವದಾನದ ಶ್ರೇಷ್ಠತೆಯು ಅಭಿವ್ಯಕ್ತಿಗೆ ನಿಲುಕದ ಮಾತು. ಅಭಿವ್ಯಕ್ತಿಗೆ ನಿಲುಕಲಿ ಅಥವಾ ನಿಲುಕದಿರಲಿ, ಸ್ವಾಮಿಗಳಂತೂ ಸಹಸ್ರಾರು ಮಂದಿಯನ್ನು ಸರ್ಪದ ದಾಡೆಯಿಂದ ಅಸುನೀಗುವವರನ್ನು ಬದುಕಿಸಿದ್ದಾರೆ, ಬದುಕಿಸುತ್ತಿದ್ದಾರೆ ಎಂಬ ಮಾತಂತೂ ಸತ್ಯ. ಇಷ್ಟಾದರೂ ಅಷ್ಟು ಜೀವಗಳನ್ನು ರಕ್ಷಿಸಿದ್ದೇವೆಂಬ ಹೆಮ್ಮೆಯಾಗಲಿ, ಅಹಂಕಾರವಾಗಲಿ ಅವರ ಹತ್ತಿರ ಸುಳಿಯಲು ಅಂಜಿವೆ. ತಮ್ಮ ಚಿಕಿತ್ಸೆಗೆ ಯಾವುದೇ ಸಂಭಾವನೆ ಪಡೆಯದೆ ಕೇವಲ ಜನೋಪಕಾರಾರ್ಥವಾಗಿ ನೀಡುತ್ತಿರುವ ಇವರ ನಿಸ್ವಾರ್ಥಸೇವೆ 'ಕಾಯಕ'ವಲ್ಲದೆ ಮತ್ತೇನು.

ಇಷ್ಟೇ ಅಲ್ಲದೆ ವರ್ಷಕ್ಕೊಮ್ಮೆ ಪ್ರತಿ ವರ್ಷವೂ ತಮ್ಮ ಆಶ್ರಮದಲ್ಲಿ ಸರ್ಪವಿಷಚಿಕಿತ್ಸಾ ಶಿಬಿರವನ್ನೇರ್ಪಡಿಸಿ ತಾವು ಕಲಿತ ವಿದ್ಯೆಯನ್ನು ಉಚಿತವಾಗಿ ಇತರರಿಗೂ ಬೋಧಿಸುತ್ತಿರುವುದು ಮತ್ತೊಂದು ದಾನ. ಸಾಮಾನ್ಯವಾಗಿ ಇಂತಹ ಚಿಕಿತ್ಸೆಗಳನ್ನು ಗೋಪ್ಯವಾಗಿಟ್ಟು ಅದನ್ನು ಇತರರಿಗೆ ಬೋಧಿಸದೆ

ತಮ್ಮ ಕೀರ್ತಿಶಿಖರವನ್ನು ಬೆಳೆಸಿಕೊಳ್ಳಬೇಕೆಂದು ಹವಣಿಸುವುದು ಮಾನವನ ಒಂದು ದೌರ್ಬಲ್ಯ. ಅಂತಹ ದೌರ್ಬಲ್ಯಕ್ಕೆ ಸ್ವಾಮೀಜಿಯವರು ತುತ್ತಾಗಿಲ್ಲ ವೆಂಬುದನ್ನು ತಿಳಿಸಲು ಬಹಳ ಸಂತೋಷವಾಗುತ್ತದೆ.

ಕೇವಲ ಬೋಧನೆಯಷ್ಟೇ ಅಲ್ಲದೆ ತಾವು ಬೋಧಿಸಿದ ವಿಷಯವನ್ನು ಪುಸ್ತಕ ರೂಪದಲ್ಲಿ ತರುವುದರಲ್ಲಿಯೂ ಸಹ ಸ್ವಾಮೀಜಿಯವರು ಮುಂದಾಗಿರುವುದು ಸ್ತುತ್ಯರ್ಹ. ಇವರ ಫಲವೇ 'ಸರ್ಪಸಂಸ್ಕೃತಿ'. ಇದು ಅವರ ಇತ್ತೀಚಿನ ಕೃತಿ. ಸ್ವಾಮೀಜಿಯವರು ಮಹಾರಾಷ್ಟ್ರದ ನಾಸಿಕ್ ಕನ್ನಡ ಸಂಘಕ್ಕೆ ಭೇಟಿ ನೀಡಿ ಸರ್ಪಸಂಸ್ಕೃತಿಯ ಬಗ್ಗೆ ಪ್ರವಚನ ನೀಡಿದ್ದೇ ಈ ಕಿರುಹೊತ್ತಿಗೆಯ ಉದಯಕ್ಕೆ ಕಾರಣವಾಯಿತು.

ಸಾಮಾನ್ಯವಾಗಿ ಹಾವಿಗೆ ಹೆದರದ ವ್ಯಕ್ತಿಯೇ ಇಲ್ಲ. ಅವನು ಎಂತಹ ಶೂರನಾಗಿರಲಿ, ಧೀರನಾಗಿರಲಿ, ಪಂಡಿತನಾಗಿರಲಿ, ಆಧ್ಯಾತ್ಮ ಜೀವಿಯಾಗಿರಲಿ, 'ಹಾವು' ಎಂದ ಕೂಡಲೇ ಎರಡು ಹೆಜ್ಜೆಯಾದರೂ ಹಿಂದೆ ಸರಿಯುತ್ತಾನೆ. ಇದಕ್ಕೆ ಕಾರಣ ಅದು ಹೊಂದಿರುವ ಪ್ರಚಂಡ ವಿಷ. ತನ್ನ ವಿಷದಂತಗಳಿಂದ ಮಾನವನನ್ನು ಕಚ್ಚಿ ಮೃತ್ಯುವನ್ನಪ್ಪುವಂತೆ ಮಾಡಿದ್ದರಿಂದ ಅದರ ಬಗ್ಗೆ ಮೂಡಿದ ಭಯವೇ ಭಕ್ತಿಯಾಗಿ ಮಾರ್ಪಟ್ಟು ಮಾನವ ಅದನ್ನು 'ಮೃತ್ಯು ದೇವತೆ'ಯೆಂದು ಪರಿಗಣಿಸಿ ಪೂಜಿಸಲು ಆರಂಭಿಸಿದ.

ಸರ್ಪವನ್ನು ಕೇವಲ ಭಾರತೀಯರೇ ಅಲ್ಲ, ಪಾಶ್ಚಿಮಾತ್ಯರೂ ಭಕ್ತಿಗೌರವ ಗಳಿಂದ ಪೂಜಿಸುತ್ತಾರೆ. ಆದರೆ ಭಾರತೀಯರಲ್ಲಿ ಸರ್ಪಗಳ ಬಗ್ಗೆ ಇರುವಷ್ಟು ಪೂಜ್ಯಭಾವನೆ ಅವರಲ್ಲಿಲ್ಲದಿರುವುದು ಆಶ್ಚರ್ಯದ ಸಂಗತಿಯೇನಲ್ಲ. ವೇದ, ಆಗಮ, ಪುರಾಣೇತಿಹಾಸಗಳೇ ಆದಿಯಾಗಿ ನಮ್ಮ ಪ್ರಾಚೀನ ಭಾರತೀಯ ಸಂಸ್ಕೃತಿಯು ಸರ್ಪಗಳ ಬಗ್ಗೆ ವಿಶೇಷವಾದ ನಿಲುವನ್ನು ತಳೆದಿದೆ. ಭೂಮಿ ಯನ್ನು ಹೊತ್ತಿರುವವನೇ ಆದಿಶೇಷನೆಂಬ ಸರ್ಪ. ವಿಷ್ಣುವಿನ ಹಾಸಿಗೆ ಹಾವು, ಶಿವನ ಕಂಠಾಭರಣ ನಾಗ. ಗಣಪತಿಯ ಮೌಂಜೀಬಂಧ ಸರ್ಪ. ನಾಟ್ಯಶಾಸ್ತ್ರ ದಲ್ಲಿ ರಂಗಮಂಟಪದ ಬಾಗಿಲುಗಳನ್ನು ಕಾಯುವವನು ವಾಸುಕಿ.

ಪುರಾಣಗಳಲ್ಲಂತೂ ಸರ್ಪಗಳ ಬಗ್ಗೆ ಅನೇಕ ಕಥೆಗಳಿವೆ. ಮಕ್ಕಳಾಗದಿರಲು 'ಸರ್ಪದೋಷ' ಕಾರಣ. ಸರ್ಪಗಳನ್ನು ಆರಾಧಿಸುವ ಸಂಸ್ಕೃತಿ ಇಂದಿಗೂ ನಮ್ಮಲ್ಲಿ ಪ್ರಚಲಿತವಾಗಿದೆ. ಸಂತಾನವಿಲ್ಲದವರು 'ನಾಗಪ್ರತಿಷ್ಠೆ' ಮಾಡಿದರೆ ಮಕ್ಕಳಾಗುತ್ತದೆಂಬ ಭಾವನೆ ತಳೆದಿದ್ದಾರೆ. ಸರ್ಪವನ್ನು 'ಸುಬ್ರಹ್ಮಣ್ಯಸ್ವಾಮಿ' ಎಂದು ಕರೆದು ಪೂಜಿಸುತ್ತಾರೆ. ಶ್ರಾವಣ ಶುದ್ಧ ಪಂಚಮಿಯು 'ನಾಗಪಂಚಮಿ'

ಎಂಬ ಹೆಸರಿನಿಂದಲೂ ಮಾರ್ಗಶಿರ ಶುದ್ಧ ಷಷ್ಠಿಯು 'ಸುಬ್ಬರಾಯನ ಷಷ್ಠಿ' ಎಂಬ ಹೆಸರಿನಿಂದಲೂ ಪ್ರಖ್ಯಾತವಾಗಿದೆ. ಅಂದು ನಾಗಗಳಿಗೆ ಭಯಭಕ್ತಿಗಳಿಂದ 'ತನಿ ಎರೆಯುವ' ಕಾರ್ಯಕ್ರಮವನ್ನು ಸ್ತ್ರೀಪುರುಷರೇ ಆದಿಯಾಗಿ ಆಚರಿಸುತ್ತಾರೆ. ನಾಗರಹಾವನ್ನು ಹೊಡೆದರೆ ಗಂಡುಮಕ್ಕಳಾಗುವುದಿಲ್ಲವೆಂದೂ, ಮೈಯಲ್ಲಿ 'ನಾಗರು' ಆಗುತ್ತದೆಂದೂ ನಂಬುತ್ತಾರೆ. 'ನಾಗಮಂಡಲ'ವೆಂಬ ವಿಶೇಷ ರೀತಿಯ ನಾಗಪೂಜೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇಂದಿಗೂ ಪ್ರಚಲಿತವಾಗಿದೆ. ದ್ರಾವಿಡರ ಸರ್ಪಪೂಜೆಯನ್ನು ಆರ್ಯರು ಪುರಸ್ಕರಿಸಿದರೆಂಬುದಕ್ಕೆ ಇವೆಲ್ಲವೂ ದೃಷ್ಟಾಂತವಾಗಬಲ್ಲದು.

ಈ ಕಿರುಹೊತ್ತಿಗೆಗೆ ಲೇಖಕರು 'ಸರ್ಪಸಂಸ್ಕೃತಿ' ಎಂದು ಇಟ್ಟಿರುವ ಹೆಸರು ನಿಜಕ್ಕೂ ಅನ್ವರ್ಥವಾಗಿದೆ. ಸರ್ಪಕ್ಕೆ ಸಂಬಂಧಿಸಿದ ಒಂದು ಪುಟ್ಟ ಕೈಪಿಡಿಯಂತಿದೆ ಈ ಪುಸ್ತಕ. ಇದರಲ್ಲಿ ಲೇಖಕರು ಸರ್ಪಾರಾಧನೆ, ಸರ್ಪಗಳ ಹಿನ್ನೆಲೆ, ಪುರಾಣೇತಿಹಾಸಗಳಲ್ಲಿ ಸರ್ಪ, ಸರ್ಪಯಾಗ, ಸರ್ಪ ಮತ್ತು ದೇವತೆಗಳು, ಸಂಸ್ಕೃತಿ–ಸಂಪ್ರದಾಯಗಳಲ್ಲಿ ಸರ್ಪ, ಇತಿಹಾಸ ಮತ್ತು ಸರ್ಪಗಳು, ಜಾನಪದ ಕಲ್ಪನೆಯ.ಲ್ಲಿ ಸರ್ಪಗಳು, ಮಾನವ ಮತ್ತು ಸರ್ಪ, ಸರ್ಪಗಳ ಅನೇಕ ರೂಪಗಳ ಬಗ್ಗೆ ಸಂಶೋಧನೆ, ಸರ್ಪ ಮತ್ತು ಸರ್ಪಚಿಹ್ನೆಯ ಕುರುಹುಗಳು, ವಿವಿಧ ದೇಶಗಳ ಸರ್ಪಸಂಸ್ಕೃತಿಯ ಐತಿಹ್ಯಗಳು, ಭಾರತದ ವಿವಿಧ ರಾಜ್ಯಗಳಲ್ಲಿ ಸರ್ಪ ಸಂಸ್ಕೃತಿ, ಹಾವಿನ ಬಗೆಗಿರುವ ಕಥೆಗಳು, ಹಿಂದೂಗಳಲ್ಲಿ ಹಾವಿನ ಸ್ಥಾನಮಾನ, ದಕ್ಷಿಣಕನ್ನಡದಲ್ಲಿ ಸರ್ಪಸಂಸ್ಕೃತಿ, ನಾಗಮಂಡಲದ ಆಖ್ಯಾನ, ಕ್ರೈಸ್ತಧರ್ಮದ ಸರ್ಪಸಂಸ್ಕೃತಿ, ಸರ್ಪಸಂಸ್ಕೃತಿ ಮತ್ತು ನಾಗಾರಾಧನೆ ಬಗೆಗಿನ ಹೆಚ್ಚಿನ ಮಾಹಿತಿಗಳನ್ನು ಈ ಕಿರುಹೊತ್ತಿಗೆಯಲ್ಲಿ ಅಡಗಿಸಿದ್ದಾರೆ. ಸರ್ಪಗಳ ಬಗ್ಗೆ ಹೆಚ್ಚು ಅಧ್ಯಯನ ಮಾಡಬೇಕೆನ್ನುವವರಿಗೆ ಈ ಪುಸ್ತಕವು ದಾರಿದೀವಿಗೆಯಾಗಬಲ್ಲದು.

ಸರ್ಪಪೂಜೆಯ ಕುರುಹು ಋಗ್ವೇದದಲ್ಲಿಲ್ಲವೆಂದೂ ಅದು ಅನಾರ್ಯರದು ಎಂಬ ವಾದವು 'The land of Serpents' ಎಂಬ ಗ್ರಂಥದ ೧೫೩ನೇ ಪುಟದಲ್ಲಿದೆಯೆಂದು ಗ್ರಂಥಕರ್ತರು ಉಲ್ಲೇಖಿಸಿ "ಅದು ನಿರಾಧಾರವೆಂಬುದನ್ನು ನಾವು ಮೊದಲೇ ತಿಳಿಸಿದ್ದೇವೆ" ಎಂದಿದ್ದಾರೆ. ಇದನ್ನು ಒಂದು ಸಾಮಾನ್ಯ ಹೇಳಿಕೆಯಾಗಿ ಬರೆಯುವುದಕ್ಕೆ ಬದಲು ಋಗ್ವೇದದಲ್ಲಿ ಸರ್ಪಗಳ ಬಗ್ಗೆ ಬರುವ ಸೂಕ್ತಗಳನ್ನು ಉಲ್ಲೇಖಿಸಿದ್ದಿದ್ದರೆ ಅವರ ಮಾತಿಗೆ ಪುಷ್ಟಿ ದೊರೆಯುತ್ತಿತ್ತು.

ಕೇವಲ ಋಗ್ವೇದದಲ್ಲೇ ಅಲ್ಲ. ಯಜುರ್ವೇದದಲ್ಲೂ ಸಹ ಸರ್ಪಕ್ಕೆ ಸಂಬಂಧಿಸಿದ ಅನೇಕ ಮಂತ್ರಗಳಿವೆ.

ನಮೋ ಅಸ್ತು ಸರ್ಪೇಭ್ಯೋ ಯೇಕೇಚ ಪೃಥಿವೀಮನು ।
ಯೇ ಅಂತರಿಕ್ಷೇ ಯೇ ದಿವಿ ತೇಭ್ಯಸ್ಸರ್ಪೇಭ್ಯೋ ನಮಃ ॥
ಯೇ ದೋರೋಚನೇ ದಿವೋ ಯೇವಾ ಸೂರ್ಯಸ್ಯ ರಶ್ಮಿಷು ।
ಯೇಷಾ ಮಪ್ಸು ಸದಃಕೃತಂ ತೇಭ್ಯಸ್ಸರ್ಪೇಭ್ಯೋ ನಮಃ ॥

ಇವುಗಳನ್ನು ಉಲ್ಲೇಖಿಸಿ ಇವುಗಳ ಅರ್ಥವನ್ನು ಕೊಡಬಹುದಿತ್ತು.

ಕೊನೆಯಲ್ಲಿ "ಇಷ್ಟೆಲ್ಲಾ ಆದರೂ ಹಾವಿನ ಬಗ್ಗೆ ಮಾನವನಿಗೆ ಕರುಣೆ ಇಲ್ಲ" (ಪುಟ ೧೮) ಎಂದು ಹೇಳಿ ಅದನ್ನು ಅಲ್ಲಿಗೇ ಕೈಬಿಟ್ಟಿದ್ದಾರೆ. ಹಾವಿನ ಬಗ್ಗೆ ಮಾನವನ ನಿಷ್ಕರುಣೆಯನ್ನು ತೋರಿಸುವ ಒಂದೆರಡು ವಾಕ್ಯಗಳನ್ನು ಬರೆಯಬಹುದಿತ್ತು. ಜೀವಸಹಿತ ಹಾವಿನ ಚರ್ಮವನ್ನು ಸುಲಿದ ಮೇಲೆ ಆ ಹಾವು ನಾಲ್ಕು ಗಂಟೆಗಳ ತನಕ ಬದುಕಿರುತ್ತದೆಂಬುದನ್ನು ಕೇಳಿದರೆ ನಿಮ್ಮ ಎದೆ ಝಲ್ಲೆನ್ನಬಹುದು. ಅದರ ಚರ್ಮ ಎಂದಾದರೊಂದು ದಿನ ನಿಮ್ಮ ಕೈಕಿಸೆಯಾಗಿ ನಿಮ್ಮ ಕೈಯನ್ನು ಅಲಂಕರಿಸಬಹುದು. ಕಲ್ಲನಾಗರ ಪೂಜಿಸುವ ನಮ್ಮ ಜನ ನಿಜನಾಗರ ಕಂಡರೆ ಕೊಲ್ಲುಕೊಲ್ಲೆನ್ನುವುದರ ವೈಚಿತ್ರ್ಯದ ಬಗ್ಗೆ ಸ್ವಲ್ಪ ವಿವರಣೆ ನೀಡಬಹುದಿತ್ತು. ಸರ್ಪದ ವಿಷದ ಬಗ್ಗೆ ಏನನ್ನೂ ಹೇಳಿಲ್ಲ. ನಾಗಮಂತ್ರದ ಬಗ್ಗೆ ಕೆಲವು ಮಾಹಿತಿಯನ್ನು ಒದಗಿಸಬಹುದಿತ್ತು.

ಆದರೆ ಸರ್ಪಸಾಹಿತ್ಯದ ಬಗ್ಗೆ ಕನ್ನಡದಲ್ಲಿ ಇದೇ ಮೊದಲ ಹೊತ್ತಿಗೆಯಾಗಿರುವುದು ಒಂದು ವೈಶಿಷ್ಟ್ಯ.

ಯೋಗಾಚಾರ್ಯ ಕೆ. ಕೇಶವಮೂರ್ತಿ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ : : ಮೈಸೂರು-೪

Reg. No. KRNN. 29 / WPP 6 | LICENSE No. 21 LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ನಳಚರಿತ್ರೆಯ ಸಂಗ್ರಹ

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಕನ್ನಡ ಪರಂಪರೆ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು

ತರಿಸಿ ಓದಿರಿ

Edited by R. Boraiah, Printed by H. G. Ramaswamy Iyengar Manager, Karnataka State Adult Education Council Press and Published by Karnataka State Adult Education Council Mysore city (India)